ಕರುನಾಡು ಎಗ್ಸಾಂ.ಇನ್

# ಪ್ರಚಲಿತ ಘಟನೆಗಳು

## ಫೆಬ್ರವರಿ

ADMIN

2013

ಸಂಪರ್ಕಿಸಿ:KARUNADUEXAMS@GMAIL.COM

# ರಾಜ್ಯ

**ಭತ್ತ, ತೊಗರಿ ಗೆ ಪ್ರೋತ್ಸಾಹ ಧನ ಹೆಚ್ಚಿಸಲು ರಾಜ್ಯ ಸಚಿವ ಸಂಪುಟ ತಿರ್ಮಾನ**

ಸಂಕಷ್ಟದಲ್ಲಿರುವ ರೈತರನ್ನು ಕಾಪಾಡುವ ದೃಷ್ಟಿಯಿಂದ ಭತ್ತ ಮತ್ತು ತೊಗರಿಗೆ ಹೆಚ್ಚುವರಿ ಪ್ರೋತ್ಸಾಹ ಧನ ನೀಡಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.

- ಕೇಂದ್ರ ಸರ್ಕಾರ ಈಗಾಗಲೇ ಸಾಧಾರಣ ಮತ್ತು ಉತ್ತಮ ಗುಣಮಟ್ಟದ ಪ್ರತಿ ಕ್ವಿಂಟಲ್ ಭತ್ತಕ್ಕೆ ಕ್ರಮವಾಗಿ ರೂ.1,250 ಮತ್ತು ರೂ.1,280 ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿದೆ. ಈ ಎರಡೂ ಬಗೆಯ ಭತ್ತಕ್ಕೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ರೂ.250 ನೀಡಲಿದೆ.
- ಪ್ರತಿ ಕ್ವಿಂಟಲ್ ತೊಗರಿಗೆ ಕೇಂದ್ರ ಸರ್ಕಾರ ರೂ.3,850 ಕನಿಷ್ಠ ಬೆಂಬಲ ಬೆಲೆ ಘೋಷಿಸಿದೆ. ಇದರೆ ಜೊತೆಗೆ ರಾಜ್ಯ ಸರ್ಕಾರ ರೂ.650 ಹೆಚ್ಚುವರಿ ನೀಡಿ ಖರೀದಿಸಲಿದೆ. ಇದರಿಂದ ತೊಗರಿಗೆ ರೂ.4500 ಹಾಗೂ ಭತ್ತಕ್ಕೆ ರೂ.1500 ಬೆಂಬಲ ಬೆಲೆ ದೊರೆಯಲಿದೆ.

ಸಂಪುಟ ಕೈಗೊಂಡ ಇತರೆ ಮುಖ್ಯ ತೀರ್ಮಾನಗಳು:

- ವಿಜ್ಞಾನ ಶಿಕ್ಷಣಕ್ಕೆ ಕಲಿಕಾ ಕೇಂದ್ರ: ರಾಜ್ಯದಲ್ಲಿ ವಿಜ್ಞಾನ ಶಿಕ್ಷಣ ಉತ್ತಮ ಪಡಿಸುವ ಸಲುವಾಗಿ ಪ್ರತ್ಯೇಕ "ಅಪೆಕ್ಸ್ ಕ್ರಿಯೇಟಿವಿಟಿ ಕ್ಯಾಂಪಸ್" ತೆರೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಅಲ್ಲದೆ, ಅಗಸ್ತ್ಯ ಫೌಂಡೇಶನ್ ಸಹಯೋಗದಲ್ಲಿ ಶಿವಮೊಗ್ಗ, ಬೀದರ್, ವಿಜಾಪುರ ಮತ್ತು ಬಾಗಲಕೋಟೆಯಲ್ಲಿ ವಿಜ್ಞಾನ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು.
- ಸಂಶೋಧನ ವಿವಿ ಸ್ಥಾಪನೆ: ಯಲಹಂಕದಲ್ಲಿ ಸುಮಾರು 50 ಎಕರೆ ಜಾಗದಲ್ಲಿ ಸಾಂಪ್ರಾದಾಯಿಕ ಆರೋಗ್ಯ ವಿಜ್ಞಾನ ಉತ್ತೇಜನಕ್ಕೆ ಸ್ಯಾಮ್ ಪಿತ್ರೋಡಾ ಅವರು ಸ್ಥಾಪಿಸಿರುವ FRLHT ಸಂಸ್ಥೆಯನ್ನು ಸಂಶೋಧನಾ ವಿವಿ ಯಾಗಿ ಪರಿವರ್ತಿಸಲು ಸರ್ಕಾರ ತೀರ್ಮಾನಿಸಿದೆ.

**ವಿಮರ್ಶಕ ಎಚ್.ಎಸ್.ರಾಘವೇಂದ್ರರಾವ್ ಅವರಿಗೆ ಅಂಬಿಕಾತನಯದತ್ತ ಪ್ರಶಸ್ತಿ**

ದ. ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿಯನ್ನು ವಿಮರ್ಶಕ ಎಚ್.ಎಸ್.ರಾಘವೇಂದ್ರರಾವ್ ರವರಿಗೆ ನೀಡಲಾಗಿದೆ. ಬೇಂದ್ರೆಯವರು 118 ನೇ ಜನ್ಮ ದಿನದ ಅಂಗವಾಗಿ ಏರ್ಪಡಿಸಲಾದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗಿದ್ದು, ಪ್ರಶಸ್ತಿಯು ರೂ. 1 ಲಕ್ಷ ನಗದು ಮತ್ತು ಸ್ಮರಣೀಕೆಯನ್ನು ಹೊಂದಿದೆ.

**ಉದ್ಯೋಗ ಬೇಕಾದರೆ ಉಚಿತ ಕರೆ ಮಾಡಿ 1800-425-8040**

ರಾಜ್ಯದಲ್ಲಿ ಇನ್ನೂ ಉದ್ಯೋಗ ಹುಡುಕುವುದು ಸುಲಭವಾಗಲಿದೆ, ಏಕೆಂದರೆ ಕರ್ನಾಟಕ ವೃತ್ತಿಪರ ಮತ್ತು ಕೌಶಲ್ಯ ಅಭಿವೃದ್ಧಿ ಮಂಡಳಿಯ (KVSDC) "ಉದ್ಯೋಗ ಸಿರಿ" ಎಂಬ ಧ್ವನಿ ಮುದ್ರಣ ವ್ಯವಸ್ಥೆಗೆ ಇತ್ತೀಚೆಗೆ ಚಾಲನೆ ನೀಡಲಾಗಿದೆ.

ಉದ್ಯೋಗಸಿರಿ ಬಗ್ಗೆ:

- ದೇಶದಲ್ಲೇ ಪ್ರಥಮ ಬಾರಿಗೆ ರಾಜ್ಯ ಸರ್ಕಾರ ಇಂತಹ ಯೋಜನೆಗೆ ಚಾಲನೆ ನೀಡಿದ್ದು, ಉದ್ಯೋಗ ಆಕಾಂಕ್ಷಿಗಳು ತಮ್ಮ ಮೊಬೈಲ್ ಅಥವಾ ಸ್ಥಿರ ದೂರವಾಣಿಯಿಂದ ಉಚಿತ ಕರೆ ನಂಬರ್ 1800-425-8040 ಗೆ ಕರೆ ಮಾಡುವುದು.
- ಕರೆ ಮಾಡಿದ ಮೇಲೆ ತಮ್ಮ ವಿದ್ಯಾ ಅರ್ಹತೆ, ಅನುಭವ ಮತ್ತಿತ್ತರ ವಿಷಯಗಳನ್ನು ಹೇಳಿದರೆ ಈ ಮಾಹಿತಿಯು ಸ್ವಯಂಚಾಲಿತವಾಗಿ ದಾಖಲಾಗುವುದು ಮತ್ತು ಈ ಅರ್ಹತೆಗೆ ಸಂಬಂಧಿಸಿದಂತೆ ಯಾವುದಾದರು ಉದ್ಯೋಗವಿದ್ದರೆ ಅರ್ಜಿದಾರನಿಗೆ ಮಾಹಿತಿ ರವಾನೆಯಾಗುವುದು.
- ಗ್ರಾಮೀಣ ಅಭ್ಯರ್ಥಿಗಳಿಗೆಂದೆ ಈ ಸೌಲಭ್ಯವನ್ನು ತೆರಿದಿದ್ದು, IBM ಕಂಪನಿ ಮತ್ತು KVSDB ಸಹಭಾಗಿತ್ವದಲ್ಲಿ ಇದನ್ನು ರೂಪಿಸಲಾಗಿದೆ.
- ಇದೇ ಮಾದರಿಯಲ್ಲಿ ರಾಜ್ಯದ ಕಟ್ಟಡ ಕಾರ್ಮಿಕರಿಗೂ ಸಹ ಉಚಿತ ಕರೆ ನಂಬರ್ 1800-425-2838 ಜಾರಿಗೆ ತರಲಾಗಿದ್ದು, ಕಟ್ಟಡ ಕಾರ್ಮಿಕರು ತಮಗೆಂದೆ ಇರುವ ಯೋಜನೆಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಬಹುದಾಗಿದೆ. ಈ ಸೌಲಭ್ಯವು ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಲಭ್ಯವಿದೆ.

**ಬೆಂಗಳೂರು ಮತ್ತು ಚೆನ್ನೈ ನಡುವೆ ಡಬ್ಬಲ್ ಡೆಕ್ ರೈಲು**

ಬೆಂಗಳೂರು ಮತ್ತು ಚೆನ್ನೈ ನಡುವೆ ದಕ್ಷಿಣ ಭಾರತದ ಮೊದಲ ಡಬ್ಬಲ್ ಡೆಕ್ಕರ್ ರೈಲು ಸಂಚಾರಕ್ಕೆ ಕ್ಷಣಗಣನೆ ಆರಂಭವಾಗಿದೆ. ಈಗಾಗಲೇ ಬೋಗಿಗಳು ತಯಾರಾಗಿದ್ದು, ಮುಂದಿನ 45 ದಿನಗಳಲ್ಲಿ ಪರೀಕ್ಷಾರ್ಥ ಸಂಚಾರ ಆರಂಭವಾಗುವುದಾಗಿ ಅಧಿಕೃತ ಮೂಲಗಳು ತಿಳಿಸಿವೆ. ಒಂದು ವೇಳೆ ಪರೀಕ್ಷಾರ್ಥ ಸಂಚಾರ ಯಶಸ್ವಿಯಾದರೆ ಚೆನ್ನೈ ಮತ್ತು ಬೆಂಗಳೂರು ನಡುವಿನ ರೈಲು ಪ್ರಯಾಣ ಮತ್ತಷ್ಟು ಸುಗಮವಾಗಲಿದೆ. ಕಳೆದ ವರ್ಷ ರೈಲ್ವೆ ಬಜೆಟ್ ನಲ್ಲಿ ಈ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು. ದಕ್ಷಿಣ ರೈಲ್ವೆವಲಯ (ತಮಿಳುನಾಡು) ಈ ಅತ್ಯಾಧುನಿಕ ರೈಲು ಸಂಚಾರದ ಹೊಣೆ ಹೊತ್ತುಕೊಂಡಿದ್ದು, ನೈರುತ್ಯ ರೈಲ್ವೆವಲಯ (ಕರ್ನಾಟಕ) ಇದರೊಂದಿಗೆ ಕೈಜೋಡಿಸಿದೆ.

ಡಬ್ಬಲ್ ಡೆಕ್ಕರ್ ಸ್ಪೆಷಲ್:

- 10 ರಿಂದ 12 ಭೋಗಿಗಳನ್ನು ಹೊಂದಿರುವ ಈ ರೈಲಿನಲ್ಲಿ ಸುಮಾರು 1200 ಜನ ಸಂಚರಿಸಬಹುದಾಗಿದೆ. ಜಪಾನ್ ತಂತ್ರಜ್ಞಾನದಿಂದ ತಯಾರಿಸಲಾಗಿರುವ ಈ ರೈಲುಗಳ ಭೋಗಿಗಳು ಕಡಿಮೆ ಭಾರದಿಂದ ಕೂಡಿರುತ್ತವೆ.

ಭಾರತದ ಮೊದಲ ಡಬ್ಬಲ್ ಡೆಕ್ ರೈಲು:

- ಪುಣೆ ಮತ್ತು ಮುಂಬೈ ನಡುವೆ ಸಂಚರಿಸುವ ಸಿಂಹಗಡ್ ಎಕ್ಸ್ ಪ್ರೆಸ್ ಭಾರತದ ಮೊದಲ ಡಬ್ಬಲ್ ಡೆಕ್ಕರ್ ರೈಲು.
- ಭಾರತದ ಮೊದಲ AC ಡಬ್ಬಲ್ ಡೆಕ್ಕರ್ ರೈಲು ಹೌರ ಮತ್ತು ಧನಾಬಾದ್ ನಡುವೆ ನವೆಂಬರ್ 2010 ರಲ್ಲಿ ಸಂಚಾರ ಆರಂಭಿಸಿತು.
- ಅಹಮಬಾದ್ ಮತ್ತು ಮುಂಬೈ ಹಾಗೂ ಜೈಪುರ ಮತ್ತು ದಿಲ್ಲಿ ನಡುವೆ ಸಂಚಾರ ನಡೆಸುತ್ತಿರುವ ರೈಲುಗಳು ಸೇರಿ ಸದ್ಯ ಮೂರು ಡಬ್ಬಲ್ ಡೆಕ್ ರೈಲುಗಳು ಸಂಚಾರ ನಡೆಸುತ್ತಿವೆ.

**ಶಾಲೆಯಿಂದ ಹೊರಗುಳಿದ ಮಕ್ಕಳು ರಾಜಧಾನಿ ಬೆಂಗಳೂರಿನಲ್ಲಿ ಅಧಿಕ**

ಮಕ್ಕಳ ಗಣತಿ ಇತ್ತೀಚೆಗೆ ಹೊರತಂದಿರುವ ಮಾಹಿತಿಯ ಪ್ರಕಾರ ರಾಜ್ಯದ ಇತರೆ ಜಿಲ್ಲೆಗಳಿಗಿಂತ ರಾಜಧಾನಿ ಬೆಂಗಳೂರಿನಲ್ಲಿ ಅತ್ಯಧಿಕ ಮಕ್ಕಳು ಶಾಲೆಯಿಂದ ಹೊರ ಉಳಿದ್ದಿದ್ದಾರೆ ಎಂಬ ಆಘಾತಕಾರಿ ಅಂಶವೊಂದು ಬಹಿರಂಗಗೊಂಡಿದೆ. ಆದರೆ 2012-13ನೇ ಸಾಲಿಗೆ ಹೋಲಿಸಿದರೆ, 2013-14 ನೇ ಸಾಲಿನಲ್ಲಿ ರಾಜ್ಯದಲ್ಲಿ ಶಾಲೆಯಿಂದ ಹೊರ ಉಳಿದಿರುವ ಮಕ್ಕಳ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿರುವುದು ಸಂತಸದ ವಿಷಯ.

ಇತರೆ ಮುಖ್ಯ ಮಾಹಿತಿ

- ಕಳೆದ ವರ್ಷದಂತೆ ಈ ಬಾರಿಯು ಸಹ ಬೆಂಗಳೂರು ನಗರದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಅಧಿಕವಾಗಿದ್ದು, ಬೆಂಗಳೂರು ನಗರ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.
- ಉತ್ತಮ ಶಿಕ್ಷಣ ಸೌಕರ್ಯ, ಮಾನವ ಅಭಿವೃದ್ಧಿ ಮತ್ತಿತರೆ ಸೌಲಭ್ಯಗಳಿಂದ ವಂಚಿತವಾಗಿರುವ ಹೈದಾರಬಾದ್-ಕರ್ನಾಟಕ ಭಾಗದ ಜಿಲ್ಲೆಗಳಿಗಿಂತಲೂ ಬೆಂಗಳೂರು ನಗರದ ಸ್ಥಿತಿ ಶೋಚನೀಯವಾಗಿದೆ.
- 2012-13 ನೇ ಸಾಲಿನಲ್ಲಿ 51,994 ಮಕ್ಕಳು ಶಾಲೆಯಿಂದ ವಂಚಿತರಾಗಿದ್ದರು, ಆದರೆ 2013-14 ನೇ ಸಾಲಿನಲ್ಲಿ ಈ ಸಂಖ್ಯೆ 22,738 ಕ್ಕೆ ಇಳಿದಿರುವುದು ಗಮನಾರ್ಹ ಸಂಗತಿ.
- ಬೆಂಗಳೂರಿನಲ್ಲಿ 4,505 ಮಕ್ಕಳು ಶಾಲೆಯಿಂದ ಹೊರಗುಳಿದ್ದಿದ್ದರೆ, ಕಳೆದ ಬಾರಿ ಈ ಸಂಖ್ಯೆ 8,774 ರಷ್ಟಿತ್ತು. ಎರಡನೇ ಸ್ಥಾನದಲ್ಲಿರುವ ಗುಲ್ಬರ್ಗಾದಲ್ಲಿ 2,068 ಮಕ್ಕಳು ಶಾಲೆ ಬಿಟ್ಟಿದ್ದಾರೆ.

**ಬೆಂಗಳೂರಿನಲ್ಲಿ ಹೆಚ್ಚು ಏಕೆ?**

ಬೆಂಗಳೂರು ಅತಿ ವೇಗದಲ್ಲಿ ಬೆಳೆಯುತ್ತಿರುವ ನಗರವಾಗಿದ್ದು, ಕಟ್ಟಡ ಕೆಲಸಕ್ಕೆ ಭಾರಿ ಬೇಡಿಕೆ ಇರುವುದು ಸತ್ಯದ ಸಂಗತಿ. ಕಟ್ಟಡ ಕೆಲಸಗಳನ್ನು ಅರಸಿ ಬೇರೆ ಜಿಲ್ಲೆಗಳಿಂದ ಬೆಂಗಳೂರಿಗೆ ವಲಸೆ ಬರುತ್ತಿರುವವರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದ್ದು, ಪೋಷಕರೆ ಜೊತೆ ಮಕ್ಕಳು ವಲಸೆ ಬರುತ್ತಿರುವುದೇ ಶಾಲೆಯಿಂದ ಹೊರಗುಳಿಯಲು ಮುಖ್ಯ ಕಾರಣವಾಗಿದೆ.

**ಬೆಂಗಳೂರು ವಿವಿ ಯ ನೂತನ ಉಪಕುಲಪತಿಯಾಗಿ ಪ್ರೊ.ಬಿ.ತಿಮ್ಮಗೌಡ ನೇಮಕ**

ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ರಸಾಯನ ಶಾಸ್ತ್ರ ವಿಭಾಗದ ಪ್ರಾಧ್ಯಪಕರಾಗಿ ಸೇವೆ ಸಲ್ಲಿಸುತ್ತಿದ್ದ ಪ್ರೊ.ಬಿ.ತಿಮ್ಮಗೌಡರವರನ್ನು ಬೆಂಗಳೂರು ವಿವಿ ಯ ನೂತನ ಉಪ ಕುಲಪತಿಯಾಗಿ ನೇಮಕ ಮಾಡಿ ರಾಜ್ಯಪಾಲ ಹಂಸರಾಜ್ ಭಾರದ್ವಜ್ ರವರು ಆದೇಶ ಹೊರಡಿಸಿದ್ದಾರೆ. ಹಂಗಾಮಿ ಉಪ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ.ರಂಗಪ್ಪ ರವರು ತಿಮ್ಮೆಗೌಡರಿಗೆ ಅಧಿಕಾರ ಸ್ವೀಕಾರ ಮಾಡಿದರು.

**ಅತ್ಯಾಚಾರದಲ್ಲಿ ಬೆಂಗಳೂರಿಗೆ ಮೂರನೇ ಸ್ಥಾನ**

2009 ರಿಂದ 2011 ರ ಅವಧಿಯಲ್ಲಿ ದೇಶದಲ್ಲಿ ನಡೆದಿರುವ ಅತ್ಯಾಚಾರ ಪ್ರಕರಣಗಳ ವರದಿಯನ್ನು ಕೇಂದ್ರ ಗೃಹ ಸಚಿವಾಲಯ ಬಿಡುಗಡೆ ಮಾಡಿದೆ. ಭಾರತ ದಂಡ ಸಂಹಿತೆಯಡಿ ದಾಖಲಾಗಿರುವ ಈ ಪ್ರಕರಣಗಳ ಪಟ್ಟಿಯಲ್ಲಿ ದೇಶದ ರಾಜಧಾನಿ ದೆಹಲಿಗೆ ಪ್ರಥಮ ಸ್ಥಾನ ದೊರೆತಿದೆ. ವಾಣಿಜ್ಯ ನಗರಿ ಮುಂಬೈ ಎರಡನೇ ಸ್ಥಾನದಲ್ಲಿದ್ದಾರೆ, ಸಿಲಿಕಾನ್ ಸಿಟಿ ಬೆಂಗಳೂರಿಗೆ ತೃತೀಯ ಸ್ಥಾನದಲ್ಲಿದೆ. ಚೈನ್ನೈ, ಹೈದರಾಬಾದ್ ಮತ್ತು ಕೊಲ್ಕತ್ತಾ ಕ್ರಮವಾಗಿ ನಂತರದ ಸ್ಥಾನದಲ್ಲಿವೆ.

**ರಾಜ್ಯದಲ್ಲಿ ಪ್ರಥಮ ಬಾರಿಗೆ "ಮೈ ಸ್ಟಾಂಪ್" ಯೋಜನೆ ಜಾರಿ**

ರಾಜ್ಯದಲ್ಲಿ ಪ್ರಥಮ ಬಾರಿಗೆ ಇತ್ತೀಚೆಗೆ "ಮೈ ಸ್ಟಾಂಪ್" ಎಂಬ ವಿನೂತನ ಯೋಜನೆಯನ್ನು ಬೆಂಗಳೂರಿನ ಪ್ರಧಾನ ಅಂಚೆ ಕಛೇರಿಯಲ್ಲಿ ಚಾಲನೆ ನೀಡಲಾಯಿತು.

ಏನಿದು ಮೈ ಸ್ಟಾಂಪ್ ಯೋಜನೆ?

- ಈ ಯೋಜನೆಯಡಿ ಜನ ಸಾಮಾನ್ಯರು ತಮ್ಮ ಅಥವಾ ತಮ್ಮ ಪ್ರೀತಿ ಪಾತ್ರರಾದವರ ಅಂಚೆ ಚೀಟಿಯನ್ನು ಪ್ರಕಟಿಸಬಹುದು. ಅಷ್ಟೇ ಅಲ್ಲ ಕಲೆ, ಸಂಸ್ಕೃತಿ, ಪ್ರಾಣಿ ಇತ್ಯಾದಿ ಚಿತ್ರಗಳನ್ನು ನೀಡಿ ಅವುಗಳನ್ನು ಅಂಚೆ ಚೀಟಿಯಲ್ಲಿ ಪ್ರಕಟಿಸಬಹುದಾಗಿದೆ.
- ಆಸಕ್ತರು ತಮ್ಮ ಗುರುತಿನ ಚೀಟಿ ಹಾಗೂ ಛಾಯಾ ಚಿತ್ರದೊಂದಿಗೆ ಅರ್ಜಿ ಸಲ್ಲಿಸಿ ರೂ.300 ಪಾವತಿ ಮಾಡಬೇಕು. ಅಲ್ಲದೇ, ಸ್ಥಳದಲ್ಲಿಯೇ ಇರುವ ವೆಬ್ ಕ್ಯಾಮರಾ ಮೂಲಕ ಛಾಯಾ ಚಿತ್ರ ತೆಗೆಯುವ ವ್ಯವಸ್ಥೆಯಿದೆ. ಪ್ರತಿ ಶೀಟ್ ಗೆ ಒಟ್ಟು 12 ಅಂಚೆ ಚೀಟಿಗಳು ಇರಲಿವೆ. ಈ ಚೀಟಿಗಳನ್ನು ಪ್ರಕಟಿಸಿ ತಮ್ಮ ಪ್ರೀತಿ ಪಾತ್ರರಿಗೆ ಉಡುಗೊರೆಯನ್ನು ನೀಡಬಹುದಾಗಿದೆ.
- ಸದ್ಯ ಈ ವ್ಯವಸ್ಥೆ ದೆಹಲಿ ಮತ್ತು ಮುಂಬೈನಲ್ಲಿ ಮಾತ್ರ ಜಾರಿಯಲ್ಲಿತ್ತು.

**79 ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅದ್ದೂರಿ ಚಾಲನೆ**

ಸಾಹಸ್ರಾರು ಜನತೆಯ ಹರ್ಷೋದ್ಗಾರ, ಸಾಹಿತಿಗಳ ಸಂಭ್ರಮದ ನಡುವೆ 79 ನೇ ಸಾಹಿತ್ಯ ಸಮ್ಮೇಳನಕ್ಕೆ ವೈಭವದ ಚಾಲನೆ ನೀಡಲಾಯಿತು. ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ರವರು ದೀಪ ಬೆಳಗಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. ಇದೆಂದೂ ಕಂಡಿರದ ಜನಸಾಗರ ಬಿಜಾಪುರ ಸಾಹಿತ್ಯ ಸಮ್ಮೇಳನದಲ್ಲಿ ಕಂಡು ಬಂದಿದ್ದು ನೋಡುಗರನ್ನು ಮೂಕ ವಿಸ್ಮಯಗೊಳಿಸಿದ್ದು ಅಕ್ಷರಹ ಸತ್ಯ.

- 79 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು: ಕೋ.ಚೆನ್ನಬಸಪ್ಪ
- ಈ ಬಾರಿ ವೇದಿಕೆಗೆ ನೀಡಲಾಗಿದ್ದ ಹೆಸರು: ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ
- ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಪೋಲಿಸ್ ಬ್ಯಾಂಡ್, ಅಶ್ವದಳ ಬಳಸಿಕೊಂಡಿದ್ದು ಈ ಬಾರಿಯ ವಿಶೇಷ. 79 ವರ್ಷಗಳ ಸಾಹಿತ್ಯ ಸಮ್ಮೇಳನದಲ್ಲಿ ಇದೇ ಮೊದಲ ಬಾರಿ ಮೈಸೂರು ದಸರಾ ಮೆರವಣಿಗೆಗೆ ಬಳಸುವ ಪೋಲಿಸ್ ಬ್ಯಾಂಡ್, ಅಶ್ವದಳವನ್ನು ಬಳಸಲಾಗಿದೆ.
- ಮುಂದಿನ ಕನ್ನಡ ಸಾಹಿತ್ಯ ಸಮ್ಮೇಳನ (80 ನೇ) ಕೊಡಗಿನಲ್ಲಿ ನಡೆಸಲು ಸಮಿತಿ ನಿರ್ಧರಿಸಿದೆ.

**ಕರ್ನಾಟಕ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಗೆ ಅಂಗೀಕಾರ**

ಬೆಂಗಳೂರು ವಿಶ್ವ ವಿದ್ಯಾಲಯದ ವಿಭಜನೆಗೆ ಅವಕಾಶ ಕಲ್ಪಿಸುವ ಕರ್ನಾಟಕ ರಾಜ್ಯ ವಿಶ್ವ ವಿದ್ಯಾಲಯಗಳ ತಿದ್ದುಪಡಿ ಮಸೂದೆಗೆ ವಿಧಾನ ಪರಿಷತ್ ಒಪ್ಪಿಗೆ ಸೂಚಿಸಿದೆ. ಈ ಮೂಲಕ ಬೆಂಗಳೂರು ವಿವಿ ಮೇಲೆ ಹೊರಿಸಲಾಗಿದ್ದ ಅಧಿಕ ಭಾರವನ್ನು ಹೊಸ ವಿವಿ ಸ್ಥಾಪನೆ ಮಾಡುವ ಮೂಲಕ ಹಂಚಿಕೆ ಮಾಡಲಾಗುವುದು.

ತಿದ್ದುಪಡಿಯ ಒಳನೋಟ

- ಸದ್ಯ ಬೆಂಗಳೂರು ವಿವಿ ಯು 677 ಕಾಲೇಜುಗಳನ್ನು ಹೊಂದಿದೆ. ಈ ಕಾಲೇಜುಗಳಲ್ಲಿ ಪರೀಕ್ಷೆ ನಡೆಸುವುದು ಸೇರಿದಂತೆ ಆಡಳಿತಾತ್ಮಕ ಕೆಲಸಗಳನ್ನು ಸುಗಮವಾಗಿ ನಡೆಸಲು ಕಷ್ಟವಾಗಿದೆ. ಆದ್ದರಿಂದ ಹೊಸ ವಿಶ್ವ ವಿದ್ಯಾಲದ ಸ್ಥಾಪನೆಗೆ ಒಲವು ತೋರಲಾಗಿದೆ.

ಹೊಸ ವಿಶ್ವವಿದ್ಯಾಲಯ ಯಾವುದು?

- ಸಾಹಿತಿ, ಪತ್ರಕರ್ತರಾದ ದಿವಂಗತ ಡಿ.ವಿ.ಗುಂಡಪ್ಪ (ಡಿ.ವಿ.ಜಿ) ರವರ ಹೆಸರಿನಲ್ಲಿ ಹೊಸ ವಿಶ್ವವಿದ್ಯಾಲಯವನ್ನು ತೆರೆಯಲು ವಿಧಾನ ಪರಿಷತ್ ಅನುಮೋಧನೆ ನೀಡಿದೆ. ಈ ಹೊಸ ವಿವಿಯು ಹೊಸಕೋಟೆಯಲ್ಲಿ ತನ್ನ ಕೇಂದ್ರ ಕಛೇರಿಯನ್ನು ಹೊಂದಿರಲಿದೆ. ಈ ಸಂಬಂಧ ಈಗಾಗಲೇ 150 ಎಕರೆ ಪ್ರದೇಶವನ್ನು ಕಾಯ್ದಿರಿಸಲಾಗಿದೆ.
- ಹೊಸ ವಿವಿಗೆ 367 ಕಾಲೇಜುಗಳನ್ನು ಮತ್ತು ಹಾಲಿ ವಿವಿಗೆ ಉಳಿದ 319 ಕಾಲೇಜುಗಳನ್ನು ಒಳಪಡಿಸಲಾಗುತ್ತದೆ. ಅಲ್ಲದೇ ಸೆಂಟ್ರಲ್ ಕಾಲೇಜ್ ಗೆ ಸ್ವಾಯತ್ತ ಸ್ಥಾನಮಾನ ನೀಡಲಾಗುವುದು.
- ಹೊಸ ವಿವಿ ಕಾರ್ಯಾರಂಭ ಮಾಡಲು ಐದು ವರ್ಷಗಳ ಕಾಲಾವಕಾಶ ಅಗತ್ಯವಿದೆ. ಅಲ್ಲಿಯವರೆಗೆ ಸೆಂಟ್ರಲ್ ಕಾಲೇಜು ಹೊಸ ವಿವಿ ಯ ಕೇಂದ್ರ ಕಛೇರಿಯಾಗಿ ಕಾರ್ಯನಿರ್ವಹಿಸಲಿದೆ.

**ನೂತನ ಲೋಕಾಯುಕ್ತರಾಗಿ ಭಾಸ್ಕರ್ ರಾವ್ ನೇಮಕ**

ಸುಮಾರು ಒಂದೂವರೆ ವರ್ಷಗಳಿಂದ ಖಾಲಿ ಇದ್ದ ರಾಜ್ಯ ಲೋಕಾಯುಕ್ತ ಹುದ್ದೆ ಈಗ ಭರ್ತಿಯಾಗಿದೆ. ರಾಜ್ಯ ಹೈಕೋರ್ಟ್ ನ ನಿವೃತ್ತ ಮುಖ್ಯನ್ಯಾಯಾಧೀಶರಾದ ವೈ.ಭಾಸ್ಕರ್ ರಾವ್ ಅವರನ್ನು ಲೋಕಾಯುಕ್ತರನ್ನಾಗಿ ಸರ್ಕಾರ ನೇಮಕ ಮಾಡಿದೆ. ಇವರನ್ನು ಲೋಕಾಯುಕ್ತರನ್ನಾಗಿ ನೇಮಕ ಮಾಡುವಂತೆ ಸರ್ಕಾರ ಮಾಡಿದ್ದ ಶಿಫಾರಸ್ಸಿಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.

- ಆಂಧ್ರಪ್ರದೇಶ ಮೂಲದ ರಾವ್ ರವರು 1999 ಮಾರ್ಚ್ ನಿಂದ 2000 ನೇ ಜೂನ್ ವರೆಗೆ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯ ಮೂರ್ತಿಯಾಗಿ ಕಾರ್ಯನಿರ್ವಹಿಸಿದ್ದರು.

**ಗಿರಿಜನ ಭಾಷಾ ನಿಘಂಟು ರಚಿಸುವ ಚಾಲನೆ**

ಬುಡಕಟ್ಟು ಜನರ ಭಾಷೆಗಳು ಅಳಿವಿನಂಚಿನಲ್ಲಿದ್ದು, ಈ ಭಾಷೆಗಳನ್ನು ಶಬ್ದಕೋಶ ಮತ್ತು ವೃತ್ತಿಪದಕೋಶವಾಗಿ ತಯಾರಿಸಲು ಕರ್ನಾಟಕ ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆ ಮುಂದಾಗಿದೆ.

ಯಾವ ಯಾವ ಜನಾಂಗಳು?

- ರಾಜ್ಯದಲ್ಲಿರು ಒಟ್ಟು 50 ಬುಡಕಟ್ಟು ಜನಾಂಗಗಳ ಪೈಕಿ ಮೊದಲ ಹಂತವಾಗಿ 6 ಬುಡಕಟ್ಟು ಜನಾಂಗಗಳ (ಹಲಸ, ಸಿದ್ಧಿ, ಇರುಳಿಗ, ಮಲೆಕುಡಿಯ, ಮರಾಠಿ ಹಾಗೂ ಟೋಕ್ರಿ ಕೋಳಿ) ಭಾಷೆಯ ಸಮಗ್ರ ಮಾಹಿತಿ ಕಲೆ ಹಾಕಲಾಗುವುದು.
- ಬುಡಕಟ್ಟು ಜನಾಂಗಗಳ ಭಾಷೆಗೆ ಸಂಬಂಧಿಸಿದ ನಿಘಂಟು ಇದುವರೆಗೂ ರಚನೆಯಾಗಿಲ್ಲ. ಈ ನಿಟ್ಟಿನಲ್ಲಿ ಇದು ದೇಶದಲ್ಲೇ ಪ್ರಥಮ ಪ್ರಯೋಗವಾಗಿದೆ ಎಂದು ಸಂಸ್ಥೆ ತಿಳಿಸಿದೆ.
- ರಾಜ್ಯದಲ್ಲಿ 2001 ರ ಜನಗಣತಿ ಪ್ರಕಾರ ರಾಜ್ಯದಲ್ಲಿ 50 ಬುಡಕಟ್ಟು ಜನಾಂಗಗಳನ್ನು ಗುರುತಿಸಲಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.6.55 ರ ಪ್ರಮಾಣದಲ್ಲಿವೆ. ಬುಟಕಟ್ಟು ಜನಾಂಗದ ಭಾಷೆಗೆ ಲಿಪಿಯಲ್ಲದಾಗಿದ್ದು, ಇತ್ತೀಚಿನ ದಿನಗಳಲ್ಲಿ ಈ ಭಾಷೆಗಳನ್ನು ಮಾತನಾಡುವವರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ.

**ಚಿತ್ರಕಲಾವಿದ ಹಿರೇಗೌಡರ್ ನಿಧನ**

ಖ್ಯಾತ ದೃಶ್ಯ ಕಲಾವಿದ, ದಾವಣೆಗೆರೆಯ ಲಲಿತ ಕಲಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ ವಿ.ಬಿ.ಹಿರೇಗೌಡರ್ ನಿಧನರಾದರು. 72 ವರ್ಷ ವಯಸ್ಸಿನವರಾದ ಅವರು ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಪುರಸ್ಕೃತರಾಗಿದ್ದರು.

- ಮೂಲತಃ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಗುಡಗೇರಿಯಲ್ಲಿ 1943 ರಲ್ಲಿ ಜನಿಸಿದ ಅವರು ಧಾರವಾಡದ ಹಾಲಭಾವಿ ಕಾಲೇಜಿನಲ್ಲಿ ಡಿಪ್ಲೋಮ ಪಡೆದಿದ್ದರು.
- 1975 ರಲ್ಲಿ ಉನ್ನತ ಶಿಕ್ಷಣ ಪಡೆದು ಲಲಿತ ಕಲಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ 2002 ರಲ್ಲಿ ನಿವೃತ್ತಿಹೊಂದಿದರು.
- "ಬದುಕು ಮತ್ತು ಕಲಾಕೃತಿಗಳು" ವಿಷಯದಲ್ಲಿ ಪಿ.ಎಚ್.ಡಿ ಪದವಿ ಪಡೆದಿದ್ದ ಹಿರೀಗೌಡರ್ ರವರು ಕಲಾಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರು.

**ಧಭೋಲ್-ಬೆಂಗಳೂರು ನಡುವೆ ಅನಿಲ ರವಾನೆ ಯೋಜನೆಗೆ ಚಾಲನೆ**

ಸರ್ಕಾರಿ ಸಾಮ್ಯದ ಮಹಾರತ್ನ ಕಂಪನಿ "ಗೇಲ್" (GAIL Gas Authority of India Ltd)ನ ರೂ.4500 ಕೋಟಿ ವೆಚ್ಚದ ಧಭೋಲ್-ಬೆಂಗಳೂರು ನಡುವೆ ಕೊಳವೆ ಮಾರ್ಗ ಮೂಲಕ ನೈಸರ್ಗಿಕ ಅನಿಲವನ್ನು ರವಾನಿಸುವ ಯೋಜನೆಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ವೀರಪ್ಪ ಮೊಹ್ಲಿರವರು ಚಾಲನೆ ನೀಡಿದರು.

ಪ್ರಮುಖ ವೈಶಿಷ್ಟ್ಯತೆಗಳು:

- ಈ ಅನಿಲ ಯೋಜನೆಯು ಒಟ್ಟು ರೂ.4500 ಕೋಟಿ ವೆಚ್ಚದ ಯೋಜನೆಯಾಗಿದ್ದು 16 MMSCMD (Million standard cubic meter of gas) ಯಷ್ಟು ನೈಸರ್ಗಿಕ ಅನಿಲವನ್ನು ತಲುಪಿಸುವ ಸಾಮರ್ಥ್ಯವನ್ನು ಹೊಂದಿದೆ.

- 1000 ಕಿ.ಮೀ ಉದ್ದವಿರುವ ಈ ಕೊಳವೆ ಮಾರ್ಗವು ಬೆಳಗಾಂ, ಧಾರವಾಡ, ಗದಗ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ಮೂಲಕ ಸಾಗುತ್ತದೆ. ಈ ಭಾಗದ ಕೈಗಾರಿಕೆಗಳು ಇನ್ನು ಮುಂದೆ ಅನಿಲವನ್ನು ಇಂಧನವನ್ನಾಗಿ ಬಳಸಲಿವೆ.
- ಪರಿಸರ ಮಾಲಿನ್ಯವನ್ನು ತಡೆಯುವುದರ ಜೊತೆಗೆ ಈ ಯೋಜನೆಯು ವಾರ್ಷಿಕವಾಗಿ ತೈಲ ಇಂಧನಗಳ ಮೂಲಕ ವಿದ್ಯುತ್ ಉತ್ಪಾದನೆಗೆ ತಗಲುವ ರೂ.800 ಕೋಟಿಯನ್ನು ಉಳಿಸಲಿದೆ.
- ಈ ಯೋಜನೆಯನ್ನು ಮುಂದಿನ ಹಂತಗಳಲ್ಲಿ ಮಂಗಳೂರಿನ ತನಕ ನಂತರ ಕೇರಳದ ಕೊಚ್ಚಿಯ ವರೆಗೂ ವಿಸ್ತರಿಸಲಾಗುವುದು.
- ಲಿಕ್ವಿಡ್ ನ್ಯಾಚುರಲ್ ಗ್ಯಾಸ್ (LNG) ರೂಪದಲ್ಲಿರುವ ಅನಿಲವನ್ನು ಮಹಾರಾಷ್ಟ್ರದ ಧಬೋಲ್ ನಿಂದ ಸಾಗಿಸಲಾಗುತ್ತದೆ. ಟೊಯೋಟೊ ಕಿರ್ಲೋಸ್ಕರ್ ಕಂಪನಿಯು ಈ ಯೋಜನೆಯ ಮೂಲಕ ಅನಿಲ ಇಂಧನ ಪಡೆಯುವ ಮೊದಲ ಕಂಪನಿಯಾಗಿದೆ.

**ಕಾವೇರಿ ಐತೀರ್ಪು ಅಧಿಸೂಚನೆಗೆ ಅಂಕಿತ: ಜಯಲಲಿತಾಗೆ ಭರ್ಜರಿ ಜಯ**

ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ನ್ಯಾ.ಎನ್.ಪಿ.ಸಿಂಗ್ ರವರು 2007 ಫೆಬ್ರವರಿ 5 ರಂದು ನೀಡಿದ "ಐತೀರ್ಪಿನ ಅಧಿಸೂಚನೆಗೆ" ಕೇಂದ್ರ ಜಲ ಸಂಪನ್ಮೂಲ ಕಾರ್ಯದರ್ಶಿ ಎಸ್.ಕೆ. ಸರ್ಕಾರ್ ರವರು ಸಹಿ ಹಾಕಿದ್ದಾರೆ. ಐತೀರ್ಪು ಕೊಟ್ಟು ಆರು ವರ್ಷಗಳು ಕಳೆದರು ಅಧಿಕೃತ ಅಧಿಸೂಚನೆ ಹೊರಡಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿ ಸುಪ್ರೀಂ ಕೋರ್ಟ್ ಬುಧವಾರದ ಒಳಗೆ ಅಧಿಸೂಚನೆ ನೀಡುವಂತೆ ಸರ್ಕಾರಕ್ಕೆ ಸೂಚಿಸಿತ್ತು. ಇದು 90 ದಿನದೊಳಗೆ ಜಾರಿಗೆ ಬರಲಿದೆ. ಈ ಅಧಿಸೂಚನೆಯಿಂದ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ನಡುವೆ ಕಾವೇರಿ ನೀರಿನ ಹಂಚಿಕೆಗೆ ನಡೆಯುತ್ತಿದ್ದ ಹೋರಾಟ ಅಂತ್ಯ ಕಾಣಲಿದೆ.

ಅಧಿಸೂಚನೆ ಮುಖ್ಯಾಂಶಗಳು

- ಈ ಅಧಿಸೂಚನೆಯಿಂದ ಇದುವರೆಗೂ ಪ್ರಧಾನಿ ನೇತೃತ್ವದಲ್ಲಿ ಇದ್ದ "ಕಾವೇರಿ ನದಿ ಪ್ರಾಧಿಕಾರ" ಹಾಗೂ ಇದರ ಅಧೀನದಲ್ಲಿರುವ ಜಲ ಸಂಪನ್ಮೂಲ ಕಾರ್ಯದರ್ಶಿ ನೇತೃತ್ವದ "ಕಾವೇರಿ ಉಸ್ತುವಾರಿ ಸಮಿತಿ" ಅಸ್ತಿತ್ವ ಕಳೆದುಕೊಳ್ಳಲಿವೆ. ಆದರೆ ನ್ಯಾಯ ಮಂಡಳಿ ತೀರ್ಪು ಅನುಷ್ಠಾನಕ್ಕೆ "ಕಾವೇರಿ ನೀರು ನಿರ್ವಹಣಾ ಮಂಡಳಿ" ಹಾಗೂ "ನೀರು ನಿಯಂತ್ರಣ ಸಮಿತಿ" ರಚನೆಯಾಗಲಿದೆ.
- ಈ ಅಧಿಸೂಚನೆಯಿಂದ ಕಾವೇರಿ ನದಿ ಪಾತ್ರದಲ್ಲಿ ಬರುವ ಎಲ್ಲ ಜಲಾಶಯಗಳು ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ "ನೀರು ನಿರ್ವಹಣ ಮಂಡಳಿ" ಅಧೀನಕ್ಕೆ ಒಳಪಡಲಿವೆ. ಇದರಿಂದ ರಾಜ್ಯ ಸರ್ಕಾರ ಜಲಾಶಯದ ಮೇಲಿನ ಅಧಿಕಾರವನ್ನು ಸಂಪೂರ್ಣವಾಗಿ ಕಳೆದುಕೊಳ್ಳಲಿದೆ.
- ಇನ್ನು ಮುಂದೆ ನೀರು ಬಿಡುಗಡೆ ಮಾಡುವ ಬಗ್ಗೆ ರಾಜ್ಯ ಸರ್ಕಾರ ತಗಾದೆ ತೆಗೆಯುವ ಆಗಿಲ್ಲ. ಏಕೆಂದರೆ ನೀರು ಬಿಡುಗಡೆ ಮಾಡುವ ಅಥವಾ ಮಾಡದಿರುವುದನ್ನು ಕುರಿತು ತೀರ್ಮಾನವನ್ನು "ಕಾವೇರಿ ನೀರು ನಿರ್ವಹಣಾ ಮಂಡಳಿ ನೋಡಿಕೊಳ್ಳಲಿದೆ.

**ನೀರು ನಿರ್ವಹಣಾ ಮಂಡಳಿಯ ರಚನೆ ಹೇಗೆ?**

- ಕಾವೇರಿ ನೀರು ನಿರ್ವಹಣಾ ಮಂಡಳಿಗೆ ಒಬ್ಬ ಅಧ್ಯಕ್ಷರು, ಇಬ್ಬರು ಪೂರ್ಣವಾಧಿ ಸದಸ್ಯರಿರುತ್ತಾರೆ. ಇವರ ನೇಮಕವನ್ನು ಕೇಂದ್ರ ಸರ್ಕಾರ ಮಾಡಲಿದೆ.
- ಜಲ ಸಂಪನ್ಮೂಲ ನಿರ್ವಹಣೆ ಕ್ಷೇತ್ರದಲ್ಲಿ 20 ವರ್ಷ ಅನುಭವವನ್ನು ಹೊಂದಿರುವ ಮುಖ್ಯ ಎಂಜನಿಯರ್ ದರ್ಜೆಯ ಅಧಿಕಾರಿ ಅಧ್ಯಕ್ಷರಾಗಲು ಅರ್ಹತೆಯನ್ನು ಹೊಂದಿರುತ್ತಾರೆ. 15 ವರ್ಷ ಕೃಷಿ ಮತ್ತು ಜಲಾನಯನ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಮುಖ್ಯ ಎಂಜನಿಯರ್ ದರ್ಜೆಯ ಅಧಿಕಾರಿಗಳು ಇದರ ಪೂರ್ಣವಧಿ ಸದಸ್ಯರಾಗಿರುತ್ತಾರೆ.
- ಕಾವೇರಿ ಅಧ್ಯಕ್ಷರ ಅಧಿಕಾರ ಅವಧಿ ಮೂರು ವರ್ಷ. ಆದರೆ ಈ ಅವಧಿಯನ್ನು 5 ವರ್ಷಗಳ ವರೆಗೂ ವಿಸ್ತರಿಸಬಹುದಾಗಿದೆ. ಅಲ್ಲದೇ ಜಲಸಂಪನ್ಮೂಲ ಮತ್ತು ಕೃಷಿ ಸಚಿವಾಲಯ ಇಬ್ಬರು ಅರೆಕಾಲಿಕ ಸದಸ್ಯರನ್ನು ನೇಮಿಸಬಹುದಾಗಿದೆ.
- ಇದರ ಜೊತೆಗೆ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳು ತಲಾ ಒಬ್ಬ ಸದಸ್ಯರನ್ನು ನೇಮಕ ಮಾಡಲು ಅಧಿಕಾರವಿದೆ. ನಿರ್ವಹಣಾ ಮಂಡಳಿಯ ಎಲ್ಲಾ ಸದಸ್ಯರಿಗೂ ಸಮಾನ ಅಧಿಕಾರವಿರಲಿದೆ. ಬಹುಮತದ ಆಧಾರದ ಮೇಲೆ ಪ್ರಮುಖ ತೀರ್ಮಾನಗಳನ್ನು ಕೇಗೊಳ್ಳಬಹುದು. ಸಭೆಗೆ ಕನಿಷ್ಠ ಆರು ಮಂದಿಯ ಕೋರಂ ಅಗತ್ಯವಿದ್ದು, ಆಕಸ್ಮಾತ್ ಸಭೆ ಕೋರಂ ಇಲ್ಲದೇ ಮುಂದೂಡಲ್ಪಟ್ಟರೆ ಮೂರು ದಿನದೊಳಗೆ ಮತ್ತೆ ಸೇರಬೇಕಾಗುತ್ತದೆ. ಮತ್ತು ಈ ಸಭೆಗೆ ಕೋರಂ ನ ಅಗತ್ಯವಿರುವುದಿಲ್ಲ.
- ಮಂಡಳಿಯ ನಿರ್ವಹಣಾ ವೆಚ್ಚದಲ್ಲಿ ತಲಾ ಶೇ.40 ರಷ್ಟನ್ನು ಕರ್ನಾಟಕ ಮತ್ತು ತಮಿಳುನಾಡು ನೀಡಬೇಕು. ಶೇ.15 ರಷ್ಟನ್ನು ಕೇರಳ ಮತ್ತು ಶೇ.5 ರಷ್ಟನ್ನು ಪುದುಚೇರಿ ನೀಡಲಿದೆ.

**ಕಾವೇರಿ ನದಿ ನೀರು ಹಂಚಿಕೆ ಎಷ್ಟೆಷ್ಟು?**

- ಎನ್.ಎಸ್.ರಾವ್ ಮತ್ತು ಸುಧೀರ್ ನಾರಾಯಣ್ ಸದಸ್ಯರಾಗಿರುವ ನ್ಯಾಯಮಂಡಳಿಯು ಕಾವೇರಿ ನೀರಿನ ಸಂಗ್ರಹವನ್ನು 740 ಟಿಎಂಸಿ ಅಡಿ ಎಂದು ಅಂದಾಜಿಸಿದೆ. ಇದರಲ್ಲಿ ಕರ್ನಾಟಕಕ್ಕೆ 270 ಟಿಎಂಸಿ ಅಡಿ (ಕೇಳಿದ್ದು 465), ತಮಿಳುನಾಡಿಗೆ 419 ಟಿಎಂಸಿ ಅಡಿ (ಕೇಳಿದ್ದು 562), ಕೇರಳ 30 ಟಿಎಂಸಿ ಅಡಿ ಮತ್ತು ಪುದುಚೇರಿ 7 ಟಿಎಂಸಿ ಅಡಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಪರಿಸರ ಸಂರಕ್ಷಣೆಗಾಗಿ 10 ಟಿಎಂಸಿ ಅಡಿ ಮೀಸಲಿಡಲಾಗಿದೆ.

**ನೀರು ನಿಯಂತ್ರಣ ಮಂಡಳಿ ವ್ಯಾಪ್ತಿಗೆ ಬರಲಿರುವ ಜಲಾಶಯಗಳು:**

- ಕೆ ಆರ್ ಎಸ್, ಕಬಿನಿ, ಹಾರಂಗಿ, ಹೇಮಾವತಿ, ಭವಾನಿ, ಅಮರಾವತಿ, ಮೆಟ್ಟೂರು, ಬನಸುರ ಸಾಗರ ಜಲಾಶಯಗಳು ಇನ್ನು ಮುಂದೆ ಕಾವೇರಿ ನೀರು ನಿಯಂತ್ರಣ ಮಂಡಳಿ ವ್ಯಾಪ್ತಿಗೆ ಒಳಪಡಲಿವೆ.
- ಕಾವೇರಿ ನದಿ ವಿವಾದವನ್ನು ಬಗೆಹರಿಸಲು ಕೇಂದ್ರ ಸರ್ಕಾರವು 1990 ರಲ್ಲಿ ನ್ಯಾಯಮಂಡಳಿಯನ್ನು ಸ್ಥಾಪಿಸಿತ್ತು. ಈ ಮಂಡಳಿಯು ಫೆಬ್ರವರಿ 5, 2007 ರಂದು ತೀರ್ಪು ಪ್ರಕಟಿಸಿದೆ. ಆದರೆ ಈ ಅಧಿಸೂಚನೆಯನ್ನು ಅಧಿಕೃತವಾಗಿ ಪ್ರಕಟಿಸಲಾಗಿರಲಿಲ್ಲ.

## ಟಿಪ್ಪು ಶಸ್ತ್ರಾಸ್ತ್ರ ಕೋಠಿ ಸ್ಥಳಾಂತರಕ್ಕೆ ಸಮ್ಮತಿ

ಬೆಂಗಳೂರು ಮತ್ತು ಮೈಸೂರು ನಡುವೆ ಜೋಡಿ ರೈಲು ಮಾರ್ಗ ಕಾಮಗಾರಿಗೆ ಅಡತಡೆ ಉಂಟು ಮಾಡಿದ್ದ ಟಿಪ್ಪು ಶಸ್ತ್ರಾಸ್ತ್ರ ಕೋಠಿಯನ್ನು ಸ್ಥಳಾಂತರಿಸಲು ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರ ಒಪ್ಪಿಗೆ ನೀಡಿದೆ. 18 ನೇ ಶತಮಾನದಲ್ಲಿ ಶ್ರೀರಂಗಪಟ್ಟಣದಲ್ಲಿ ಟಿಪ್ಪುವಿನಿಂದ ಸ್ಥಾಪಿಸಲಾದ ಈ ಶಸ್ತ್ರಾಸ್ತ್ರ ಕೋಠಿಯನ್ನು ಸ್ಕಿಬ್ಬಿಂಗ್ ಮೂಲಕ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಹಿಂಭಾಗಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ.

- ಬೆಂಗಳೂರು -ಮೈಸೂರು ನಡುವೆ ಜೋಡಿ ಮಾರ್ಗವು ಶಸ್ತ್ರಾಸ್ತ್ರ ಕೋಠಿಯ ಮಧ್ಯದಲ್ಲೇ ಹಾದು ಹೋಗುತ್ತಿದ್ದ ಕಾರಣ ಅದನ್ನು ಸ್ಥಳಾಂತರಿಸದೆ ರೈಲ್ವೆ ಕಾಮಗಾರಿಯನ್ನು ಮುಂದುವರೆಸಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಶಸ್ತ್ರಾಸ್ತ್ರ ಕೋಠಿಯನ್ನು ಸ್ಥಳಾಂತರಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಆದರೆ ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರ ಒಪ್ಪಿರಲಿಲ್ಲ.
- ಜೊತೆಗೆ ಶಸ್ತ್ರಾಸ್ತ್ರ ಕೋಠಿಯನ್ನು ಸ್ಥಳಾಂತರ ಮಾಡುವ ಸ್ಥಳ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ 100 ಮೀಟರ್ ರಕ್ಷಿತ ಪ್ರದೇಶಕ್ಕೆ ಸೇರಿಸಿತ್ತು. ಇದು ಭಾರತೀಯ ಪುರಾತತ್ವ ಇಲಾಖೆಗೆ ಬರುತ್ತಿದ್ದ ಕಾರಣ ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರ ಒಪ್ಪಿಗೆ ಅಗತ್ಯವಿತ್ತು. ಈ ಕೋಠಿಯನ್ನು ಈಗ ದೇವಸ್ಥಾನದ 200 ಮೀಟರ್ ನಿಷೇಧಿತ ಪ್ರದೇಶ ಹಾಗೂ 100 ಮೀ. ರಕ್ಷಿತ ಪ್ರದೇಶದ ಹೊರಕ್ಕೆ ಸ್ಥಳಾಂತರಿಸಲು ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರ ಒಪ್ಪಿಗೆ ನೀಡಿದೆ.

## ಕರ್ನಾಟಕ ಹವಾಮಾನ ಬದಲಾವಣೆಯ ಮುನ್ನೋಟ ವರದಿ ಬಿಡುಗಡೆ

ಕರ್ನಾಟಕ ಬಹುತೇಕ ಜಿಲ್ಲೆಗಳು 2030 ರ ವೇಳೆಗೆ ಅಧಿಕ ತಾಪಮಾನದಿಂದ ತತ್ತರಿಸಲಿವೆ ಎಂದು ಇತ್ತೀಚೆಗೆ ಬಿಡುಗಡೆಗೊಳಿಸಿದ "ಕರ್ನಾಟಕದ ಹವಾಮಾನ ಬದಲಾವಣೆಯ ಮುನ್ನೋಟ" ಎಂಬ ವರದಿಯಲ್ಲಿ ತಿಳಿಸಲಾಗಿದೆ. ಬೆಂಗಳೂರು ಕ್ಲೈಮೇಟ್ ಚೇಂಜ್ ಇನೀಷಿಯೇಟಿವ್-ಕರ್ನಾಟಕ (ಬಿಸಿಸಿಐ-ಕೆ) ಸಲಹೆ ಮೇರೆಗೆ ಭಾರತೀಯ ವಿಜ್ಞಾನ ಸಂಸ್ಥೆ ಈ ವರಿದಿಯನ್ನು ಸಿದ್ದಪಡಿಸಿದೆ.

ವರದಿಯ ಪ್ರಮುಖ ಅಂಶಗಳು:

- ಕೈಗಾರೀಕರಣದ ಪೂರ್ವಕ್ಕೆ (1880) ಹೋಲಿಸಿ ಈ ವರದಿಯನ್ನು ಸಿದ್ದಪಡಿಸಲಾಗಿದೆ. ಈ ಶತಮಾನದ ಅಂತ್ಯಕ್ಕೆ ತಾಪಮಾನ ಪ್ರಮಾಣ 5 ಡಿಗ್ರಿ ಸೆಲ್ಸಿಯಸ್ ನಷ್ಟು ಹೆಚ್ಚಾಗಬಹುದು ಎಂದು ಹೇಳಲಾಗಿದೆ.
- ಮಾಲಿನ್ಯದ ಪ್ರಮಾಣದಲ್ಲಿ ಅಂತ ಬದಲಾವಣೆ ಆಗದಿದ್ದರೂ, 2030 ಕ್ಕೆ ತಾಪಮಾನದ ಏರಿಕೆ ಸಾಮಾನ್ಯಕ್ಕಿಂತ ಸುಮಾರು 1.7 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಲಿದೆ.
- ಜಾಗತಿಕ ಮಟ್ಟದಲ್ಲಿ ಅಂದಾಜು ಮಾಡಿರುವಂತೆ ರಾಜ್ಯದ ತಾಪಮಾನ 2030 ಕ್ಕೆ ಗರಿಷ್ಠ ಮಟ್ಟ ತಲುಪಲಿದೆ. ರಾಜ್ಯದ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ತಾಪಮಾನ ಅತಿ ಹೆಚ್ಚು ಅಂದರೆ 2 ಡಿಗ್ರಿಗಳವರೆಗೆ ಏರಿಕೆ ಆಗಲಿದೆ.
- ತಾಪಮಾನ ಏರಿಕೆ ಜೊತೆಗೆ ಮಳೆಯ ಪ್ರಮಾಣ ಸಹ ಏರಿಕೆಯಾಗಲಿದೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಶೇ.8 ರಿಂದ ಶೇ.16 ರಷ್ಟು ಮಳೆ ಪ್ರಮಾಣ ಜಾಸ್ತಿಯಾಗಲಿದೆ.

**ಕ್ಯಾನ್ಸರ್: ದೇಶದಲ್ಲಿ ಬೆಂಗಳೂರಿಗೆ ನಂ.1 ಸ್ಥಾನ**

ಸಿಲಿಕಾನ್ ಸಿಟಿ ಎಂದೇ ಖ್ಯಾತಿ ಹೊಂದಿರುವ ಬೆಂಗಳೂರಿನ ನಿವಾಸಿಗಳಿಗೆ ಆಘಾತಕಾರಿ ಸುದ್ದಿಯೊಂದು ಕಾದಿದೆ. ದೇಶದ ಪ್ರಮುಖ ನಗರಗಳ ಪೈಕಿ ರಾಜ್ಯದ ರಾಜಧಾನಿಯಲ್ಲಿ ಅತ್ಯಧಿಕ ಕ್ಯಾನ್ಸರ್ ಪ್ರಕರಣಗಳು ಕಂಡುಬಂದಿರುವುದಾಗಿ ಸಮೀಕ್ಷೆಯೊಂದು ಹೇಳಿದೆ. ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿ ಸಮೀಕ್ಷೆ ತನ್ನ ವರದಿಯನ್ನು ಪ್ರಕಟಿಸಿದ್ದು, ಬೆಂಗಳೂರಿನಲ್ಲಿ ಪ್ರತಿ ಲಕ್ಷ ಜನರಲ್ಲಿ ಸುಮಾರು 126 ಜನ ಕ್ಯಾನ್ಸರ್ ನಿಂದ ಬಳಲುತ್ತಿದ್ದು ಈ ಪ್ರಮಾಣ ದೇಶದಲ್ಲೇ ಹೆಚ್ಚು.

- ಅಂಕಿ ಅಂಶಗಳ ಪ್ರಕಾರ ಪ್ರತಿ ಒಂದು ಲಕ್ಷ ಪುರುಷರಲ್ಲಿ 113.4 ಕ್ಯಾನ್ಸರ್ ಪ್ರಕರಣಗಳು ಕಂಡು ಬಂದಿವೆ, ಅದರಂತೆ ಪ್ರತಿ ಒಂದು ಲಕ್ಷ ಮಹಿಳೆಯರಲ್ಲಿ 139.1 ಪ್ರಕರಣಗಳು ಪತ್ತೆಯಾಗಿದ್ದು, ಸರಾಸರಿ 126 ಪ್ರಕರಣಗಳು ದಾಖಲಾಗಿವೆ.
- ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಈ ಪ್ರಮಾಣ 122.75 ಇದ್ದರೆ, ದೇಶದ ವಾಣಿಜ್ಯ ನಗರಿ ಮುಂಬೈಯಲ್ಲಿ 104.75 ರಷ್ಟಿದೆ ಎಂದು ಸಮೀಕ್ಷೆಯಲ್ಲಿ ಕಂಡು ಬಂದಿದೆ.

ಬೆಂಗಳೂರಿನಲ್ಲಿ ಅಧಿಕ ಪ್ರಕರಣಗಳು ಏಕೆ?

- ಬದಲಾಗುತ್ತಿರುವ ಜೀವನ ಶೈಲಿ ಮತ್ತು ಅನುವಂಶಿಕ ತೊಂದರೆಗಳಿಂದ ಬೆಂಗಳೂರಿನಲ್ಲಿ ಅಧಿಕ ಸಂಖ್ಯೆಯ ಪ್ರಕರಣಗಳು ಕಂಡುಬರುತ್ತಿರುವುದಾಗಿ ಕ್ಯಾನ್ಸರ್ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.
- ವಿಶ್ವದಲ್ಲಿ ಇಂದು 30 ಮಿಲಿಯನ್ ಕ್ಯಾನ್ಸರ್ ರೋಗಿಗಳಿದ್ದು, 2050 ರ ವೇಳೆಗೆ ಈ ಪ್ರಮಾಣ 70 ಮಿಲಿಯನ್ ಆಗಲಿದೆ.

**ದೇವಾಲಯದಲ್ಲಿ ಇತಿಹಾಸ ಕಾಲದ ತಾಮ್ರ ಫಲಕ ಮತ್ತು ಚಿನ್ನದ ನಾಣ್ಯಗಳು ಪತ್ತೆ**

ಕರ್ನಾಟಕ ಇತಿಹಾಸದ ಮೇಲೆ ಮತ್ತಷ್ಟು ಬೆಳಕು ಚೆಲ್ಲುವ ತಾಮ್ರದ ಫಲಕಗಳು ಮತ್ತು ಎಂಟು ಚಿನ್ನದ ನಾಣ್ಯಗಳನ್ನು ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲ್ಲೂಕಿನ ತಾಳಗುಂದದ ಪ್ರಾಣೇಶ್ವರ ದೇವಾಲಯದಲ್ಲಿ ಪತ್ತೆಹಚ್ಚಲಾಗಿದೆ. ಭಾರತ ಪುರಾತತ್ವ ಸಂಸ್ಥೆಯ ಬೆಂಗಳೂರು ವೃತ್ತ ಇವುಗಳನ್ನು ದೇವಸ್ತಾನದ ಉತ್ಖನನದ ವೇಳೆಯಲ್ಲಿ ಪತ್ತೆಹಚ್ಚಿದೆ.

- ತಾಮ್ರದ ಫಲಕಗಳು 12 ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದ ಕಲಚೂರಿ ರಾಜಮನೆತನಕ್ಕೆ ಸೇರಿರ ಬಹುದೆಂದು ಊಹಿಸಲಾಗಿದೆ. ಆದರೆ ರಾಜ್ಯವನ್ನು ಕ್ರಿಸ್ತ ಶಕ 4 ನೇ ಶತಮಾನದಿಂದ 12 ನೇ ಶತಮಾನದವರೆಗೆ ಆಳಿದ "ಗಂಗ" ರಾಜರಿಗೆ ಸಂಬಂಧಿಸಿವೆ. ಈ ನಾಣ್ಯಗಳು ಆನೆ ಗದ್ಯಣ ವಿಧವಾಗಿದ್ದು, ನಾಣ್ಯದ ಮುಖವು ಆನೆ ಚಿತ್ರವನ್ನು ಹೊಂದಿದೆ. ಹಿಂಭಾಗದಲ್ಲಿ ಹೂವಿನ ಆಕೃತಿಯನ್ನು ಹೊಂದಿರುವ ಈ ನಾಣ್ಯಗಳು ಸುಮಾರು ನಾಲ್ಕು ಗ್ರಾಂ ತೂಕ ಇವೆ. ಇವುಗಳಲ್ಲಿ ಮೂರು ನಾಣ್ಯಗಳನ್ನು ಗಂಗರ ಪ್ರಸಿದ್ದ ರಾಜ "ಶಿವಮರ-I" ಟಂಕಿಸಿರಬಹುದು ಎಂದು ಊಹಿಸಲಾಗಿದೆ.
- ತಾಮ್ರ ಫಲಕಗಳ ಮೇಲೆ ಸಂಸ್ಕೃತ ಮತ್ತು ದೇವನಗರಿ ಭಾಷೆಗಳನ್ನು ಬಳಸಿರುವುದಾಗಿ ಪುರಾತತ್ವ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಪ್ರಾಣೇಶ್ವರ ದೇವಾಲಯ:

- ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲ್ಲೂಕಿನ ತಾಳಗುಂದದಲ್ಲಿರು ಪ್ರಾಣೇಶ್ವರ ದೇವಾಲಯವೂ ಬನವಾಸಿ ಕದಂಬರರ ಕಾಲದಲ್ಲಿ ನಿರ್ಮಿಸಲಾಗಿರುವುದಾಗಿ ನಂಬಲಾಗಿದೆ. ಕೆಲವು ಇತಿಹಾಸ ತಜ್ಞರ ಪ್ರಕಾರ ಈ ದೇವಾಲಯದ ನಿರ್ಮಾಣ ಶಾತವಾಹನರ ಕಾಲದಲ್ಲೇ ಆಗಿರಬಹುದು. ಸರಳವಾಗಿ ರಚಿಸಿರುವ ಈ ದೇವಾಲಯ ಚದರಕಾರದ ಗರ್ಭಗುಡಿಯನ್ನು ಹೊಂದಿದ್ದು ಅದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.

# ರಾಷ್ಟ್ರೀಯ

**ಕಬ್ಬು ಖರೀದಿ ಬೆಲೆ ಏರಿಕೆಗೆ ಕೇಂದ್ರ ಸಂಪುಟ ಒಪ್ಪಿಗೆ**

ಸಕ್ಕರೆ ಕಾರ್ಖಾನೆಗಳು 2013-14 ನೇ ಸಾಲಿನಲ್ಲಿ ಕಬ್ಬಿಗೆ ನೀಡುವ ಖರೀದಿ ಬೆಲೆಯನ್ನು ಕ್ವಿಂಟಲ್ ಗೆ ರೂ.40 ಹೆಚ್ಚಿಸಲು ಕೇಂದ್ರ ಸರ್ಕಾರ ಒಪ್ಪಗೆ ಸೂಚಿಸಿದೆ. ಕಬ್ಬಿನ ಖರೀದಿ ಬೆಲೆ ಶೇ.23.5% ರಷ್ಟು ಹೆಚ್ಚಿಸಬೇಕು ಎಂದು ಕೃಷಿ ಸಚಿವಾಲಯ ಮನವಿ ಮಾಡಿತ್ತು. ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಇದನ್ನು ಅನುಮೋದಿಸಿದೆ. ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಮತ್ತು ಸದ್ಯ ಸಕ್ಕರೆ ಕಾರ್ಖಾನೆಗಳ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ದರವನ್ನು ನಿಗದಿಪಡಿಸಲಾಗಿದೆ.

- ಪರಿಷ್ಕೃತ ದರದಂತೆ 2013-14 ನೇ ಸಾಲಿನ ಕಬ್ಬಿನ ಇಳುವರಿ ವರ್ಷದಲ್ಲಿ ರೈತರಿಗೆ ಕ್ವಿಂಟಲ್ ಗೆ ರೂ.210 ಬೆಲೆ ಲಭಿಸಲಿದೆ.
- 1966 ರಲ್ಲಿ ಹೊರಡಿಸಲಾದ ಕಬ್ಬು ನಿಯಂತ್ರಣ ಆದೇಶದಡಿಯಲ್ಲಿ ನಿಗದಿಪಡಿಸಲಾಗುವ ಈ ಖರೀದಿ ಬೆಲೆಯು ದೇಶವ್ಯಾಪ್ತಿ ಅನ್ವಯವಾಗಲಿದೆ.
- ಕೃಷಿ ವೆಚ್ಚ ಮತ್ತು ದರ ಸಮಿತಿಯು ಒಂದು ಶಾಸನಬದ್ದ ಸಂಸ್ಥೆಯಾಗಿದ್ದು, ಪ್ರಮುಖ ಕೃಷಿ ಉತ್ಪನ್ನಗಳಿಗೆ ದರ ನಿಗದಿ ಮಾಡಲು ಸರ್ಕಾರಕ್ಕೆ ಸಲಹೆ ನೀಡುತ್ತದೆ.

**ಸಿಚೆಲಿಸ್ ಗೆ ಕಡಲು ಕಣ್ಗಾವಲು ವಿಮಾನ ಹಸ್ತಾಂತರಿಸಿದ ಭಾರತ**

ಭಾರತದ ರಕ್ಷಣಾ ಸಚಿವರಾದ ಶ್ರೀ.ಎ.ಕೆ.ಅಂಟೋನಿಯವರು, ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಅಭಿವೃದ್ದಿಪಡಿಸಿರುವ ಡೊರ್ನಿಯರ್ ಕಡಲು ಕಣ್ಗಾವಲು (Dornier maritime surveillance Aircraft) ವಿಮಾನವನ್ನು, ಸಿಚೆಲಿಸ್ ನ ವಿದೇಶಾಂಗ ಸಚಿವರಾದ ಮಿ.ಜೀನ್ ಪಾಲ್ ಅಡಮ್ ರವರಿಗೆ ಹಸ್ತಾಂತರಿಸಿದರು. ಇದೊಂದು ಸ್ಮರಣೀಯ ಸಮಯವಾಗಿದ್ದು, ಭಾರತ ಮತ್ತು ಸಿಚೆಲಿಸ್ ನ ರಕ್ಷಣಾ ಸಂಬಂಧ ಮತ್ತಷ್ಟು ಗಟ್ಟಿಗೊಳಿಸುವಲ್ಲಿ ಇದು ಮೈಲಿಗಲ್ಲು ಆಗಲಿದೆ ಎಂದು ಆಂಟೋನಿ ಅಭಿಪ್ರಾಯಪಟ್ಟರು. ಸಿಚೆಲಿಸ್ ನ ವಿದೇಶಾಂಗ ಸಚಿವರಾದ ಪಾಲ್ ರವರು ಸಹ ಭಾರತ ತಮ್ಮ ದೇಶಕ್ಕೆ ನೀಡುತ್ತಿರುವ ಸಹಕಾರಕ್ಕೆ ಕೃತಜ್ಞನತೆ ಸಲ್ಲಿಸಿದರು.

ಡೊರ್ನಿಯರ್ 228:

- ಡೊರ್ನಿಯರ್ 228 ಒಂದು ಕಡಲು ಕಣ್ಗಾವಲು ವಿಮಾನವಾಗಿದ್ದು, ಖಾನ್ಪುರದ HAL ಘಟಕ ಇದನ್ನು ಅಭಿವೃದ್ದಿಪಡಿಸಿದೆ. ಇದು ಅತ್ಯಂತ ವಿಶ್ವಾಸಾರ್ಹ, ಬಹುಪಯೋಗಿ, ಇಂಧನ ದಕ್ಷತೆಯುಳ್ಳ ಹಗುರ ವಿಮಾನವಾಗಿದೆ.
- ಕೇವಲ ಕಣ್ಗಾವಲಿಗಲ್ಲದೇ, ನೌಕ ದಳ, ವಾಯು ಸೇನೆ ಮತ್ತು ಇತರೆ ನಾಗರಿಕ ಸೇವೆಗಳಿಗೂ ಇದು ಉಪಯೋಗವಾಗಲಿದೆ.
- ಪ್ರಮುಖವಾಗಿ ಸಿಚೆಲಿಸ್ ನ ಕಡಲತೀರ ಪ್ರದೇಶದಲ್ಲಿ ಪೈರಸಿ ಮತ್ತು ಭಯೋತ್ಪಾದನೆಯನ್ನು ಹತ್ತಿಕ್ಕಲು ಈ ವಿಮಾನ ಸಹಕಾರಿಯಾಗಲಿದೆ.

ಸಿಚೆಲಿಸ್: ಸಿಚೆಲಿಸ್ ಅಥವಾ ರಿಪಬ್ಲಿಕ್ ಆಫ್ ಸಿಚೆಲಿಸ್, ಹಿಂದೂ ಮಹಾಸಾಗರದಲ್ಲಿರುವ 115 ದ್ವೀಪಗಳ ದ್ವೀಪಸಮೂಹ.

**ಶಿಶು ಮರಣ ಪ್ರಮಾಣ ತಗ್ಗಿಸುವಲ್ಲಿ ಸಾಧನೆ ಮಾಡಿರುವ ರಾಜ್ಯಗಳಿಗೆ ಪ್ರೋತ್ಸಾಹ ಧನ**

ಶಿಶು ಮರಣ ಪ್ರಮಾಣವನ್ನು ತಗ್ಗಿಸುವ ನಿಟ್ಟಿನಲ್ಲಿ ರಾಜ್ಯಗಳನ್ನು ಉತ್ತೇಜಿಸುವ ಸಲುವಾಗಿ ಶ್ರೇಷ್ಠ ಸಾಧನೆ ಮಾಡಿದ ರಾಜ್ಯಗಳಿಗೆ ಪ್ರೋತ್ಸಾಹ ಧನ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮಿಲೇನಿಯಂ ಡೆವಲಪ್ ಮೆಂಟ್ ಗೋಲ್ (Millennium Development Goal)-2000 ಪ್ರಕಾರ 2015 ರ ಹೊತ್ತಿಗೆ ಭಾರತವೂ ಶಿಶು ಮರಣ ಪ್ರಮಾಣವನ್ನು 28 ಕ್ಕೆ ತಗ್ಗಿಸುವ ಗುರಿ ಹೊಂದಿದ್ದು, 2011 ರ ವೇಳೆಗೆ ಶಿಶು ಮರಣ ಪ್ರಮಾಣವು 44 ರಷ್ಟಿದೆ. ಮುಂದಿನ ಎರಡು ವರ್ಷಗಳಲ್ಲಿ ಗುರಿ ಮುಟ್ಟುವ ಕಾತುರದಿಂದ ರಾಜ್ಯಗಳ ಬೆನ್ನು ತಟ್ಟಲು ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

- 13 ನೇ ಹಣಕಾಸು ಆಯೋಗ ಈ ಸಲಹೆಯನ್ನು ನೀಡಿದ್ದು, ರೂ.1500 ಕೋಟಿ ಹಣವನ್ನು 2009 ರಿಂದ 2012 ರ ಅವಧಿಯಲ್ಲಿ ಶಿಶು ಮರಣ ಪ್ರಮಾಣ ತಗ್ಗಿಸಲು ಉತ್ತಮ ಸಾಧನೆ ಮಾಡಿದ ರಾಜ್ಯಗಳಿಗೆ ಪ್ರೋತ್ಸಾಹ ಧನವಾಗಿ ನೀಡಲಾಗುವುದು.
- ಕೇವಲ 11 (1000 ಕ್ಕೆ) ಶಿಶು ಮರಣ ಪ್ರಮಾಣ ಹೊಂದಿ ಅಗ್ರಸ್ಥಾನದಲ್ಲಿರುವ ಮಣಿಪುರ ರಾಜ್ಯಕ್ಕೆ ಅತಿ ಹೆಚ್ಚು ಅಂದರೆ 458 ಕೋಟಿ ಪ್ರೋತ್ಸಾಹ ಧನ ಸಿಗಲಿದೆ. ನಂತರ ಸ್ಥಾನದಲ್ಲಿರುವ ತಮಿಳುನಾಡಿಗೆ 168 ಕೋಟಿ ಲಭಿಸಲಿದೆ.
- ಒಟ್ಟು 11 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಶಿಶು ಮರಣ ಪ್ರಮಾಣ ತಗ್ಗಿಸುವಲ್ಲಿ ಪ್ರಯತ್ನ ಪಟ್ಟಿದ್ದು, ಅದರಲ್ಲಿ ದೆಹಲಿ, ಕೇರಳ ಮತ್ತು ಮಹಾರಾಷ್ಟ್ರ ಗುರಿಯನ್ನು ತಲುಪುವಲ್ಲಿ ಯಶಸ್ವಿಯಾಗಿವೆ. ಈ ಕಾರ್ಯಕ್ರಮದಡಿ ಕರ್ನಾಟಕಕ್ಕೆ 53 ಕೋಟಿ ಸಿಗಲಿದೆ.

**ಪರಿಷ್ಕೃತ ವಿದ್ಯುನ್ಮಾನ ಮತದಾನ ಯಂತ್ರ ಬಳಕೆಗೆ ಚುನಾವಣಾ ಆಯೋಗ ಸಿದ್ಧ**

ಪರಿಷ್ಕೃತ ನವೀನ ಮಾದರಿಯ ವಿದ್ಯುನ್ಮಾನ ಮತದಾನ ಯಂತ್ರ ಬಳಕೆಗೆ ಶೀಘ್ರವೇ ಚುನಾವಣಾ ಆಯೋಗ ಹಸಿರು ನಿಶಾನೆ ತೋರಲಿದೆ ಎಂದು ಅಧಿಕೃತ ಮಾಹಿತಿಗಳು ತಿಳಿಸಿವೆ. ಈ ಸಂಬಂಧ ಪರಿಣಿತರ ಸಮಿತಿಯೊಂದು ಈ ಯಂತ್ರಗಳನ್ನು ಪರೀಕ್ಷೆಯನ್ನು ಕೈಗೊಂಡಿದ್ದು ಅದರ ವರದಿಯನ್ನು ಚುನಾವಣಾ ಆಯೋಗಕ್ಕೆ ರವಾನಿಸಲಾಗಿದೆ.

ಏನಿದು ಪರಿಷ್ಕೃತ ವಿದ್ಯುನ್ಮಾನ ಮತದಾನ ಯಂತ್ರ?

- ವೋಟರ್ ವೆರಿಫೈಯಬಲ್ ಪೇಪರ್ ಟ್ರಯಲ್ (Voter Verifiable Paper Trail) ಎಂಬ ಹೊಸ ವ್ಯವಸ್ಥೆ ಹೊಂದಿರುವ ಪರಿಷ್ಕೃತ ವಿದ್ಯುನ್ಮಾನ ಯಂತ್ರಗಳಲ್ಲಿ ಪ್ರಿಂಟಿಂಗ್ ಘಟಕವೊಂದನ್ನು ಅಳವಡಿಸಲಾಗಿದ್ದು, ಮತದಾರರು ಮತ ಚಲಾಯಿಸದ ಬಳಿಕ ತಮ್ಮ ಮತದಾನದ ವರದಿಯ ಮುದ್ರಣ ಪ್ರತಿಯೊಂದು ಹೊರಬರಲಿದೆ, ಇದನ್ನು ಮತದಾರರು ಓದಬಹುದಾಗಿರುತ್ತದೆ. ಇದರಿಂದ ಮತದಾರರು ತಾವೂ ಮಾಡಿರುವ ಮತದಾನ ಸರಿಯಾಗಿದೆಯೇ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ಮತದಾನ ಯಂತ್ರದಲ್ಲಿ ಮೋಸ ಮಾಡಬಹುದು, ಮತಗಳನ್ನು ತಿರುಗ ಮರುಗ ಮಾಡಬಹುದು ಎಂಬ ತಪ್ಪು ಕಲ್ಪನೆ ಜನರಲ್ಲಿ ಮೂಡಿತ್ತು. ಆದರೆ ಈ ಹೊಸ ವ್ಯವಸ್ಥೆಯಿಂದ ಅದು ದೂರವಾಗಲಿದೆ.
- ಸದ್ಯ 2006 ರಿಂದ ಬಳಕೆಯಲ್ಲಿರುವ ಸುಮಾರು 6 ಲಕ್ಷ ಮತದಾನ ಯಂತ್ರಗಳಿಗೆ ಈ ಹೊಸ ವ್ಯವಸ್ಥೆಯನ್ನು ಅಳವಡಿಸಲಾಗುವುದು. ಇದಕ್ಕೆ ಬರೋಬ್ಬರಿ ರೂ.540 ಕೋಟಿ ತಗುಲುವುದು ಎಂದು ಅಂದಾಜಿಸಲಾಗಿದೆ. ಪ್ರತಿ ಯಂತ್ರದ ಮೇಲೆ ಸುಮಾರು 8,000-9,000 ರೂ ಹೆಚ್ಚುವರಿ ಖರ್ಚು ಆಗಲಿದೆ.

- ಮೀಜೋರಂ ನಲ್ಲಿ ನಡೆಯಲಿರುವ ಉಪ ಚುನಾವಣೆಯಲ್ಲಿ ಇವುಗಳ ಬಳಕೆಗೆ ನಿರ್ಧರಿಸಲಾಗಿತ್ತು, ಆದರೆ ಪರಿಷ್ಕರಣೆಯಲ್ಲಿ ಆಗುತ್ತಿರುವ ವಿಳಂಬದಿಂದಾಗಿ ಮುಂದೂಡಲಾಗಿದೆ.

**ರಕ್ಷಣಾ ಸಾಮಾಗ್ರಿ ಖರೀದಿ ಭಾರತದಲ್ಲೂ ಭ್ರಷ್ಟಚಾರ**

ರಕ್ಷಣಾ ಸಾಮಾಗ್ರಿಗಳ ಖರೀದಿಯಲ್ಲಿ ಭ್ರಷ್ಟಚಾರದಲ್ಲಿ ತೊಡಗಿರುವ ದೇಶಗಳ ಪೈಕಿ ಭಾರತವೂ ಒಂದು ಎಂಬ ಸತ್ಯಾಂಶ ಹೊರಗೆ ಬಿದ್ದದೆ. ಭಾರತದಲ್ಲಿ ರಕ್ಷಣಾ ಸಾಮಾಗ್ರಿಗಳ ಖರೀದಿಯಲ್ಲಿರುವ ಪಾರದರ್ಶಕದ ಕೊರತೆಯಿಂದಾಗಿ ಭ್ರಷ್ಟಚಾರ ಹೆಚ್ಚಾಗಲು ಕಾರಣ ಎಂದು ಸಮೀಕ್ಷೆ ತಿಳಿಸಿದೆ.

- ಟ್ರಾನ್ಸಪರನ್ಸಿ ಇಂಟರ್ ನ್ಯಾಷನಲ್ (Transparency International) ಎಂಬ ಸಂಸ್ಥೆ "ಗೌರ್ನಮೆಂಟ್ ಡಿಫೆನ್ಸ್ ಆಂಟಿ ಕರಪಶನ್ ಇಂಡೆಕ್ಸ್ (Government Defence Anti-corruption Index)" ಎಂಬ ಶೀರ್ಷಿಕೆಯಡಿ ನಡೆಸಿರುವ ಸಮೀಕ್ಷೆಯ ವರದಿ ಪ್ರಕಾರ ಈ ಸಮೀಕ್ಷೆ ನಡೆಸಿದ ದೇಶಗಳಲ್ಲಿ ಶೇ.36% ರಾಷ್ಟ್ರಗಳು ಭ್ರಷ್ಟಚಾರದಲ್ಲಿ ತೊಡಗಿದ್ದು, ಈ ಪಟ್ಟಿಯಲ್ಲಿ ಭಾರತ ಮತ್ತು ಚೀನಾ ಸಹ ಸೇರಿವೆ.
- ಈ ಸಮೀಕ್ಷೆಯಡಿ ರಕ್ಷಣಾ ಸಚಿವಲಾಯಕ್ಕೆ ಸಂಬಂಧಿಸಿದಂತೆ ಒಟ್ಟು 77 ಪ್ರಶ್ನೆಗಳನ್ನು ಕೇಳಲಾಗಿದೆ. ರಕ್ಷಣಾ ಸಾಮಾಗ್ರಿಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಒಟ್ಟು 82 ದೇಶಗಳನ್ನು ಈ ಸಮೀಕ್ಷೆಯಡಿ ತರಲಾಗಿದೆ.
- ವರದಿಯ ಪ್ರಕಾರ ಜರ್ಮನಿ ಮತ್ತು ಆಸ್ಟ್ರೇಲಿಯಾದಲ್ಲಿ ಅತಿ ಹೆಚ್ಚು ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗಿದೆ ಮತ್ತು ರಕ್ಷಣಾ ಸಾಮಾಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಸುಸಜ್ಜಿತ ವ್ಯವಸ್ಥೆಯನ್ನು ಅಲ್ಲಿ ನಿರ್ವಹಿಸಲಾಗಿದೆ. ಒಟ್ಟು 82 ದೇಶಗಳ ಪಟ್ಟಿಯಲ್ಲಿ 57 ದೇಶಗಳಲ್ಲಿ ರಕ್ಷಣಾ ಸಾಮಾಗ್ರಿಗಳ ಖರೀದಿಯಲ್ಲಿ ಪಾರದರ್ಶಕತೆಯ ನಿರ್ವಹಣೆಯಾಗಿಲ್ಲ. ಪಾರದರ್ಶಕತೆಯ ಆಧಾರದ ಮೇಲೆ ದೇಶಗಳನ್ನು D, E ಮತ್ತು F ವರ್ಗಗಳನ್ನಾಗಿ ಮಾಡಿದ್ದು, ಭಾರತ F ವರ್ಗದಲ್ಲಿದೆ.

ಭಾರತದಲ್ಲಿ ಭ್ರಷ್ಟಚಾರ ಹೇಗೆ?

ಪ್ರಪಂಚದಲ್ಲಿ ಅತಿ ಹೆಚ್ಚು ರಕ್ಷಣಾ ಸಾಮಾಗ್ರಿಗಳನ್ನು ಆಮದು ಮಾಡಿಕೊಳ್ಳುವ ದೇಶವೆಂಬ ಹೆಗ್ಗಳಿಕೆಯನ್ನು ಹೊಂದಿರುವ ಭಾರತ, ಈ ಸಾಮಾಗ್ರಿಗಳ ಖರೀದಿ ಮೊತ್ತವನ್ನು ಪಾವತಿಸುತ್ತಿರುವ ವಿಧಾನ ಕಳಪೆ ಮಟ್ಟದಿಂದ ಕೂಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಅಲ್ಲದೇ, ಭಾರತ ಮತ್ತು ಚೀನಾ ದೇಶಗಳಲ್ಲಿ ರಹಸ್ಯವಾಗಿ ನಡೆಸಲಾಗುವ ರಕ್ಷಣಾ ಕಾರ್ಯಚರಣೆಗೆ ತಗಲುವ ವೆಚ್ಚವನ್ನು ಬಹಿರಂಗಗೊಳಿಸುವುದಿಲ್ಲ ಮತ್ತು ಈ ಮೊತ್ತವನ್ನು ಲೆಕ್ಕ ತಪಾಸಣೆಗು ಒಳಪಡಿಸದ ಕಾರಣ ಭ್ರಷ್ಟಚಾರದ ನೆರಳು ದಟ್ಟವಾಗಿ ಹಬ್ಬಿದೆ.

**ಮಹಿಳಾ ದೌರ್ಜನ್ಯ ನಿಗ್ರಹಿಸಲು ಸುಗ್ರೀವಾಜ್ಞೆ**

ದೇಶವನ್ನೇ ತಲ್ಲಣಗೊಳಿಸಿದ ದೆಹಲಿ ಸಾಮೂಹಿಕ ಅತ್ಯಾಚಾರದಂತ ಪ್ರಕರಣಗಳು ಮತ್ತೆ ಮರುಕಳಿಸದಿರುವಂತೆ ಹಾಗೂ ಮಹಿಳಾ ದೌರ್ಜನ್ಯ ತಡೆಗಟ್ಟಲು ಈಗಿರುವ ಕಾನೂನುಗಳಿಗೆ ತಿದ್ದುಪಡಿ ತರುವ ಸಲುವಾಗಿ ಸುಗ್ರೀವಾಜ್ಞೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಭಾರತೀಯ ದಂಡ ಸಂಹಿತೆ, ಭಾರತೀಯ ಅಪರಾಧ ಪ್ರಕ್ರಿಯೆ ಸಂಹಿತೆ ಮತ್ತು ಸಾಕ್ಷ್ಯಧಾರ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಅತ್ಯಾಚಾರಿಗಳಿಗೆ ಗರಿಷ್ಠ ಮಟ್ಟದ ಶಿಕ್ಷೆ ವಿಧಿಸಲು ಸುಗ್ರೀವಾಜ್ಞೆ ಅವಕಾಶ ನೀಡಲಿದೆ. ದೆಹಲಿ ಅತ್ಯಾಚಾರದ ಹಿನ್ನಲೆಯಲ್ಲಿ ಕಾನೂನು ತಿದ್ದುಪಡಿಗಳಿಗೆ ಸಲಹೆ ನೀಡಲು ರಚಿಸಲಾದ ಜೆ.ಎಸ್. ವರ್ಮಾ ಸಮಿತಿಯ ಶಿಫಾರಸ್ಸಿನ ಅನ್ವಯ ಇದನ್ನು ಹೊರಡಿಸಲಾಗಿದೆ. ರಾಷ್ಟ್ರಪತಿಗಳು ಈ ಸುಗ್ರೀವಾಜ್ಞೆನೆಗೆ ಸಹಿ ಹಾಕಿದರೆ ಇದು ಕಾನೂನಾಗಿ ಜಾರಿಯಾಗುವುದು.

ಸುಗ್ರೀವಾಜ್ಞೆ ಬಗ್ಗೆ

- ಸಂವಿಧಾನದ ಪರಿಚ್ಛೇದ 123 ರಡಿ ಸುಗ್ರೀವಾಜ್ಞೆ ಅಥವಾ Ordinance ಗೆ ಅವಕಾಶ ಕಲ್ಪಿಸಲಾಗಿದೆ.
- ಭಾರತದ ಪ್ರಥಮ ಪ್ರಜೆಗಳಾದ ರಾಷ್ಟ್ರಪತಿಗಳು ಸುಗ್ರೀವಾಜ್ಞೆಯನ್ನು ಹೊರಡಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಇದು ಅವರ ಶಾಸನಾತ್ಮಕ ಅಧಿಕಾರವಾಗಿರುತ್ತದೆ.

ಸುಗ್ರೀವಾಜ್ಞೆಯನ್ನು ಯಾವಾಗ ಹೊರಡಿಸಲಾಗುತ್ತದೆ?

- ಸಂಸತ್ತಿನ ಎರಡು ಸದನಗಳು ಅಧಿವೇಶನದಲ್ಲಿ ಇಲ್ಲದ ವೇಳೆಯಲ್ಲಿ ತುರ್ತಾಗಿ ಕಾನೂನೊಂದನ್ನು ರೂಪಿಸುವ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ಅನಿಸಿದರೆ ಸುಗ್ರೀವಾಜ್ಞೆಯನ್ನು ಹೊರಡಿಸುತ್ತದೆ. ಅಥವಾ ಯಾವುದಾದರು ಒಂದು ಸದನ ಅಧಿವೇಶನದಲ್ಲಿದ್ದರು ಸುಗ್ರೀವಾಜ್ಞೆಯನ್ನು ಹೊರಡಿಸಬಹುದಾಗಿದೆ ಏಕೆಂದರೆ ಕಾನೂನು ರೂಪಗೊಳ್ಳಲು ಸಂಸತ್ತಿನ ಎರಡು ಸದನಗಳ ಒಪ್ಪಿಗೆ ಅತಿ ಅವಶ್ಯಕ. ಆದರೆ ಇದಕ್ಕೆ ರಾಷ್ಟ್ರಪತಿಗಳ ಸಹಿ ಬಿದ್ದ ಮೇಲೆ ಮಾತ್ರವೇ ಕಾನೂನಾಗಿ ಜಾರಿಗೊಳ್ಳುತ್ತದೆ.
- ರಾಷ್ಟ್ರಪತಿಗಳ ಮೂಲಕ ಹೊರಡಿಸದ ಸುಗ್ರೀವಾಜ್ಞೆಯನ್ನು ಮುಂದಿನ 6 ತಿಂಗಳೊಳಗೆ ಸಂಸತ್ ಎರಡು ಸದನಗಳ ಮುಂದೆ ಮಂಡಿಸತಕ್ಕದ್ದು, ಇದನ್ನು ಸಂಸತ್ತು ಅಂಗೀಕರಿಸಿದರೆ ಕಾನೂನು ಆಗಿ ಜಾರಿಗೊಳ್ಳುತ್ತದೆ. ಒಂದು ವೇಳೆ ಅಂಗೀಕರಿಸದಿದ್ದರೆ ಮಾನ್ಯತೆ ಕಳೆದುಕೊಳ್ಳುತ್ತದೆ. ಒಂದೊಮ್ಮೆ ಸಂಸತ್ತು ಈ ಸುಗ್ರೀವಾಜ್ಞೆ ಮೇಲೆ ಯಾವುದೇ ಕ್ರಮ ವಹಿಸದಿದ್ದರೆ ಸದನಗಳು ಅಧಿವೇಶನ ಸೇರಿದ 6 ವಾರದ ನಂತರ ಮಾನ್ಯತೆ ಕಳೆದುಕೊಳ್ಳುತ್ತದೆ. <u>ಆದ್ದರಿಂದ ಸುಗ್ರೀವಾಜ್ಞೆಗೆ ಇರುವ ಗರಿಷ್ಠ ಕಾಲ ಆರು ತಿಂಗಳು ಮತ್ತು 6 ವಾರ (7 ½ ತಿಂಗಳು ಮಾತ್ರ).</u>
- ರಾಷ್ಟ್ರಪತಿಗಳು ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಲುಬಹುದು ಆದರೆ ಸುಗ್ರೀವಾಜ್ಞೆ ಹೊರಡಿಸುವ ಮತ್ತು ಹಿಂತೆಗೆದುಕೊಳ್ಳುವ ಸ್ವಾಂತಂತ್ರ ಅಧಿಕಾರ ಅವರಿಗಿಲ್ಲ. ಪ್ರಧಾನ ಮಂತ್ರಿಯವರು ನೇತೃತ್ವವಹಿಸಿರುವ ಸಚಿವ ಮಂಡಳಿ ಸಲಹೆ ಮೇರೆಗೆ ಅಷ್ಟೇ ರಾಷ್ಟ್ರಪತಿಗಳು ನಿರ್ಧರಿಸಬಹುದು.
- ಸುಗ್ರೀವಾಜ್ಞೆ ಮತ್ತು ಸಂಸತ್ತು ಮುಖಾಂತರ ಜಾರಿಗೊಳ್ಳುವ ಕಾಯ್ದೆಗಳು ಸಮನಾದ ಬಲವನ್ನು ಹೊಂದಿರುತ್ತವೆ ಆದರೆ ಪ್ರಮುಖ ವ್ಯತ್ಯಾಸವೆಂದರೆ ಸುಗ್ರೀವಾಜ್ಞೆ ತಾತ್ಕಾಲಿಕ ಕಾಯ್ದೆಯಾಗಿರುತ್ತದೆ ಇದನ್ನು ಅಂಗೀಕರಿಸುವುದು ಅಥವಾ ತಿರಸ್ಕರಿಸುವುದು ಸಂಸತ್ತಿನ ಅಂತಿಮ ತಿರ್ಮಾನಕ್ಕೆ ಒಳಪಟ್ಟಿರುತ್ತದೆ.

**ಪ್ರಸಾರ ಭಾರತಿ ಯ ಉನ್ನತಿಕರಣಕ್ಕೆ ಸ್ಯಾಮ್ ಪಿತ್ರೋಡ ಅಧ್ಯಕ್ಷತೆಯಲ್ಲಿ ಸಮಿತಿ**

ಮಾಹಿತಿ ಮತ್ತು ಪ್ರಸಾರ ಸಚಿವಾಲಯವೂ, ಪ್ರಸಾರ ಭಾರತಿಯ ಸಾಂಸ್ಥಿಕ ಚೌಕಟ್ಟು, ಸರ್ಕಾರದ ಜೊತಗಿನ ಸಂಬಂಧ ಮತ್ತು ತಾಂತ್ರಿಕ ಉನ್ನತೀಕರಣ ಹಾಗೂ ಸಾರ್ವಜನಿಕ ಪ್ರಸಾರ ಮಾಧ್ಯಮವಾಗಿ ಮುಂದುವರೆಯಲು ಅಗತ್ಯವಿರುವ ಕ್ರಮಗಳನ್ನು ಪರಿಶೀಲಿಸುವ ಸಲುವಾಗಿ ಸ್ಯಾಮ್ ಪಿತ್ರೋಡ ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಿದೆ.

ಸಮಿತಿಯ ಮುಖ್ಯ ಕಾರ್ಯಗಳೇನು?

- ಸರ್ಕಾರದ ಜೊತೆ ವಿಶೇಷ ಸಂಬಂಧ ಹೊಂದುವ ಮೂಲಕ ಸಾರ್ವಜನಿಕ ಪ್ರಸಾರ ಭಾರತಿಯ ಪಾತ್ರವನ್ನು ವರ್ಧಿಸಲು ಮತ್ತು ಸರ್ಕಾರದ ಜೊತೆ ಉಳಿಸಿಕೊಳ್ಳಲು ಸಲಹೆಗಳನ್ನು ಶಿಫಾರಸ್ಸು ಮಾಡುವುದು.
- ಈ ಹಿಂದೆ ರಚಿಸಲಾದ ಸಮಿತಿಗಳಾದ ನಾರಾಯಣ ಮೂರ್ತಿ ಸಮಿತಿ, ಭಕ್ಷಿ ಸಮಿತಿ ಮತ್ತು ಸೇನ್ ಸಮಿತಿಗಳ ಸಲಹೆಗಳ ಅನುಷ್ಠಾನದ ಸ್ಥಿತಿ ಗತಿಯನ್ನು ಪರಿಶೀಲಿಸುವುದು.

ಮಾಹಿತಿಗಳ ಡಿಜಿಟಲೀಕರಣ, ಅವುಗಳ ಬಳಕೆ ಮತ್ತು ಪ್ರಸಾರದ ಬಗ್ಗೆ ಸೂಕ್ತ ಸಲಹೆಗಳನ್ನು ನೀಡುವುದು ಈ ಸಮಿತಿಯ ಹೊಣೆಗಾರಿಕೆಯಾಗಿದೆ.

**ಪರಮಾಣು ಶಕ್ತಿ ನಿಯಂತ್ರಣ ಮಂಡಳಿ (Atomic Energy Regulatory Board) ಜೊತೆ ಓಡಿಶಾ ಮತ್ತು ಮಹಾರಾಷ್ಟ್ರ ರಾಜ್ಯಗಳ ಒಪ್ಪಂದ**

ವೈದ್ಯಕೀಯ ಕ್ಷೇತ್ರದಲ್ಲಿ ಬಳಸಲಾಗುವ X-ರೇ ಗಳ ಸುರಕ್ಷಿತ ಬಳಕೆ ಮತ್ತು ಮಿತಿಮೀರಿದ ಬಳಕೆಯ ನಿಯಂತ್ರಣ ತರಲು ವಿಕಿರಣ ಸುರಕ್ಷಣಾ ನಿರ್ದೇಶನಾಲಯವನ್ನು ಸ್ಥಾಪಿಸುವ ಸಂಬಂಧ ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯು, ಮಹಾರಾಷ್ಟ್ರ ಮತ್ತು ಓಡಿಶಾ ರಾಜ್ಯಗಳ ಜೊತೆ ಒಡಂಬಡಿಕೆಗೆ ಸಹಿ ಮಾಡಿದೆ. ಈ ಮೂಲಕ ಒಟ್ಟು 10 ರಾಜ್ಯಗಳೊಂದಿಗೆ AERB ಯು ಈ ಒಪ್ಪಂದವನ್ನು ಮಾಡಿಕೊಂಡಂತ್ತಾಗಿದೆ. ಈ ಹಿಂದೆ ಕೇರಳ, ಮಿಜೋರಾಂ, ಮಧ್ಯಪ್ರದೇಶ, ತಮಿಳುನಾಡು, ಪಂಜಾಬ್, ಚತ್ತೀಸಘರ್, ಗುಜರಾತ್ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ಜೊತೆ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಉತ್ತರ ಪ್ರದೇಶ, ಆಂಧ್ರ ಪ್ರದೇಶ ಮತ್ತು ಬಿಹಾರ ರಾಜ್ಯದ ಸರ್ಕಾರಗಳು ಶೀಘ್ರದಲ್ಲಿ ಈ ಒಡಂಬಡಿಕೆಗೆ ಸಹಿ ಹಾಕಲಿವೆ.

ಯಾಕೆ ಈ ಒಪ್ಪಂದ?

ಇತ್ತೀಚಿನ ದಿನಗಳಲ್ಲಿ ರೋಗನಿರ್ಣಯ ಮಾಡುವ X-ರೇ ವಿಕಿರಣಗಳ ಘಟಕಗಳು ನಾಯಿ ಕೊಡೆಯಂತೆ ತಲೆಯೆತ್ತಿದ್ದು, ಸುಮಾರು 50,000 ಕ್ಕೂ ಹೆಚ್ಚು ಘಟಕಗಳು ದೇಶದಲ್ಲಿ ಇರುವುದಾಗಿ ಅಂದಾಜಿಸಲಾಗಿದೆ. ಪ್ರತಿ ವರ್ಷ ಸುಮಾರು ರೋಗಿಗಳು X-ರೇ ವಿಕಿರಣಗಳ ಚಿಕಿತ್ಸೆಗೆ ಒಳಗಾಗುತ್ತಿರುವುದು ಸರ್ವೆ ಸಾಮಾನ್ಯವಾಗಿದೆ. ಒಂದು ವೇಳೆ ಈ X-ರೇ ಘಟಕಗಳ ವಿನ್ಯಾಸ ಸರಿಯಿಲ್ಲದ ಪಕ್ಷದಲ್ಲಿ ಅಥವಾ ಸರಿಯಾಗಿ ಕಾರ್ಯನಿರ್ವಹಿಸದ ಪಕ್ಷದಲ್ಲಿ ದೊಡ್ಡ ಆಪಾತ್ತನ್ನೇ ತಂದೊಡ್ಡಲಿವೆ. ಇಂತಹ X-ರೇ ಘಟಕಗಳ ಸುರಕ್ಷತಾ ಮಟ್ಟವನ್ನು ಪರಿಶೀಲಿಸುವುದು AERB ನ ಜವಾಬ್ದಾರಿಯಾಗಿದೆ. ಗಣನೀಯ ಸಂಖ್ಯೆಯಲ್ಲಿ ತಲೆಯೆತ್ತುತ್ತಿರುವ ಇಂತಹ X-ರೇ ಘಟಕಗಳ ಸುರಕ್ಷತ ಮಟ್ಟವನ್ನು ಪರಿಶೀಲಿಸುವ ಸಲುವಾಗಿ ರಾಜ್ಯ ಮಟ್ಟದಲ್ಲಿ ವಿಕಿರಣಾ ಸುರಕ್ಷತಾ ನಿರ್ದೇಶನಾಲಯಾಗಳನ್ನು (Directorate of Radiation Safety) ತೆರೆಯಲು ರಾಜ್ಯಗಳ ಜೊತೆ AERB ಒಂಡಬಡಿಕೆ ಮಾಡಿಕೊಳ್ಳುತ್ತಿದೆ.

ಪರಮಾಣು ಶಕ್ತಿ ನಿಯಂತ್ರಣ ಮಂಡಳಿ (AERB)

ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯನ್ನು ನವೆಂಬರ್ 15, 1983 ರಂದು ಭಾರತದ ರಾಷ್ಟ್ರಪತಿಗಳ ಮೂಲಕ ಸ್ಥಾಪಿಸಲಾಗಿದೆ. ಪರಮಾಣು ಶಕ್ತಿ ಕಾಯ್ದೆ-1962 ರ ಸೆಕ್ಷನ್ 17 ರಡಿಯಲ್ಲಿ ಈ ಮಂಡಳಿಯು ಕಾರ್ಯನಿರ್ವಹಿಸುತ್ತಿದ್ದು, ಪರಮಾಣು ಶಕ್ತಿಗೆ ಸಂಬಂಧಿಸಿದಂತೆ ನಿಯಂತ್ರಣ ಮತ್ತು ಸುರಕ್ಷತೆಯ ಬಗ್ಗೆ ನಿಗಾವಹಿಸುವುದು ಇದರ ಮುಖ್ಯ ಕಾರ್ಯ. AERB ಯು ಮುಂಬೈನಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿದೆ.

**ಸಿನಿಮಾಟೊಗ್ರಫಿ ಕಾಯ್ದೆ ಪರಿಶೀಲನೆಗೆ ಸಮಿತಿ**

ಕಮಲ್ ಹಾಸನ್ ನಟಿಸಿ, ನಿರ್ದೇಶಿಸಿರುವ "ವಿಶ್ವರೂಪಂ" ಚಿತ್ರದ ವಿವಾದದ ಹಿನ್ನೆಲೆಯಲ್ಲಿ ಸಿನಿಮಾಟೊಗ್ರಫಿ ಕಾಯ್ದೆಯ ಪುನರ್ ಪರಿಶೀಲನೆ ನಡೆಸಿ ಮತ್ತಷ್ಟು ಬಲಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಎಂಟು ಜನರ ಸಮಿತಿಯೊಂದನ್ನು ರಚಿಸಿದೆ. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಮುಕುಲ್ ಮುದ್ಗಲ್ ರವರ ನೇತೃತ್ವದಲ್ಲಿ ಈ ಸಮಿತಿಯನ್ನು ರಚಿಸಿದ್ದು, ನಟಿ ಶರ್ಮಿಳಾ ಟಾಗೋರ್ ಮತ್ತು ಖ್ಯಾತ ಕವಿ ಜಾವೇದ್ ಅಕ್ತರ್ ಸೇರಿದಂತೆ ಎಂಟು ಜನ ಸದಸ್ಯರನ್ನು ಈ ಸಮಿತಿಯು ಒಳಗೊಂಡಿದೆ.

ಸಮಿತಿ ಯಾಕೆ?

- ಕಮಲ್ ಹಾಸನ್ ರವರ "ವಿಶ್ವ ರೂಪಂ" ಸಿನಿಮಾಗೆ ಸೆನ್ಸಾರ್ ಮಂಡಳಿಯಿಂದ ಅನುಮತಿ ದೊರೆತ ಮೇಲೆಯೂ ಜಯಲಲಿತ ಸರ್ಕಾರ ತಮಿಳುನಾಡಿನಲ್ಲಿ ಚಿತ್ರ ಪ್ರದರ್ಶನಕ್ಕೆ ನಿಷೇಧ ಹೇರಿತ್ತು. ಸಂವಿಧಾನದ ಏಳನೇ ಪರಿಚ್ಛೇದದ ಪ್ರಕಾರ ಯಾವುದೇ ಚಿತ್ರ ಪ್ರದರ್ಶನಕ್ಕೆ ಅರ್ಹವೇ ಅಥವಾ ಅನರ್ಹವೇ ಎಂದು ನಿರ್ಧರಿಸುವ ಹಕ್ಕುಗಳನ್ನು ಕೇಂದ್ರ ಸರ್ಕಾರ ಸೆನ್ಸಾರ್ ಮಂಡಳಿಯ ಮುಖಾಂತರ ಚಲಾಯಿಸುತ್ತದೆ. ಮಂಡಳಿ ಹಸಿರು ನಿಶಾನೆ ತೋರಿದೆ ಮೇಲೆ ಅದರ ಮೇಲೆ ನಿಷೇಧ ಹೇರುವ ಹಕ್ಕು ರಾಜ್ಯ ಸರ್ಕಾರಕ್ಕೆ ಇಲ್ಲ ಆಗಾಗಿ ಈ ಕಾಯ್ದೆಯನ್ನು ಪುನರ್ ಪರಿಶೀಲಿಸಿ ಮತ್ತಷ್ಟು ಬಲಗೊಳಿಸುವ ಸಲುವಾಗಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವೂ ಈ ಸಮಿತಿಯನ್ನು ರಚಿಸಿದೆ.

**ಕೇಂದ್ರ ಭದ್ರತಾ ಸಂಸ್ಥೆಗೆ ಈಗ ಚೇನಾಕಿಂಗ್ ಮತ್ತು ಸ್ಪೈಡರ್ ಮ್ಯಾನ್ ಚಿಂತೆ**

ಚೇನಾ ಕಿಂಗ್, ಸ್ಪೈಡರ್ ಮ್ಯಾನ್ ಅರೆ ಇದೇನು ಹಾಲಿವುಡ್ ಸಿನಿಮಾಗಳ ಹೆಸರೇ ಎಂದು ನೀವೂ ಯೋಚಿಸಿದರೆ ನಿಮ್ಮ ಊಹೆ ತಪ್ಪು. ಚೇನಾಕಿಂಗ್ ಮತ್ತು ಸ್ಪೈಡರ್ ಮ್ಯಾನ್ ಇವೆರಡೂ ಮೊಬೈಲ್ ಸಂಬಂಧಿಸಿದ ತಂತ್ರಾಂಶಗಳಾಗಿದ್ದು ಕೇಂದ್ರ ಭದ್ರತಾ ಸಿಬ್ಬಂದಿಗೆ ತಲೆನೋವಾಗಿ ಪರಿಣಮಿಸಿದೆ.

- ಈ ತಂತ್ರಾಂಶಗಳು ಚೇನಾ ಮೊಬೈಲ್ ಗಳಲ್ಲಿರುವ "ಅಂತರ್ ರಾಷ್ಟ್ರೀಯ ಮೊಬೈಲ್ ಸ್ಟೇಷನ್ ಉಪಕರಣಗಳ ಗುರುತಿನ ಸಂಖ್ಯೆಯನ್ನು(International Mobile Station Equipment Identity, IMEI)" ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಭದ್ರತಾ ವ್ಯವಸ್ಥೆಗೆ ದಕ್ಕೆ ಬರಲಿರುವುದು ಖಚಿತವಾಗಿದೆ.

- ಇತ್ತೀಚೆಗೆ ಮಧ್ಯ ಪ್ರದೇಶದಲ್ಲಿ ಇಂಥದೊಂದು ಪ್ರಕರಣ ಪತ್ತೆಯಾಗಿರುವುದು ದೇಶದಲ್ಲಿ ಸಂಚಲನ ಮೂಡಿಸಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 65 ರಡಿ ಇಂತಹ ಪ್ರಕರಣಗಳನ್ನು ದಾಖಲಸಿಕೊಳ್ಳಬಹುದಾಗಿದ್ದು ಕನಿಷ್ಠ ಮೂರು ವರ್ಷಗಳ ಜೈಲು ಅಥವಾ ರೂ.2 ಲಕ್ಷ ದಂಡ ವಿಧಿಸಬಹುದಾಗಿದೆ.
- ಈ ಪ್ರಕರಣವನ್ನು ಕೇಂದ್ರ ಗೃಹ ಸಚಿವಾಲಯವೂ ಗಂಭೀರವಾಗಿ ಪರಿಗಣಿಸಿದ್ದು, ಚೀನಾದಿಂದ ಅಪೂರ್ಣ IMEI ನಂಬರ್ ಹೊಂದಿರುವ ಮೊಬೈಲ್ ಗಳ ಆಮದುಗಳ ಮೇಲೆ ನಿಷೇಧ ಹೇರಲಾಗಿದೆ.

IMEI ಎಂದರೇನು?

- ಎಲ್ಲಾ ಮೊಬೈಲ್ ಉಪಕರಣಗಳು 15 ಅಂಕಿಗಳ "ಅಂತರ್ ರಾಷ್ಟ್ರೀಯ ಮೊಬೈಲ್ ಸ್ಟೇಷನ್ ಉಪಕರಣಗಳ ಗುರುತಿನ ಸಂಖ್ಯೆ" ಅಥವಾ IMEI ನಂಬರನ್ನು ಹೊಂದಿರುತ್ತವೆ. ಭದ್ರತಾ ವ್ಯವಸ್ಥೆಯ ದೃಷ್ಟಿಯಿಂದ ಈ ನಂಬರ್ ಗಳನ್ನು ಅಳವಡಿಸಲಾಗಿದ್ದು ಅಪರಾಧ ಮತ್ತು ಭಯೋತ್ಪಾದನೆಯಂತಹ ಚಟುವಟಿಕೆಗಳನ್ನು ಈ ನಂಬರ್ ಮುಖಾಂತರ ಸುಲಭವಾಗಿ ಪತ್ತೆ ಹಚ್ಚಬಹುದಾಗಿದೆ.

**ಬಾಯಿ ಕ್ಯಾನ್ಸರ್ (Oral Cancer): ವಿಶ್ವದ ಶೇ.86 ಪ್ರಕರಣಗಳು ಭಾರತದಲ್ಲಿ**

ಸಮೀಕ್ಷೆಯೊಂದರ ವರದಿಯ ಪ್ರಕಾರ ವಿಶ್ವದ ಶೇ.86 ರಷ್ಟು ಬಾಯಿ ಕ್ಯಾನ್ಸರ್ ಪ್ರಕರಣಗಳು ಭಾರತದಲ್ಲಿ ದಾಖಲಾಗಿವೆ. ಇಂತಹ ಮಾರಣಾಂತಿಕ ಕಾಯಿಲೆಗೆ ಪ್ರತಿ ವರ್ಷ ಸುಮಾರು 75 ರಿಂದ 80 ಸಾವಿರ ಜನರು ಬಲಿಯಾಗಿತ್ತಿರುವುದಾಗಿ ವರದಿಯಲ್ಲಿ ಹೇಳಿದೆ.

- ಭಾರತದಲ್ಲಿ ತಂಬಾಕು ಜಗಿಯುವಿಕೆಯೇ ಬಾಯಿ ಕ್ಯಾನ್ಸರ್ ಗೆ ಪ್ರಮುಖ ಕಾರಣವಾಗಿದೆ. ಬೇರೆ ದೇಶಗಳಲ್ಲಿ ತಂಬಾಕುವನ್ನು ಸಿಗರೇಟ್ ರೂಪದಲ್ಲಿ ಸೇವಿಸುವುದರಿಂದ ಈ ಪ್ರಕರಣಗಳು ಕಡಿಮೆ. ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಡೆಸಿದ ಸಮೀಕ್ಷೆಯಿಂದ ಈ ವಿಚಾರ ತಿಳಿದು ಬಂದಿದೆ.
- ತಂಬಾಕನ್ನು ಜಗಿಯುವ ವಿಶ್ವದ ಶೇ.26 ರಷ್ಟು ಮಂದಿ ಮತ್ತು ತಂಬಾಕು ಸೇದುವ ಶೇ.14 ರಷ್ಟು ಮಂದಿ ಭಾರತದಲ್ಲಿದ್ದಾರೆ.

**ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನೆಗೆ ಚಾಲನೆ**

ರಾಷ್ಟ್ರದ 18 ವರ್ಷದ ಮಕ್ಕಳ ಆರೋಗ್ಯ ಮಟ್ಟವನ್ನು ಉತ್ತಮಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಹೊಸ ಯೋಜನೆಯೊಂದನ್ನು ಜಾರಿಗೆ ತಂದಿದೆ. ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷಣಿಯಾದ ಸೋನಿಯಾ ಗಾಂಧಿಯವರು "ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನೆ"ಗೆ ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಬುಡಕಟ್ಟು ಪ್ರದೇಶವಾದ ಪಾಲ್ಗರ್ ನಲ್ಲಿ ಈ ಯೋಜನೆಗೆ ಚಾಲನೆ ನೀಡಿದರು.

ಈ ಯೋಜನೆಯ ಮುಖ್ಯ ಉದ್ದೇಶ:

- ಮಕ್ಕಳಲ್ಲಿ ಹುಟ್ಟಿನಿಂದ ಬಂದ ನ್ಯೂನತೆ ಮತ್ತು ಬೆಳವಣಿಗೆಯಲ್ಲಿನ ಕುಂಠಿತವನ್ನು ಗುರುತಿಸಿ ಸೂಕ್ತ ಚಿಕಿತ್ಸೆ ನೀಡುವುದು ಈ ಯೋಜನೆ ಮುಖ್ಯ ಗುರಿಯಾಗಿದೆ.

- ಈ ಕಾರ್ಯಕ್ರಮವನ್ನು ಹಂತ ಹಂತವಾಗಿ ರಾಷ್ಟ್ರವ್ಯಾಪ್ತಿ ಜಾರಿಗೊಳಿಸಲಾಗುವುದಲ್ಲದೇ, ಇದರಿಂದ ದೇಶದ ಸುಮಾರು 25 ಕೋಟಿ ಮಕ್ಕಳಿಗೆ ಅನುಕೂಲವಾಗಲಿದೆ.
- ಅಂಗನವಾಡಿ, ಅನುದಾನ ಮತ್ತು ಅನುದಾನ ರಹಿತ ಶಾಲೆಗಳು ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಕ್ಕಳ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ 18 ವರ್ಷದೊಳಗಿನ ಮಕ್ಕಳ ಆರೋಗ್ಯವನ್ನು ಉತ್ತಮ ಪಡಿಸುವ ಸಲುವಾಗಿ ಈ ಯೋಜನೆ ಮಹತ್ವಕಾರಿಯಾಗಿದೆ.

**ಮುಂಬೈ ಮತ್ತು ದೆಹಲಿ ಅಗ್ಗದ ನಗರಗಳು**

ಎಕಾನಾಮಿಸ್ಟ್ ಇಂಟೆಲಿಜೆನ್ಸ್ ಯೂನಿಟ್ (Economics Intelligence Unit) ನ ಜಾಗತಿಕ ಜೀವನ ವೆಚ್ಚ ಸೂಚಿ ಬಿಡುಗಡೆಯಾಗಿದ್ದು, ಜೀವನ ನಡೆಸಲು ವಿಶ್ವದ ಅತ್ಯಂತ ಅಗ್ಗದ ನಗರಗಳಾಗಿ ಭಾರತ ಮತ್ತು ಪಾಕಿಸ್ತಾನ ದ ಪ್ರಮುಖ ನಗರಗಳಾದ ಮುಂಬೈ ಮತ್ತು ಕರಾಚಿ ಮೊದಲ ಸ್ಥಾನ ಹಂಚಿಕೊಂಡಿವೆ.

- ಜಾಗತಿಕ ಮಟ್ಟದಲ್ಲಿ ನಡೆಸಿದ ಸಮೀಕ್ಷೆಯ ಆಧಾರದಲ್ಲಿ ಈ ಪಟ್ಟಿಯನ್ನು ತಯಾರಿಸಲಾಗಿದ್ದು, ದೆಹಲಿ ಎರಡನೇ ಸ್ಥಾನದಲ್ಲಿದೆ.
- ನೇಪಾಳದ ರಾಜಧಾನಿ ಕಠ್ಮಂಡು ಮತ್ತು ಅಲ್ಜೀರಿಯಾದ ರಾಜಧಾನಿ ಅಲ್ಜಿಯರ್ಸ್ ಮೊದಲ ಐದು ಅತ್ಯಂತ ಅಗ್ಗದ ನಗರಗಳ ಪಟ್ಟಿಯಲ್ಲಿ ಸ್ಥಾನಗಳಿಸಿವೆ.
- ಜಪಾನಿನ ಟೋಕಿಯೋ ವಿಶ್ವದ ಅತ್ಯಂತ ದುಬಾರಿ ನಗರ ಎಂದು ಸಮೀಕ್ಷೆ ತಿಳಿಸಿದೆ. ನಂತರದ ಸ್ಥಾನದಲ್ಲಿ ಜಪಾನ್ ಮತ್ತೊಂದು ನಗರ ಒಸಾಕ, ಆಸ್ಟ್ರೇಲಿಯಾದ ಸಿಡ್ನಿ, ಓಸ್ಲೊ ಮತ್ತು ಮೆಲ್ಬರ್ನ್ ನಗರಗಳಿವೆ.

ಸಮೀಕ್ಷೆ ಹೇಗೆ?

ಸಾರಿಗೆ, ಸಾರ್ವಜನಿಕರ ಹಿತ, ಆಹಾರ ಮತ್ತು ಬಟ್ಟೆ ಸೇರಿದಂತೆ ಒಟ್ಟು 160 ವಿಷಯಗಳನ್ನು ಆಧರಿಸಿ ಈ ಸಮೀಕ್ಷೆಯನ್ನು ವಿವಿಧ ದೇಶಗಳ ನಗರಗಳಲ್ಲಿ ನಡೆಸಲಾಗಿದೆ.

**ನೇತಾಜಿ ಸುಭಾಷ್ ಚಂದ್ರ ಬೋಸ್ ಕುರಿತ ಪುಸ್ತಕ ಬಿಡುಗಡೆ**

ನೇತಾಜಿ ಸುಭಾಷ್ ಚಂದ್ರರವರ ಕುರಿತಾದ "ನೇತಾಜಿ ಸುಭಾಷ್ ಚಂದ್ರ ಬೋಸ್ ಅಂಡ್ ಜರ್ಮನಿ" ಎಂಬ ಪುಸ್ತಕವನ್ನು ರಾಷ್ಟ್ರಪತಿ ಶ್ರೀ ಪ್ರಣವ್ ಮುಖರ್ಜಿಯವರು ಇತ್ತೀಚೆಗೆ ಉದ್ಘಾಟನೆ ಮಾಡಿದರು.

- ಸುಭಾಷ್ ಚಂದ್ರರವರ ಪುತ್ರಿ ಅನಿತಾ ಬೋಸ್ ರವರು ತಮ್ಮ ತಂದೆಯ ಕುರಿತಾಗಿ ಈ ಪುಸ್ತಕವನ್ನು ಬರೆದಿದ್ದಾರೆ.

**<u>ಜಮ್ಮು ಮತ್ತು ಕಾಶ್ಮೀರ ಅತ್ಯಾಚಾರ ತಡೆ ಕಾಯ್ದೆ ತಿದ್ದುಪಡಿಗೆ ಸಮಿತಿ ರಚನೆ</u>**

ಮಹಿಳೆಯರ ವಿರುದ್ಧ ಶೋಷಣೆ ಮತ್ತು ಅತ್ಯಾಚಾರದಂತ ಪ್ರಕರಣಗಳನ್ನು ತಡೆಯುವ ಸಂಬಂಧ ಈಗಿರುವ ಕಾಯ್ದೆಗಳ ತಿದ್ದುಪಡಿ ತರುವ ಸಲುವಾಗಿ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ ಬೆನ್ನಲ್ಲೇ, ಜಮ್ಮು ಮತ್ತು ಕಾಶ್ಮೀರ ಸರ್ಕಾರ ತನ್ನ ರಾಜ್ಯದ ಅತ್ಯಾಚಾರ ವಿರೋಧಿ ಕಾಯ್ದೆಗೆ ತಿದ್ದುಪಡಿ ತರಲು ಸಲಹೆ ನೀಡುವ ಸಲುವಾಗಿ ಸಮಿತಿಯೊಂದನ್ನು ರಚಿಸಿದೆ.

- ಜಮ್ಮು ಮತ್ತು ಕಾಶ್ಮೀರದ ಅಡ್ವೋಕೇಟ್ ಜನರಲ್ ಮೊಹಮ್ಮದ್ ಇಷಾಕ್ ಖಾದ್ರಿ ರವರ ಅಧ್ಯಕ್ಷತೆಯಲ್ಲಿ 5 ಜನ ಸದಸ್ಯರನ್ನು ಒಳಗೊಂಡ ಸಮಿತಿ ಇದಾಗಿದ್ದು, ಕೇಂದ್ರ ಸರ್ಕಾರ ರಚಿಸಿದ್ದ ವರ್ಮಾ ಸಮಿತಿಯ ಸಲಹೆಗಳ ಆಧಾರದ ಮೇಲೆ ಕರಡು ಪ್ರತಿಯೊಂದನ್ನು ರಚಿಸುವ ಜವಾಬ್ದಾರಿಯನ್ನು ಸಮಿತಿ ಹೊಂದಿದೆ. ವರ್ಮಾ ಸಮಿತಿಯು ನೀಡಿರುವ ಸಲಹೆಗಳ ಸ್ವೀಕಾರ ಅಥವಾ ತಿರಸ್ಕಾರ ಮಾಡುವ ಸ್ವತಂತ್ರವನ್ನು ಈ ಸಮಿತಿಗೆ ನೀಡಲಾಗಿದೆ.

ಸಮಿತಿ ಯಾಕೆ?

- ಭಾರತ ಸಂವಿಧಾನದ 370 ನೇ ಪರಿಚ್ಛೇದದಡಿ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನ ಮಾನ ನೀಡಲಾಗಿದೆ ಅಲ್ಲದೇ ಈ ರಾಜ್ಯ ತನ್ನದೇ ಆದ ಸಂವಿಧಾನವನ್ನು ಹೊಂದಿರುವ ಕಾರಣ ಇತ್ತೀಚಿಗೆ ಹೊರಡಿಸಿರುವ ಸುಗ್ರೀವಾಜ್ಞೆಯು ಈ ರಾಜ್ಯಕ್ಕೆ ಅನ್ವಯವಾಗದ ಕಾರಣ ಈ ಸಮಿತಿಯನ್ನು ರಚಿಸಲಾಗಿದೆ.
- ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತ ದಂಡ ಸಂಹಿತೆ ಮಾದರಿಯಲ್ಲಿ ರಣಬೀರ್ ದಂಡ ಸಂಹಿತೆ (Ranbir Panel Code) ಜಾರಿಯಲ್ಲಿದೆ. ಈ ಕಾಯ್ದೆಯ ತಿದ್ದುಪಡಿಗೆ ಸಮಿತಿಯ ಸಲಹೆಗಳನ್ನು ಪರಿಗಣಿಸಲಾಗುವುದು ಅಲ್ಲದೇ ಮಹಿಳೆಯರ ಮತ್ತು ಮಕ್ಕಳ ವಿರುದ್ಧ ಶೋಷಣೆಗಳನ್ನು ತಡೆಯುವ ಸಲುವಾಗಿ ಸಮಿತಿ ಸಲಹೆ ನೀಡಲಿದೆ.
- ಫೆಬ್ರವರಿ 28 ರಿಂದ ನಡೆಯುವ ಅಧಿವೇಶನದಲ್ಲಿ ಜಮ್ಮು ಮತ್ತು ಕಾಶ್ಮೀರದ ಮುಖ್ಯ ಮಂತ್ರಿಗಳಾದ ಒಮರ್ ಅಬ್ದುಲ್ಲರವರು ತಿದ್ದುಪಡಿಗಳನ್ನು ಮಂಡಿಸಿ ಅನುಮೋದನೆ ಪಡೆಯುವ ವಿಶ್ವಾಸದಲ್ಲಿದ್ದಾರೆ.

**<u>ಆಹಾರ ಧಾನ್ಯ ಕಳೆದ ವರ್ಷಕ್ಕಿಂತ ಶೇ.3.5% ಕಡಿಮೆ ಉತ್ಪಾದನೆ</u>**

ದೇಶದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಈ ಬಾರಿ ಕಳೆದ ವರ್ಷಗಳಿಗಿಂತಲೂ ಶೇ.3.5% ರಷ್ಟು ಕಡಿಮೆ ಆಗಲಿದೆ. ಈ ಬಾರಿ 250.14 ಮಿಲಿಯನ್ ಟನ್ ಗಳಷ್ಟು ಆಹಾರ ಧಾನ್ಯಗಳ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶರದ್ ಪವಾರ್ ಹೇಳಿದ್ದಾರೆ. 2011-12 (ಜುಲೈ-ಜೂನ್) ಕೃಷಿ ವರ್ಷದಲ್ಲಿ ಭಾರತ 259.32 ಮಿಲಿಯನ್ ಟನ್ ಗಳಷ್ಟು ದಾಖಲೆಯ ಆಹಾರ ಧಾನ್ಯಗಳನ್ನು ಉತ್ಪಾದಿಸಿತ್ತು.

- ದೇಶದ ಪ್ರಮುಖ ಆಹಾರ ಧಾನ್ಯ ಬೆಳೆಗಳನ್ನು ಬೆಳೆಯುವ ರಾಜ್ಯಗಳಾದ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಮತ್ತು ರಾಜಸ್ಥಾನ ಗಳಲ್ಲಿ ಕಾಣಿಸಿಕೊಂಡ ಅನಿರೀಕ್ಷಿತ ಬರದಿಂದಾಗಿ ಈ ವರ್ಷ ಕಡಿಮೆ ಉತ್ಪಾದನೆ ದಾಖಲಾಗಿದೆ. ಆದರೆ ದೇಶದ ಜನರ ಬೇಡಿಕೆ ಪೂರೈಸಿಲು ಯಾವುದೇ ಕೊರತೆಯಾಗುವುದಿಲ್ಲ ಎಂದು ಪವಾರ್ ತಿಳಿಸಿದ್ದಾರೆ.

ಈ ಬಾರಿ ಉತ್ಪಾದನೆ ಎಷ್ಟೆಷ್ಟು?

ಕೇಂದ್ರ ಕೃಷಿ ಸಚಿವಾಲಯ ಬಿಡುಗಡೆ ಮಾಡಿರುವ 2012-13 ನೇ ಬೆಳೆ ವರ್ಷದ ಎರಡನೇ ಅಂದಾಜು ಪ್ರಕಾರ ಈ ವರ್ಷದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಈ ಕೆಳಗಿನಂತೆ ಇರಲಿದೆ.

- ಭತ್ತ ಉತ್ಪಾದನೆ 101.8 ಮಿಲಿಯನ್ ಟನ್ ಆಗಲಿದೆ ಎಂದು ನಿರೀಕ್ಷಿಸಲಾಗಿದೆ. ಕಳೆದ ವರ್ಷ 105.3 ಮಿಲಿಯನ್ ಟನ್ ಗಳಷ್ಟು ಭತ್ತ ಉತ್ಪಾದಿಸಲಾಗಿತ್ತು.
- ಗೋಧಿ ಉತ್ಪಾದನೆಯಲ್ಲೂ ಈ ಬಾರಿ ಇಳಿಕೆಯಾಗಲಿದೆ. ಕಳೆದ ವರ್ಷ 94.9 ಮಿಲಿಯನ್ ಟನ್ ಗಳಷ್ಟಿದ್ದರೆ ಈ ಬಾರಿ 92.3 ಮಿಲಿಯನ್ ಟನ್ ಗಳಷ್ಟು ಅಂದಾಜಿಸಲಾಗಿದೆ.
- ಇನ್ನೂ ಏಕದಳ ಧಾನ್ಯಗಳ ಒಟ್ಟು ಇಳುವರಿ 42.0 ಮಿಲಿಯನ್ ಟನ್ ಗಳಿಂದ 38.4 ಮಿಲಿಯನ್ ಟನ್ ಗಳಿಗೆ ಇಳಿಯಲಿದೆ.
- ಆದರೆ ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಕೊಂಚ ಹೆಚ್ಚಳ ಕಾಣಲಿದೆ. ಕಳೆದ ಬಾರಿ 17.1 ಮಿಲಿಯನ್ ಟನ್ ಗಳಿದ್ದರೆ ಈ ವರ್ಷ 17.6 ಮಿಲಿಯನ್ ಟನ್ ಗಳಿಗೆ ಏರಿಕೆ ಆಗಲಿದೆ.
- ತೈಲ ಬೀಜಗಳ ಉತ್ಪಾದನೆ 29.4 ಮಿಲಿಯನ್ ಟನ್ ಇರಲಿದೆ. ಇದು, ಹಿಂದಿನ ವರ್ಷದ 29.8 ಮಿಲಿಯನ್ ಟನ್ ಗಳಿಗೆ ಹೋಲಿಸಿದರೆ ತುಸು ಕಡಿಮೆ ಇದೆ. ವಾಣಿಜ್ಯ ಬೆಳೆಗಳಾದ ಹತ್ತಿ ಮತ್ತು ಕಬ್ಬಿನ ಇಳುವರಿಯು ಈ ಬಾರಿ ತಗ್ಗಲಿದೆ.

**ರಕ್ಷಣಾ ವೆಚ್ಚ: 2020 ರ ಹೊತ್ತಿಗೆ ನಾಲ್ಕನೇ ಸ್ಥಾನಕ್ಕೆ ಏರಲಿರುವ ಭಾರತ**

2020 ರ ಹೊತ್ತಿಗೆ ಜಾಗತಿಕ ಮಟ್ಟದಲ್ಲಿ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಣವನ್ನು ಖರ್ಚುಮಾಡಲಿರುವ ದೇಶಗಳ ಪಟ್ಟಿಯಲ್ಲಿ ಭಾರತ ನಾಲ್ಕನೇ ಸ್ಥಾನಕ್ಕೆ ಏರಲಿದೆ ಎಂದು ಸಮೀಕ್ಷೆಯೊಂದು ತಿಳಿಸಿದೆ. ಇನ್ ಫಾರ್ಮೇಶನ್ ಹ್ಯಾಂಡ್ಲಿಂಗ್ ಸರ್ವಿಸ್ (Information Handling Service) ಎಂಬ ಸಂಸ್ಥೆ ನಡೆಸಿರುವ ಸಮೀಕ್ಷೆ ಪ್ರಕಾರ ಭಾರತ 2020 ರ ವೇಳೆಗೆ ತನ್ನ ಒಟ್ಟು ಅಂತರಿಕ ಉತ್ಪನ್ನದ (GDP) ಅಧಿಕ ಪ್ರಮಾಣವನ್ನು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ವೆಚ್ಚಗಳಿಗೆ ಮೀಸಲಿಡುವ ಮೂಲಕ ಈ ಸ್ಥಾನವನ್ನು ಅಲಂಕರಿಸಲಿದೆ.

- ಸದ್ಯ ಅಮೆರಿಕಾ, ಚೀನಾ, ರಷ್ಯಾ, ಫ್ರಾನ್ಸ್, ಜಪಾನ್ ಮತ್ತು ಯು.ಕೆ ದೇಶಗಳ ನಂತರ ಭಾರತವಿದೆ. 2020 ರ ವೇಳೆಗೆ ಭಾರತ ಫ್ರಾನ್ಸ್, ಜಪಾನ್ ಮತ್ತು ಯು.ಕೆ ದೇಶಗಳನ್ನು ಹಿಂದಿಕ್ಕಲಿದೆ.
- ಇತ್ತೀಚೆಗೆ ಭಾರತ ತನ್ನ ರಕ್ಷಣಾ ವೆಚ್ಚವನ್ನು ಕಡಿತಗೊಳಿಸಿದೆ ಆದರೂ, 2020 ರ ಹೊತ್ತಿಗೆ ಸುಮಾರು 65.4 ಬಿಲಿಯನ್ ಡಾಲರ್ ಗಳಷ್ಟು ಮೊತ್ತವನ್ನು ಇದಕ್ಕೆ ವ್ಯಯಿಸಲಿದೆ ಎಂದು ಸಮೀಕ್ಷೆ ಹೇಳಿದೆ. ಈಗ ಭಾರತದ ಆರ್ಥಿಕ ಬೆಳವಣಿಗೆ ಅಷ್ಟೇನು ಹಿತಕರವಾಗಿರದಿದ್ದರು 2015 ರ ವೇಳೆಗೆ ಚೇತರಿಸಿಕೊಳ್ಳಲ್ಲಿದ್ದು ಮತ್ತೆ ರಕ್ಷಣಾ ವೆಚ್ಚವನ್ನು ಅಧಿಕಗೊಳಿಸುವುದೆಂದು ಈ ಸಮೀಕ್ಷೆಯಲ್ಲಿ ವರದಿ ಮಾಡಲಾಗಿದೆ.
- ಸಮೀಕ್ಷೆಯಲ್ಲಿ ಅಂದಾಜಿಸಿರುವಂತೆ ಫ್ರಾನ್ಸ್ ದೇಶವನ್ನು 2016 ಕ್ಕೆ, ಯು,ಕೆ ಯನ್ನು 2018 ಕ್ಕೆ ಮತ್ತು ಜಪಾನ್ ದೇಶವನ್ನು 2020 ಕ್ಕೆ ಭಾರತ ಹಿಂದಿಕ್ಕಲಿದೆ. ಅಲ್ಲದೇ ವಿದೇಶಗಳಿಂದ ರಕ್ಷಣಾ ಸಾಮಾಗ್ರಿಗಳನ್ನು ಕೊಳ್ಳುವುದನ್ನು ಭಾರತ ಮುಂದುವರಿಸಲಿದೆ.

**ಫೆಬ್ರವರಿ 13: ವಿಶ್ವ ರೇಡಿಯೋ ದಿನ**

ಫೆಬ್ರವರಿ 13 ರಂದು ಜಾಗತಿಕವಾಗಿ ವಿಶ್ವ ರೇಡಿಯೋ ದಿನವನ್ನ ಆಚರಿಸಲಾಯಿತು. ರೇಡಿಯೋ ಒಂದು ಪ್ರಮುಖ ಸುದ್ದಿ ಮಾಧ್ಯಮವಾಗಿದ್ದು, ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ರೇಡಿಯೋ ನೆಟ್ ವರ್ಕ್ ಗಳ ನಡುವೆ ಪರಸ್ಪರ ಸಹಕಾರವನ್ನು ಹೆಚ್ಚಿಸುವ ಸಲುವಾಗಿ ಈ ದಿನವನ್ನು ರೇಡಿಯೋ ದಿನವನ್ನಾಗಿ ಆಚರಿಸಲಾಗುತ್ತಿದೆ.

- ನವೆಂಬರ್ 3, 2011 ರಲ್ಲಿ ನಡೆದ ಯುನೆಸ್ಕೋ ದ 36 ನೇ ಸಾಮಾನ್ಯ ಸಮ್ಮೇಳನದಲ್ಲಿ ಈ ದಿನವನ್ನು ರೇಡಿಯೋ ದಿನವನ್ನಾಗಿ ಆಚರಿಸಲು ನಿರ್ಣಯ ಕೈಗೊಳ್ಳಲಾಯಿತು.
- ಫ್ರಾನ್ಸ್ ದೇಶ ಈ ಬಗ್ಗೆ ಮೊದಲು ಪ್ರಸ್ತಾವನೆಯನ್ನು ಸಲ್ಲಿಸಿದ ದೇಶವಾಗಿದೆ.

**ಹೆಲಿಕ್ಯಾಪ್ಟರ್ ಖರೀದಿ ಮತ್ತೊಂದು ಹಗರಣದಲ್ಲಿ ಸರ್ಕಾರ**

ಭಾರತದೊಂದಿಗೆ ಹೆಲಿಕ್ಯಾಪ್ಟರ್ ಪೂರೈಕೆ ಒಪ್ಪಂದ ಕುದುರಿಸಿಕೊಳ್ಳಲು ಲಂಚ ನೀಡಿದ ಶಂಕೆ ಮೇಲೆ ಇಟಲಿ ಸರ್ಕಾರಿ ಸ್ವಾಮ್ಯದ ಬಾಹ್ಯಾಕಾಶ ಕಂಪನಿಯ ಅಧ್ಯಕ್ಷನನ್ನು ಬಂಧಿಸುವುದರೊಂದಿಗೆ ಯುಪಿಎ ಸರ್ಕಾರ ಮತ್ತೊಂದು ಲಂಚ ಹಗರಣ ಆಪಾದನೆಗೆ ಸಿಲುಕಿದೆ.

ಪ್ರಕರಣ ಏನು?

- ಅತಿ ಗಣ್ಯರ ಸಂಚಾರಕ್ಕೆ ಮೀಸಲಾದ 12 ಹೆಲಿಕ್ಯಾಪ್ಟರ್ ಗಳನ್ನು ಖರೀದಿಸಲು ಭಾರತವು 2010 ರಲ್ಲಿ ರೂ.3620 ಕೋಟಿ ಮೊತ್ತದ ಒಪ್ಪಂದವನ್ನು ಇಟಲಿಯ ಬಾಹ್ಯಾಕಾಶ ಮತ್ತು ರಕ್ಷಣಾ ಉತ್ಪನ್ನ ಸಂಸ್ಥೆಯಾದ "ಫಿನ್ ಮೆಕ್ಕಾನಿಕಾ"ದ ಅಂಗ ಸಂಸ್ಥೆಯಾದ ಆಗಸ್ಟಾ ವೆಸ್ಟ್ ಲೆಂಡ್ ತಯಾರಿಸಿದ 12 ಹೆಲಿಕ್ಯಾಪ್ಟರ್ ಗಳನ್ನು ಖರೀದಿಸುವ ಸಲುವಾಗಿ ಮಾಡಿಕೊಂಡಿತ್ತು. ಆದರೆ ಈ ಒಪ್ಪಂದನ್ನು ಕುದುರಿಸಲು ಲಂಚ ನೀಡಿರುವುದು ಈಗ ಭಾರಿ ವಿವಾದ ಸೃಷ್ಟಿಸಿದೆ.
- ಆಗಸ್ಟಾ ವೆಸ್ಟ್ ಲೆಂಡ್ ಕಂಪನಿಯು ಭಾರತದೊಂದಿಗೆ ಹೆಲಿಕ್ಯಾಪ್ಟರ್ ಪೂರೈಕೆಗೆ ಒಪ್ಪಂದ ಕುದುರಿಸಲು ಅನುಕೂಲವಾಗುವಂತೆ ಟೆಂಡರ್ ಗೆ ನಿಗಧಿಯಾಗಿದ್ದ ಮಾನದಂಡಗಳನ್ನೇ ಬದಲಾಯಿಸಿರುವುದು ಬಹಿರಂಗಗೊಂಡಿದೆ. ಅಲ್ಲದೇ ಕಂಪನಿಯು ರೂ.3260 ಕೋಟಿ ಮೊತ್ತದ ಒಪ್ಪಂದವನ್ನು ಕುದುರಿಸಲು ರೂ.217 ಕೋಟಿಯನ್ನು ತೆಗೆದಿರಿಸಿದೆ ಎಂಬ ಅಂಶ ಬೆಳಕಿಗೆ ಬಂದಿದೆ.

ಪ್ರಮುಖ ಆರೋಪಿಗಳು ಯಾರು?

ಈ ಪ್ರಕರಣಕ್ಕೆ ಸಂಬಂಧಿಸಿದಂತ "ಫಿನ್ ಮೆಕ್ಕಾನಿಕಾದ" ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಯುಸೆಪ್ ಒರ್ಸಿ ಮತ್ತು ಆಗಸ್ಟಾ ವೆಸ್ಟ್ ಲೆಂಡ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬ್ರೂನೊ ಸ್ಪಾಗ್ನೊಲಿನಿ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ. ಭಾರತದ ಪರ ವಾಯುಪಡೆ ನಿವೃತ್ತ ಮುಖ್ಯಸ್ಥ ಎಸ್.ಪಿ.ತ್ಯಾಗಿ ಸೋದರ ಸಂಬಂಧಿಗಳಾದ ಜೂಲಿ ಡೋಕ್ಸ್ ಮತ್ತು ಸಂದೀಪ್ ಎಂಬುವವರ ಹೆಸರುಗಳು ಕೇಳಿಬಂದಿವೆ.

ಯಾವ ವಿಮಾನ?

- ಆಗಸ್ಟಾ ವೆಸ್ಟ್ ಲೆಂಡ್ ತಯಾರಿಸಿರುವ ಮೂರು ಎಂಜಿನ್ ಗಳ AW-101 ಹೆಲಿಕ್ಯಾಪ್ಟರ್ ಇದಾಗಿದೆ. ಈಗಾಗಲೇ ಮೂರು ಹೆಲಿಕ್ಯಾಪ್ಟರ್ ಗಳನ್ನು ಭಾರತಕ್ಕೆ ಪೂರೈಸಲಾಗಿದೆ.

ಮುಂದಿನ ಕ್ರಮವೇನು?

- ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿದೆ. ಅಲ್ಲದೇ ಉಳಿದ 9 ಹೆಲಿಕ್ಯಾಪ್ಟರ್ ಗಳ ಪೂರೈಕೆಗೆ ತಡೆಹಿಡಿದಿದೆ.

**ವರ್ಣರಂಜಿತ ಸೂರಜ್ ಕುಂಡ್ ಮೇಳಕ್ಕೆ ತೆರೆ**

27 ನೇ ಅಂತರ್ ರಾಷ್ಟ್ರೀಯ ಸೂರಜ್ ಕುಂಡ್ ಕರಕುಶಲ ಮೇಳಕ್ಕೆ ಸಂಭ್ರಮದ ತೆರೆ ಎಳೆಯಲಾಯಿತು. ಹರಿಯಾಣದ ಫರಿದಬಾದ್ ನಲ್ಲಿ ಫೆಬ್ರವರಿ 1 ರಿಂದ 15 ರ ತನಕ ಈ ವರ್ಣ ರಂಜಿತ ಮೇಳವನ್ನು ಆಯೋಜಿಸಲಾಗಿತ್ತು.

ಪ್ರಮುಖ ಅಂಶಗಳು :

- ಈ ಬಾರಿಯ ಮೇಳದ ಥೀಮ್ ರಾಜ್ಯವಾಗಿ ಕರ್ನಾಟಕ ಆಯ್ಕೆಯಾಗಿತ್ತು. 18 ವರ್ಷಗಳ ನಂತರ ರಾಜ್ಯಕ್ಕೆ ಈ ಅವಕಾಶ ದೊರೆತಿರುವುದು ಹೆಮ್ಮೆಯ ವಿಷಯ. ರಾಜ್ಯದ ಪ್ರಸಿದ್ದ ಕರಕುಶಲ ಕಲೆಗಳನ್ನು ದೇಶ ವಿದೇಶಕ್ಕೆ ಈ ಮೇಳದಡಿ ಪರಿಚಯಿಸಲಾಗಿತು.
- ಇದೇ ಮೊದಲ ಬಾರಿಗೆ ಸಾರ್ಕ್ (SAARC) ದೇಶಗಳ ಕರಕುಶಲ ಕಸುಬುದಾರರು ಈ ಮೇಳದಲ್ಲಿ ಪಾಲ್ಗೊಂಡಿದ್ದರು.
- ಅಲ್ಲದೇ, ಯೂರೋಪಿಯನ್ ದೇಶಗಳಾದ ತಜಕಿಸ್ತಾನ್, ಉಜ್ಬೇಕಿಸ್ತಾನ್ ಮತ್ತು ಕಿರ್ಜಗಿಸ್ತಾನ್ ದೇಶಗಳ ಕಸುಬುದಾರರು ಈ ಮೇಳದಲ್ಲಿ ಪಾಲ್ಗೊಳ್ಳುವ ಮೂಲಕ ಮೇಳಕ್ಕೆ ಮೆರಗು ತಂದರು.
- ಸೂರಜ್ ಕುಂಡ್ ಮೇಳವನ್ನು 1987 ರಿಂದ ಆಯೋಜಿಸಲಾಗುತ್ತಿದೆ. ಪ್ರತಿ ವರ್ಷ ಫೆಬ್ರವರಿ 1 ರಿಂದ 15 ರ ತನಕ ಈ ಮೇಳವನ್ನು ನಡೆಸಲಾಗುವುದು. ದೇಶದ ಕರಕುಶಲ ಕಲೆ, ವಿನ್ಯಾಸ, ಕೈಮಗ್ಗ ಮುಂತಾದವುಗಳನ್ನು ಈ ಮೇಳದಲ್ಲಿ ಬಿಂಬಿಸಲಾಗುತ್ತದೆ. ಪ್ರತಿ ವರ್ಷ ಒಂದು ರಾಜ್ಯವನ್ನು ಥೀಮ್ ರಾಜ್ಯವನ್ನಾಗಿ ಆಯ್ಕೆ ಮಾಡಿ ಆ ರಾಜ್ಯದ ವಿಶೇಷತೆಯನ್ನು ಮೇಳದ ಉದ್ದಕೂ ಪ್ರದರ್ಶಿಸಲಾಗುವುದು.

**ಕಾಶ್ಮೀರದಲ್ಲಿ ವಿಶ್ವದ ಅತಿ ಎತ್ತರದ ರೈಲು ಸೇತುವೆ**

ವಿಶ್ವದಲ್ಲೇ ಅತಿ ಎತ್ತರದ ರೈಲು ಸೇತುವೆ ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ಮಾಣವಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದ "ರಿಯಾಸಿ" ಜಿಲ್ಲೆಯಲ್ಲಿ ಈ ಸೇತುವೆ ಅಸ್ಥಿತ್ವಕ್ಕೆ ಬರಲಿದೆ.

- ದೆಹಲಿಯ ಕುತುಬ್ ಮಿನಾರ್ ಗಿಂತಲೂ ಐದು ಪಟ್ಟು ಎತ್ತರವಿರುವ (1,315 ಮೀ) ಈ ಸೇತುವೆಯನ್ನು ಚೇನಾಬ್ ನದಿಗೆ ಅಡ್ಡವಾಗಿ ನಿರ್ಮಿಸಲಾಗುತ್ತಿದೆ.
- ಕಮಾನಿನ ಆಕಾರದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಸೇತುವೆಯು ಬರಾಮುಲ್ಲ ಮತ್ತು ಶ್ರೀನಗರವನ್ನು ಉದಾಮ್ ಪುರ-ಕತ್ರ-ಖಾಜಿಗುಂದ್ ಮಾರ್ಗವಾಗಿ ಜಮ್ಮುವಿಗೆ ಸಂಪರ್ಕ ಕಲ್ಪಿಸಲಿದೆ.
- ಅತ್ಯಂತ ಮಹತ್ವಕಾಂಕ್ಷಿಯಾದ ಈ ಯೋಜನೆಯು 2016 ಕ್ಕೆ ಪೂರ್ಣಗೊಳ್ಳಲಿದೆ. ಈ ಯೋಜನೆಯ ಹೊಣೆಗಾರಿಕೆಯನ್ನು ಕೊಂಕಣ ರೈಲ್ವೆ ನಿರ್ಮಾಣ ಖ್ಯಾತಿಯ "ಕೊಂಕಣ ರೈಲ್ವೆ ಕಾರ್ಪೋರೇಷನ್ ಲಿಮಿಟೆಡ್" ವಹಿಸಿಕೊಂಡಿದೆ.

**1 ಹೆಕ್ಟೇರಿನಲ್ಲಿ 108 ಟನ್ ಆಲೂಗಡ್ಡೆ ಬೆಳೆದ ಬಿಹಾರ ರೈತ**

ಬಿಹಾರದ ನಳಂದ ಜಿಲ್ಲೆಯ ರೈತನೊಬ್ಬ 1 ಹೆಕ್ಟೇರ್ ಜಮೀನಿನಲ್ಲಿ 108.8 ಟನ್ ಆಲೂಗಡ್ಡೆಯನ್ನು ಸಾವಯವ ಕೃಷಿ ಪದ್ಧತಿ ವಿಧಾನದಿಂದ ಬೆಳೆಯುವ ಮೂಲಕ ದಾಖಲೆ ನಿರ್ಮಿಸಿದ್ದಾನೆ.

- ನಳಂದ ಸಾವಯವ ತರಕಾರಿ ಬೆಳೆಗಾರರ ಸಂಘದ ಅಧ್ಯಕ್ಷನಾಗಿರುವ ರಾಕೇಶ್ ಕುಮಾರ್ ಎಂಬ ರೈತ ಈ ದಾಖಲೆಯನ್ನು ಮಾಡಿದ್ದಾನೆ. ನೆದರ್ಲ್ಯಾಂಡ್ ನ ರೈತನೊಬ್ಬ 1 ಹೆಕ್ಟೇರ್ ನಲ್ಲಿ 45 ಟನ್ ಬೆಳೆದಿದ್ದೇ ಇದುವರೆಗಿನ ವಿಶ್ವದಾಖಲೆಯಾಗಿತ್ತು.
- ಒಂದು ಹೆಕ್ಟೇರ್ ನಲ್ಲಿ 224 ಕ್ವಿಂಟಲ್ ಭತ್ತ ಬೆಳೆಯುವ ಮೂಲಕ ಕಳೆದ ಬಾರಿ ಬಿಹಾರಿ ರೈತರು ದಾಖಲೆ ನಿರ್ಮಿಸಿದ್ದರು.
- ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಬಿಹಾರ ರಾಜ್ಯಗಳು ದೇಶದಲ್ಲಿ ಅತಿ ಹೆಚ್ಚು ಆಲೂಗಡ್ಡೆ ಬೆಳೆಯುವ ರಾಜ್ಯಗಳು.

**ಹಂದಿ ಜ್ವರ ನಿಯಂತ್ರಣಕ್ಕೆ ಕಾರ್ಯಪಡೆ ರಚಿಸಿದ ರಾಜಸ್ತಾನ**

ರಾಜಸ್ತಾನದಲ್ಲಿ ಹಂದಿ ಜ್ವರ ಪ್ರಕರಣಗಳು ಗಣನೀಯ ಸಂಖ್ಯೆಯಲ್ಲಿ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಇದರ ನಿಯಂತ್ರಣಕ್ಕೆ ಕಾರ್ಯಪಡೆ ಒಂದನ್ನು ರಾಜಸ್ತಾನ ಸರ್ಕಾರ ರಚಿಸಿದೆ. ರಾಜಸ್ತಾನ ರಾಜ್ಯದ ಪ್ರಧಾನ ಕಾರ್ಯದರ್ಶಿಯಾಗಿರುವ ಸಿ.ಕೆ.ಮ್ಯಾಥು ರವರ ಅಧ್ಯಕ್ಷತೆಯಲ್ಲಿ ಈ ಕಾರ್ಯಪಡೆಯನ್ನು ರಚಿಸಲಾಗಿದೆ.

- ಅಂಕಿ ಅಂಶಗಳ ಪ್ರಕಾರ ರಾಜಸ್ತಾನದಲ್ಲಿ ಏಪ್ರಿಲ್ 2012 ರಿಂದ ಈಚೆಗೆ ಹಂದಿ ಜ್ವರದಿಂದ ಸಾವನ್ನಪ್ಪಿದ 148 ಪ್ರಕರಣಗಳು ಪತ್ತೆಯಾಗಿವೆ. ಹಾಗೂ 834 ಕ್ಕೂ ಹೆಚ್ಚು ಹಂದಿ ಜ್ವರವೆಂದು ಧೃಡಪಟ್ಟಿರುವ ಪ್ರಕರಣಗಳು ಕಂಡುಬಂದಿವೆ.

**ಅಲಹಬಾದ್ ರೈಲು ನಿಲ್ದಾಣ ಕಾಲ್ತುಳಿತ ಪ್ರಕರಣ ತನಿಖೆಗೆ ನಿವೃತ್ತ ನ್ಯಾಯಾಧೀಶ ಭಟ್ ಸಮಿತಿ**

ಕುಂಭಮೇಳ ಮೌನಿ ಅಮವಾಸೆ ವೇಳೆ ಅಲಹಾಬಾದ್ ರೈಲು ನಿಲ್ದಾಣದಲ್ಲಿ ಸಂಭವಿಸಿದ ಕಾಲ್ತುಳಿತ ದುರ್ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಸಲುವಾಗಿ ಉತ್ತರ ಪ್ರದೇಶ ರಾಜ್ಯ ಸರ್ಕಾರ ಸಮಿತಿಯೊಂದನ್ನು ರಚಿಸಿದೆ. ಅಲಹಾಬಾದ್ ನ ನಿವೃತ್ತ ನ್ಯಾಯಾಧೀಶರಾದ ಓಂಕಾರೇಶ್ವರ ಭಟ್ ರವರ ನೇತೃತ್ವದಲ್ಲಿ ಈ ಏಕ ಸದಸ್ಯ ಸಮಿತಿಯನ್ನು ರಚಿಸಲಾಗಿದೆ. ಸಮಿತಿಗೆ ಎರಡು ತಿಂಗಳೊಳಗೆ ತನ್ನ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

- ಈ ಮುಂಚೆ ಉತ್ತರ ಪ್ರದೇಶ ಕಂದಾಯ ಮಂಡಳಿ ಅಧ್ಯಕ್ಷರಾದ ಜಗನ್ ಮ್ಯಾಥ್ಯು ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ತನಿಖೆ ಕೈಗೊಂಡು ವರದಿ ಸಲ್ಲಿಸಲು ಉತ್ತರ ಪ್ರದೇಶ ಸರ್ಕಾರ ಸೂಚಿಸಿತ್ತು.
- ಅಲ್ಲದೇ, ರೈಲ್ವೆ ಇಲಾಖೆ ಸಹ ಈ ಪ್ರಕರಣದ ಬಗ್ಗೆ ತನಿಖೆ ನಡೆಸಲು ರೈಲ್ವೆ ಟ್ರಾಫಿಕ್ ಬೋರ್ಡ್ ನ ಸದಸ್ಯರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದೆ.

ಅಲಹಬಾದ್ ಕಾಲ್ತುಳಿತ

- ಫೆಬ್ರವರಿ 10 ರಂದು ಮೌನಿ ಅಮವಾಸೆ ದಿನ ನದಿಯಲ್ಲಿ ಸ್ನಾನ ಮಾಡಲೆಂದು ಲಕ್ಷಾಂತರ ಭಕ್ತರು ಕುಂಭಮೇಳಕ್ಕೆ ಆಗಮಿಸಿದ್ದರು. ಎಂದಿನಂತೆ ಕಾರ್ಯಕ್ರಮದ ನಂತರ ಮನೆಗಳಿಗೆ ಹಿಂತಿರುಗುವ ಆತುರದಲ್ಲಿದ್ದ ಭಕ್ತಾಧಿಗಳ ಸಂಖ್ಯೆ

ಅಲಹಬಾದ್ ರೈಲು ನಿಲ್ದಾಣದಲ್ಲಿ ಗಡಿ ದಾಟಿದ ಸಂಧರ್ಭದಲ್ಲಿ ಉಂಟಾದ ಕಾಲ್ತುಳಿದಲ್ಲಿ ಸುಮಾರು 36 ಕ್ಕೂ ಹೆಚ್ಚು ಭಕ್ತಾಧಿಗಳು ದುರ್ಮರಣ ಹೊಂದಿದರು.

**ಮಾಲಿ ದೇಶಕ್ಕೇ 100 ಮಿಲಿಯನ್ ಡಾಲರ್ ಸಹಾಯ ಹಸ್ತ ಚಾಚಿದ ಭಾರತ**

ಅಲ್-ಖೈದ ದಾಳಿಯಿಂದ ತತ್ತರಸಿ ಹೋಗಿರುವ ಮಾಲಿ ದೇಶದ ಪುನರ್ ನಿರ್ಮಾಣಕ್ಕೆ ಭಾರತ 100 ಮಿಲಿಯನ್ ಡಾಲರ್ ಸಹಾಯ ಧನ ಘೋಷಿಸಿದೆ. ಈ ಮೂಲಕ ಆರ್ಥಿಕ ಸಹಾಯ ನೀಡಲಿರುವ ಆಫ್ರಿಕಾ ಮತ್ತು ಯುರೋಪಿಯನ್ ದೇಶಗಳ ಗುಂಪಿಗೆ ಭಾರತ ಸಹ ಸೇರಿದೆ. ಬ್ರಸೇಲ್ ನಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ನಿರ್ಣಯವನ್ನು ಭಾರತ ಪ್ರಕಟಿಸಿತು.

- ಭಯೋತ್ಪಾದಕರ ಉಪಟಳವನ್ನು ಮಟ್ಟ ಹಾಕುವ ಗುರಿ ಹೊಂದಿರುವ ಭಾರತ ಈ ಕ್ರಮವನ್ನು ಕೈಗೊಂಡಿದೆ. ಇತ್ತೀಚಿನ ದಿನಗಳಲ್ಲಿ ಮಾಲಿ ಭಯೋತ್ಪಾದಕರ ಅಟ್ಟಹಾಸಕ್ಕೆ ನಲುಗಿ ಹೋಗಿದೆ. ಭಾರತ ಸೇರಿದಂತೆ ಇತರೆ ದೇಶಗಳು ಮಾಲಿಗೆ ಸಹಾಯ ಹಸ್ತ ಚಾಚಿವೆ.

**ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನಕ್ಕೆ ಶೀಘ್ರವೇ ಕೇಂದ್ರ ಸರ್ಕಾರ ಒಪ್ಪಿಗೆ**

ಯುಪಿಎ ಸರ್ಕಾರದ ಮತ್ತೊಂದು ಮಹತ್ವಕಾಂಕ್ಷಿ ಯೋಜನೆಯಾದ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ (National Urban Health Mission) ಶೀಘ್ರವೇ ಕೇಂದ್ರ ಸಚಿವ ಸಂಪುಟ ಅಸ್ತು ಎನ್ನಲಿದೆ. ಪಟ್ಟಣ ಮತ್ತು ನಗರದಲ್ಲಿ ವಾಸಿಸುವ ಬಡವರಿಗೆ ಪ್ರಾಥಮಿಕ ಆರೋಗ್ಯ ಸೇವೆಯನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಮಾದರಿಯಲ್ಲೇ ರೂಪಿಸಲಾಗಿರುವ ಈ ಯೋಜನೆಗೆ ಹಣಕಾಸು ಸಚಿವಾಲಯ ಈಗಾಗಲೇ ಸಮ್ಮತಿ ಸೂಚಿಸಿದೆ.
- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಈ ಯೋಜನೆಯು ಜಾರಿಗೊಳ್ಳಲಿದ್ದು 2013-14 ನೇ ಸಾಲಿನ ಬಜೆಟ್ ನಲ್ಲಿ ಆರಂಭಿಸಲಾಗುವುದು. ಈ ಯೋಜನೆಯೂ ಸುಮಾರು 20,000 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳ್ಳಲಿದೆ.
- ದೆಹಲಿ, ಬೆಂಗಳೂರು, ಕೊಲ್ಕತ್ತಾ, ಮುಂಬೈ, ಹೈದ್ರಾಬಾದ್ ಮತ್ತು ಚೆನ್ನೈ ಸೇರಿದಂತೆ 50,000 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸುಮಾರು 779 ಪಟ್ಟಣಗಳನ್ನು ಈ ಯೋಜನೆಯಡಿ ತರಲಾಗುವುದು.
- ಸಮೀಕ್ಷೆಗಳ ಪ್ರಕಾರ ನಗರ ಬಡವರ ಆರೋಗ್ಯ ಸೇವೆ ಗ್ರಾಮೀಣ ಭಾಗಕ್ಕೆ ಹೋಲಿಸಿದರೆ ತೀರಾ ದುಷ್ಟಕರವಾಗಿದೆ. ನಗರಗಳಲ್ಲಿ ಸರ್ಕಾರಿ ಆರೋಗ್ಯ ಕೇಂದ್ರಗಳು ತೀರಾ ಕಳಪೆ ಮಟ್ಟದ ಸೇವೆ ನೀಡುತ್ತಿದ್ದರೆ, ಖಾಸಗಿ ಆಸ್ಪತ್ರೆಗಳು ಬಡವರಿಗೆ ದುಬಾರಿ ಎನಿಸಿವೆ. ಆಗಾಗಿ ಈ ಯೋಜನೆಯು ಬಡವರಿಗೆ ಒಂದು ವರದಾನವಾಗಲಿದೆ ಎಂದು ಅಂದಾಜಿಸಲಾಗಿದೆ.

**ಕೇರಳ ಅಬಕಾರಿ ಕಾಯ್ದೆ ತಿದ್ದುಪಡಿ ಗೆ ಅನುಮೋದನೆ**

ಕೇರಳ ರಾಜ್ಯ ಇತ್ತೀಚೆಗೆ ಕೇರಳ ಅಬಕಾರಿ ಕಾಯ್ದೆಗೆ ಮಾಡಲಾಗಿದ್ದ ತಿದ್ದುಪಡಿಗೆ ಅನುಮೋದನೆ ದೊರೆತಿದೆ. ತಿದ್ದುಪಡಿಯ ಬಳಿಕ ಕೇರಳ ರಾಜ್ಯದಲ್ಲಿ ಮದ್ಯವನ್ನು ಮಾರುವ ಮತ್ತು ಕೊಳ್ಳುವ ವಯಸ್ಸಿನ ಮಿತಿಯನ್ನು 18 ವರ್ಷದಿಂದ 21 ವರ್ಷಕ್ಕೆ ಏರಿಕಯಾಗಿದೆ. ರಾಜ್ಯದಲ್ಲಿ ಮದ್ಯಪಾನ ಚಟಕೆ ಬಲಿಯಾಗುವವರ ಸಂಖ್ಯೆಯನ್ನು ತಗ್ಗಿಸುವ ಸಲುವಾಗಿ ಈ ತಿದ್ದುಪಡಿಯನ್ನು ತರಲಾಗಿದೆ.

- ಈ ಕಾಯ್ದೆಯಿಂದ ಇನ್ನು ಮುಂದೆ ಚಲನಚಿತ್ರ, ಧಾರಾವಾಹಿ ಮತ್ತಿತ್ತರ ದೂರದರ್ಶನ ಕಾರ್ಯಕ್ರಮಗಳಲ್ಲಿ ಮದ್ಯಪಾನ ದೃಶ್ಯಗಳು ಬಂದಾಗ ಶಾಸನ ವಿಧಿಸದ ಎಚ್ಚರಿಕೆಯನ್ನು ಪ್ರದರ್ಶಿಸುವುದು ಕಡ್ಡಾಯವಾಗಿದೆ.
- ಇತ್ತೀಚೆಗೆ ಮಹಾರಾಷ್ಟ್ರ ರಾಜ್ಯ ಸರ್ಕಾರ ಕೂಡ ಮದ್ಯಪಾನ ಸೇವನೆಯ ವಯಸ್ಸನ್ನು 25 ಕ್ಕೆ ಏರಿಸಿದೆ.

**ಹೈದರಾಬಾದ್ ನಲ್ಲಿ ಅವಳಿ ಬಾಂಬ್ ಸ್ಫೋಟ: ದೇಶ ತಲ್ಲಣ**

ಆಂಧ್ರ ಪ್ರದೇಶದ ರಾಜಧಾನಿ ಮುತ್ತಿನ ನಗರ ಹೈದರಾಬಾದ್ ನಲ್ಲಿ ಎರಡು ಕಡೆ ಸಿಡಿದ ಸರಣಿ ಬಾಂಬ್ ಸ್ಫೋಟದಲ್ಲಿ 32 ಕ್ಕೂ ಮರಣ ಹೊಂದಿದ್ದು 84 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ಸರಣಿ ಬಾಂಬ್ ಸ್ಫೋಟವೂ 2007 ರಲ್ಲಿ ಹೈದರಾಬಾದ್ ನಲ್ಲಿ ನಡೆದ ಸರಣಿ ಸ್ಫೋಟವನ್ನು ನೆನಪಿಸಿದೆ.

ದಿಲ್ ಸುಖ್ನಗರ: ಹೈದರಾಬಾದ್ ನ ಹೃದಯ ಭಾಗದಿಂದ ಸುಮಾರು 15 ಕೀ.ಮೀ ದೂರದಲ್ಲಿರುವ ಜನದಟ್ಟಣಿ ಇರುವ ಪ್ರದೇಶವಾದ ದಿಲ್ ಸುಖ್ನಗರದಲ್ಲಿ ಎರಡು ಬಾಂಬ್ ಗಳನ್ನು ಸ್ಫೋಟಗೊಳಿಸಲಾಗಿದೆ. ಹೈದರಾಬಾದ್ -ವಿಜಯವಾಡ ಹೆದ್ದಾರಿಯಲ್ಲಿರುವ ದಿಲ್ ಸುಖ್ನಗರ ಪ್ರಮುಖ ಶಾಪಿಂಗ್ ತಾಣವಾಗಿದೆ. ಮಾಲ್ ಗಳು, ದೊಡ್ಡ ಶಾಪಿಂಗ್ ಕೇಂದ್ರಗಳಿರುವ ಈ ಪ್ರದೇಶದಲ್ಲಿ ಜನದಟ್ಟಣೆ ಸಾಮಾನ್ಯವಾಗಿರುವುದರ ಉಪಯೋಗವನ್ನು ಪಡೆದುಕೊಂಡು ಬಾಂಬ್ ಸ್ಫೋಟಿಸಲಾಗಿದೆ. ಸ್ಫೋಟದ ಜವಾಬ್ದಾರಿಯನ್ನು ಯಾವುದೇ ಸಂಘಟನೆಗಳು ಬಹಿರಂಗಗೊಳಿಸದಿದ್ದರು, ಇಂಡಿಯನ್ ಮುಜಾಮುದ್ದೀನ್ ಈ ಕೃತ್ಯವನ್ನು ಎಸಗಿರಬಹುದೆಂದು ಶಂಕಿಸಲಾಗಿದೆ.

**ವರದಿ ಸಲ್ಲಿಸಿದ ಉಷಾ ಮೆಹ್ರ ಸಮಿತಿ**

ದೆಹಲಿಯಲ್ಲಿ ಯುವತಿಯ ಮೇಲೆ ನಡೆಸಿದ ಸಾಮೂಹಿಕ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಲು ರಚಿಸಲಾಗಿದ್ದ ಉಷಾ ಮೆಹ್ರ ಸಮಿತಿಯು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಕೇಂದ್ರ ಕಾನೂನು ಸಚಿವರಾದ ಅಶ್ವಿನ್ ಕುಮಾರ್ ಮತ್ತು ಕೇಂದ್ರ ಗೃಹ ಸಚಿವರಾದ ಆರ್.ಕೆ.ಸಿಂಗ್ ರವರು ವರದಿಯನ್ನು ಸ್ವೀಕರಿಸಿದರು.

ವರದಿಯಲ್ಲೇನಿದೆ?

- ಪೋಲಿಸರು ಮತ್ತು ಸಾರಿಗೆ ಇಲಾಖೆಯ ನಡುವೆ ಸಮನ್ವಯದ ಕೊರತೆ ಇಂತಹ ಘಟನೆಗಳಿಗೆ ನೇರ ಕಾರಣವೆಂದು ತಿಳಿಸಲಾಗಿದೆ.
- ರಾಷ್ಟ್ರ ರಾಜಧಾನಿ ದೆಹಲಿ ಪೋಲಿಸರು ಮತ್ತು ವಿಭಾಗೀಯ ಪೋಲಿಸರ ನಡುವಿನ ಭಿನ್ನಾಬಿಪ್ರಾಯ ಮತ್ತು ಸಾರಿಗೆ ಸಂಸ್ಥೆಗಳ ಅಸಮರ್ಪಕ ಕಾರ್ಯವೈಖರಿ ಇಂತಹ ಘಟನೆಗಳಿಗೆ ಪುಷ್ಟಿ ನೀಡಲಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉಷಾ ಮೆಹ್ರ ಸಮಿತಿಯನ್ನು ಕೇಂದ್ರ ಸರ್ಕಾರ ಡಿಸೆಂಬರ್ 26 ರಂದು ನೇಮಕ ಮಾಡಿತ್ತು. ದೆಹಲಿಯ ಯುವತಿಯ ಮೇಲೆ ನಡೆದ ಅತ್ಯಾಚಾರದ ಹೇಯ ಕೃತ್ಯದ ಬಗ್ಗೆ ಈ ಸಮಿತಿಯನ್ನು ರಚಿಸಲಾಗಿದ್ದು, ಮೂರು ತಿಂಗಳೊಳಗೆ ತನ್ನ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

**ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್ (DGCA) ಬದಲಿಗೆ ಪ್ರಸ್ತಾವನೆ**

ನಾಗರಿಕ ವಿಮಾನಯಾನ ಸಚಿವಾಲಯವು ಹಾಲಿ ಕಾರ್ಯನಿರ್ವಹಿಸುತ್ತಿರುವ DGCA ಯನ್ನು ಬದಲಿಸುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಿದೆ. ಸಂಸತ್ ಅಧಿವೇಶನದಲ್ಲಿ ಈ ಪ್ರಸ್ತಾವನೆಯನ್ನು ಮಂಡಿಸಲಿದ್ದು, DGCA ಬದಲಿಗೆ ಸ್ವಾಯತ್ತತೆ ನಿಯಂತ್ರಣ ಮಂಡಳಿಯನ್ನು ರಚಿಸಲು ಚಿಂತನೆ ನಡೆಸಿರುವುದಾಗಿ ನಾಗರಿಕ ವಿಮಾನಯಾನ ಸಚಿವ ಅಜಿತ್ ಸಿಂಗ್ ಹೇಳಿದ್ದಾರೆ. ಸದ್ಯ ಈ ಪ್ರಸ್ತಾವನೆಯ ಕರಡು ಪ್ರತಿಯನ್ನು ಕಾನೂನು ಸಚಿವಾಲಯಕ್ಕೆ ಸಲ್ಲಿಸಲಾಗಿದ್ದು, ಒಪ್ಪಿಗೆ ಪಡೆದ ನಂತರ ಇತರೆ ಸಚಿವಾಲಯಗಳಿಗೆ ಸಲ್ಲಿಸಿ ಅಧಿವೇಶನದಲ್ಲಿ ಮಂಡಿಸಲಾಗುವುದು. ಈ ಪ್ರಸ್ತಾವನೆಗೆ ಅನಮೋದನೆ ದೊರೆತರೆ DGCA ಬದಲಿಗೆ "ನಾಗರಿಕ ವಿಮಾನಯಾನ ಪ್ರಾಧಿಕಾರ (Civil Aviation Authority)" ಜಾರಿಗೆ ಬರಲಿದೆ.

ಬದಲಾವಣೆ ಏಕೆ?

- ದೇಶದಲ್ಲಿ ವಿಮಾನದಲ್ಲಿ ಸಂಚಾರ ಮಾಡುವ ಪ್ರಯಾಣಿಕರು ಹಾಗೂ ವಿಮಾನಗಳ ದಟ್ಟಣೆ ಹೆಚ್ಚಾಗಿದೆ. ಆದರೆ ವಿಮಾನಯಾನವನ್ನು ನಿಯಂತ್ರಿಸುವ DGCA ಕಾರ್ಯಕ್ಷಮತೆ ಮಾತ್ರ ಕಳಪೆ ಮಟ್ಟದಲ್ಲಿದೆ. ಸದ್ಯ ಕೇಂದ್ರ ಲೋಕ ಸೇವಾ ಆಯೋಗದ ಮೂಲಕ ಸಿಬ್ಬಂದಿಯನ್ನು ತುಂಬಿಕೊಳ್ಳಲಾಗುತ್ತಿದ್ದು ನೇಮಕಾತಿಯಲ್ಲಿ ಆಗುತ್ತಿರುವ ವಿಳಂಬವೇ ಕಾರ್ಯಕ್ಷಮತೆಗೆ ತೊಡಕು ಉಂಟುಮಾಡಿದೆ.
- ಈಗ ಜಾರಿಗೊಳಿಸಲು ಉದ್ದೇಶಿಸಿರುವ "ನಾಗರಿಕ ವಿಮಾನಯಾನ ಪ್ರಾಧಿಕಾರವು" ಆಡಳಿತದಲ್ಲಿ ಸ್ವಾಯತ್ತತೆಯನ್ನು ಹೊಂದಿರಲ್ಲಿದ್ದು, ಸಿಬ್ಬಂದಿ ನೇಮಕಾತಿ, ಹಣಕಾಸು ವಿಚಾರ ಸೇರಿದಂತೆ ಸ್ವಾತಂತ್ರವಾಗಿ ಕಾರ್ಯನಿರ್ವಹಿಸಲಿದೆ.

ನಾಗರಿಕ ವಿಮಾನಯಾನ ಪ್ರಾಧಿಕಾರ

- ಸುಮಾರು 12 ಕೋಟಿ ವೆಚ್ಚದಲ್ಲಿ ಈ ಪ್ರಾಧಿಕಾರವನ್ನು ಸ್ಥಾಪಿಸಲಾಗುವುದು.
- ಪ್ರಾಧಿಕಾರವು ಒಬ್ಬ ಅಧ್ಯಕ್ಷರು, ಒಬ್ಬ ಸಾಮಾನ್ಯ ನಿರ್ದೇಶಕರು ಹಾಗೂ 7 ರಿಂದ 9 ಜನ ಸದಸ್ಯರನ್ನು ಒಳಗೊಂಡಿರಲಿದೆ. ಇದರಲ್ಲಿ ಐದು ಜನ ಪೂರ್ಣ ಅವಧಿ ಸದಸ್ಯರಾಗಿರಲ್ಲಿದ್ದಾರೆ.
- ಸಂಪುಟ ಕಾರ್ಯದರ್ಶಿ ನೇತೃತ್ವ ವಹಿಸಿರುವ ಸಮಿತಿಯ ಸಲಹೆ ಮೇರೆಗೆ ಪ್ರಾಧಿಕಾರ ಮಂಡಳಿಯನ್ನು ನೇಮಕ ಮಾಡಲಾಗುವುದು.

**ಕಂಗಾಲ್ ಮಲ್ಸತ್ ಚಿತ್ರಕ್ಕೆ ಪಶ್ಚಿಮ ಬಂಗಾಳದಲ್ಲಿ ತಡೆ**

ಇತ್ತೀಚೆಗಷ್ಟೇ ಸಂಕಷ್ಟದಲ್ಲಿದ "ವಿಶ್ವರೂಪಂ" ಚಿತ್ರದ ವಿವಾದ ತಣ್ಣಗದೇ ಹೊತ್ತಲ್ಲೇ ಪಶ್ಚಿಮ ಬಂಗಾಳದಲ್ಲಿ ಮತ್ತೊಂದು ಚಿತ್ರದ ಪ್ರದರ್ಶನಕ್ಕೆ ತಡೆಹಾಕುವ ಮೂಲಕ ಸುದ್ದಿ ಮಾಡಿದೆ. ಸುಮನ್ ಮುಖ್ಯೋಪಾಧ್ಯಯ ನಿರ್ದೇಶನದ "ಕಂಗಾಲ್ ಮಲ್ಸತ್" (War cry of the Poor) ಎಂಬ ಚಿತ್ರದ ಬಿಡುಗಡೆ ಸೆನ್ಸಾರ್ ಮಂಡಳಿ ತಡೆಒಡ್ಡಿದೆ.

ವಿವಾದವೇನು?

- ಖ್ಯಾತ ಲೇಖಕಿ ಮಹಾಶ್ವೇತದೇವಿ ಯವರ ಮಗನಾದ ನಬುರಣ್ ಭಟ್ಟಚಾರ್ಯ ರವರ ಪುಸ್ತಕ ಆಧಾರಿತ "ಕಂಗಾಲ್ ಮಲ್ಸತ್" ಚಿತ್ರದಲ್ಲಿ ಪಶ್ಚಿಮ ಬಂಗಾಳ ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಟಾಟಾ ಕಾರು ಕಂಪನಿಯನ್ನು ಹೊರಹಾಕಿದ ಚಳುವಳಿ ಕ್ರಮವನ್ನು ಹಾಸ್ಯಸ್ಪದವಾಗಿ ಚಿತ್ರಿಸಲಾಗಿದೆ.
- ಅಲ್ಲದೇ ಮುಖ್ಯಮಂತ್ರಿಯವರ ಪ್ರಮಾಣ ವಚನ ಸಮಯವನ್ನು ಕುಚೋದ್ಯವಾಗಿ ಚಿತ್ರಿಕರಿಸಲಾಗಿದೆ ಮತ್ತು ಅಶ್ಲೀಲ ಸಂಭಾಷಣೆಗಳು ಈ ಚಿತ್ರದಲ್ಲಿವೇ. ಇದರಿಂದ ಸಾಮಾನ್ಯ ಜನರ ಭಾವನೆಗಳಿಗೆ ದಕ್ಕೆ ಉಂಟಾಗುತ್ತದೆ ಎಂಬ ಕಾರಣಗಳಿಂದ ಸೆನ್ಸಾರ್ ಮಂಡಳಿ ಈ ನಿರ್ಧಾರ ಕೈಗೊಂಡಿದೆ.

**<u>ರೈಲ್ವೇ ಬಜೆಟ್ ಮಂಡನೆ 2013-14 ಮುಖ್ಯಾಂಶಗಳು</u>**

ಕೇಂದ್ರ ರೈಲ್ವೆ ಸಚಿವ ಪಿ.ಕೆ ಬನ್ಸಲ್ ರವರು 2013-14 ನೇ ಸಾಲಿನ ರೈಲ್ವೆ ಬಜೆಟ್ ನ್ನು ಸಂಸತ್ತಿನಲ್ಲಿ ಮಂಡಿಸಿದರು. 17 ವರ್ಷಗಳಲ್ಲಿ ಇದೇ ಮೊದಲ ಬಾರಿ ರೈಲ್ವೆ ಬಜೆಟ್ ಮಂಡಿಸಿದ ಕಾಂಗ್ರೆಸ್ ಸಚಿವ ಬನ್ಸಲ್ ರವರ ಬಜೆಟ್ ಮುಖ್ಯಾಂಶಗಳು ಇಲ್ಲಿವೆ.

- ರಾಯ್ ಬರೇಲಿ ಯಲ್ಲಿ ಹೊಸದಾಗಿ ಗಾಲಿ ಕಾರ್ಖಾನೆ ಸ್ಥಾಪನೆ
- ಸರಕು ಸಾಗಣಿಕೆ ದರ ಶೇ.5.8 ರಷ್ಟು ಹೆಚ್ಚಳ ಇದರಿಂದ ರೂ.4200 ಕೋಟಿ ವರಮಾನದ ಗುರಿ
- ರಾಜಸ್ತಾನದ ಬಿಲ್ವಾರದಲ್ಲಿ ರಾಜ್ಯ ಮತ್ತು BHEL ಸಹಯೋಗದೊಂದಿಗೆ ಎಲೆಕ್ಟ್ರಿಕ್ ಬಿಡಿಭಾಗಗಳ ತಯಾರಿಕ ಘಟಕ.
- 106 ಹೊಸ ರೈಲುಗಳು, ಇದರಲ್ಲಿ 67 ಎಕ್ಸಪ್ರೆಸ್ ಮತ್ತು 26 ಪ್ರಯಾಣಿಕರ ರೈಲು
- ಹರಿಯಾಣದ ಸೊನೆಪೇಟ್ ಜಿಲ್ಲೆಯಲ್ಲಿ ಬೋಗಿ ತಯಾರಿಕ ಘಟಕ.
- ವೆಗಾನ್ ನಿರ್ವಹಣೆಗೆ ಒಡಿಶಾ ಕಲಹಡಿಯಲ್ಲಿ ವರ್ಕಶಾಪ್ ಸ್ಥಾಪನೆ
- 2012-13 ನೇ ಸಾಲಿನಲ್ಲಿ 1.52 ಲಕ್ಷ ಉದ್ಯೋಗಿಗಳ ನೇಮಕಮಾಡಿಕೊಳ್ಳಲಾಗುವುದು.
- ಶೈಕ್ಷಣಿಕ ಪ್ರವಾಸಕ್ಕೆ "ಆಜಾದಿ ಎಕ್ಸ್ ಪ್ರೆಸ್". ಭಾರತಕ್ಕೆ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದ ಪ್ರಮುಖ ಸ್ಥಳಗಳಿಗೆ ವಿದ್ಯಾರ್ಥಿಗಳು ಪ್ರವಾಸ ಕೈಗೊಳ್ಳಲು ಇದು ಅನುಕೂಲವಾಗಲಿದೆ.
- ಸೌರ ಶಕ್ತಿ ಮತ್ತು ಪವನ ಶಕ್ತಿಯ ಬಳಕೆಗೆ ರೈಲ್ವೆ ಇಂಧನ ನಿರ್ವಹಣೆ ಸಂಸ್ಥೆಯ ಸ್ಥಾಪನೆ.
- ಆಯ್ದ ಕೆಲವು ರೈಲುಗಳಲ್ಲಿ ವೈ-ಫೈ ಸೇವೆಯನ್ನು ಆರಂಭಿಸಲಾಗುವುದು.
- ಇಂಟರ್ ನೆಟ್ ಬುಕ್ಕಿಂಗ್ ಮತ್ತು ಫೋನ್ ಮೂಲಕ ಟಿಕೆಟ್ ಕಾಯ್ದಿರಿಸುವಿಕೆಗೆ ಒತ್ತು.
- ಶತಾಬ್ದಿ ಮತ್ತು ರಾಜಧಾನಿ ರೈಲುಗಳಲ್ಲಿ ವಿಶೇಷ A/C ಬೋಗಿಗಳ ಅಳವಡಿಕೆ.
- ರೈಲ್ವೆ ಸುರಕ್ಷತೆಗೆ ಅಗತ್ಯ ಕ್ರಮ, ಬೆಂಕಿ ಮನ್ಸೂಚನೆ ವ್ಯವಸ್ಥೆಯ ಅಳವಡಿಕೆ ಇತ್ಯಾದಿ.

ರಾಜ್ಯದ ಪಾಲು:

- ನಾಲ್ಕು ಹೊಸ ಮಾರ್ಗಗಳ ನಿರ್ಮಾಣ, ಒಂಬತ್ತು ಹೊಸ ರೈಲುಗಳ ಓಡಾಟ
- ಎಂಟು ರೈಲುಗಳ ಓಡಾಟ ವಿಸ್ತರಣೆ
- ಮಂಗಳೂರಿನಲ್ಲಿ "ಕೌಶಲ್ಯ ತರಭೇತಿ ಕೇಂದ್ರ" ಸ್ಥಾಪನೆ
- ಬೆಂಗಳೂರಿನಲ್ಲಿ ಸುಸಜ್ಜಿತ ಐಷರಾಮಿ ನಿರೀಕ್ಷಣಾ ಕೊಠಡಿ.

**<u>ಮಹಿಳಾ ಸುರಕ್ಷತೆ ಮಸೂದೆಗೆ ಒಪ್ಪಿಗೆ ನೀಡಿದ ರಾಜ್ಯಸಭೆ</u>**

ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ನೀಡುವದನ್ನು ತಡೆಯುವ ಮತ್ತು ಕಛೇರಿಗಳಲ್ಲಿ ಮಹಿಳೆಯರನ್ನು ನಿಂಧಿಸುವ, ಅಶ್ಲೀಲವಾಗಿ ಚೇಡಿಸುವದನ್ನು ನಿರ್ಭಂದಿಸುವ ಮಸೂದೆಗೆ ರಾಜ್ಯ ಸಭೆ ಅಂಗೀಕಾರ ನೀಡಿತು. ಕಳೆದ ಸೆಪ್ಟೆಂಬರ್ ನಲ್ಲಿ ನಡೆದ ಅಧಿವೇಶನದಲ್ಲಿ ಲೋಕಸಭೆ ಈ ಮಸೂದೆಗೆ ಅಂಗೀಕಾರ ನೀಡಿತ್ತು.

- ಮಸೂದೆಯ ಅನ್ವಯ ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರಿಗೆ ಹಿತಕರ ವಾತಾವರಣ ನಿರ್ಮಿಸುವುದಾಗಿದೆ. ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುವುದು, ಅನುಚಿತ ವರ್ತನೆ, ಮಹಿಳೆಯರೊಂದಿಗೆ ಅಸಭ್ಯ ನಡವಳಿಕೆಗಳು ಈ ಮಸೂದೆಯ ಅಡಿಯಲ್ಲಿ ಬರಲಿದೆ.
- ಮನೆಗೆಲಸದರವರೂ ಸೇರಿದಂತೆ, ಸಂಘಟಿತ ಮತ್ತು ಅಸಂಘಟಿತ ವಲಯದ ಮಹಿಳೆಯರನ್ನೂ ಈ ಮಸೂದೆಯಡಿ ತರಲಾಗಿದೆ.
- ಈ ಮಸೂದೆಯ ಪ್ರಕಾರ 10 ಅಥವಾ ಅದಕ್ಕಿಂತ ಹೆಚ್ಚು ನೌಕರರನ್ನು ಹೊಂದಿರುವ ಸಂಸ್ಥೆಯು ಒಳ ದೂರು ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿದೆ. ಈ ಸಮಿತಿಯು ಲೈಂಗಿಕ ಸಂಬಂಧಿತ ದೂರಗಳನ್ನು 90 ದಿನದೊಳಗೆ ವಿಚಾರಣೆ ನಡೆಸಿ ಇತ್ಯಾರ್ಥಗೊಳಿಸಬೇಕು. ಒಂದು ವೇಳೆ ವಿಳಂಬವಾದಲ್ಲಿ ರೂ.50000/ ದಂಡ ವಿಧಿಸಲಾಗುವುದು. ಅದಾಗ್ಯೂ ಮತ್ತೆ ಮತ್ತೆ ವಿಳಂಬ ಧೋರಣೆ ಮಾಡಿದಲ್ಲಿ ಕಂಪನಿ ನೀಡಿರುವ ಪರವಾನಗೆಯನ್ನು ರದ್ದುಗೊಳಿಸಲು ಅವಕಾಶ ನೀಡಿದೆ.

**<u>ಹೆಲಿಕಾಪ್ಟರ್ ಖರೀದಿ ಹಗರಣ ಜೆಪಿಸಿ ತನಿಖೆ</u>**

ಅತಿ ಗಣ್ಯರ ಸಂಚಾರಕ್ಕೆಂದು ಇಟಲಿ ಮೂಲದ ಅಗಸ್ತ ವೆಸ್ಟಲ್ಯಾಂಡ್ ಕಂಪನಿಯಿಂದ 12 ಹೆಲಿಕ್ಯಾಪ್ಟರ್ ಗಳ ಖರೀದಿಯಲ್ಲಿ ನಡೆದಿರುವ ಬಾರಿ ಹಗರಣದ ತನಿಖೆಯನ್ನು ಜಂಟಿ ಸದನ ಸಮಿತಿಗೆ ವಹಿಸಲಾಗಿದೆ (ಜೆಪಿಸಿ). ಬಿಜೆಪಿ ಮತ್ತು ಎಡರಂಗಗಳ ವಿರೋಧದ ನಡುವೆಯೇ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ. ಹೆಲಿಕ್ಯಾಪ್ಟರ್ ಖರೀದಿಗೆ ಸಂಬಂಧಿಸಿದಂತೆ ನಡೆಯಲಾದ ಹಗರಣದ ತನಿಖಾ ವರದಿಯನ್ನು ಮುಂದಿನ ಮೂರು ತಿಂಗಳ ಒಳಗೆ ಸಮಿತಿ ಸರ್ಕಾರಕ್ಕೆ ಸಲ್ಲಿಸಲಿದೆ. ಜೆಪಿಸಿ ಯು 20 ಲೋಕಸಭಾ ಸದಸ್ಯರನ್ನು ಮತ್ತು 10 ರಾಜ್ಯಸಭಾ ಸದಸ್ಯರನ್ನು ಒಳಗೊಂಡಿದೆ.

ಜೆಪಿಸಿ ರಚನೆ ಹೇಗೆ?

- ಜಂಟಿ ಸದನ ಸಮಿತಿಯು ಭಾರತ ಸಂಸತ್ತಿನ ಸದನಗಳ ಪೈಕಿ ಒಂದು. ಈ ಸಮಿತಿಯು ತಾತ್ಕಾಲಿಕ ಸಮಿತಿಯಾಗಿದ್ದು ಅಗತ್ಯವಿದ್ದಾಗ ಮಾತ್ರ ರಚಿಸಲಾಗುವುದು.
- ಜಂಟಿ ಸದನ ಸಮಿತಿಯ ನಿರ್ಮಾಣಕ್ಕೆ ಮಂಡಿಸಿದ ವಿಷಯವು ಯಾವುದಾದರು ಒಂದು ಸದನದಲ್ಲಿ ಅಂಗೀಕಾರಕೊಂಡು ಮತ್ತೊಂದು ಸದನದ ಒಪ್ಪಿಗೆ ಪಡೆದ ನಂತರ ರಚನೆಯಾಗುತ್ತದೆ. ಅಥವಾ ಎರಡು ಸದನದ (ಲೋಕಸಭಾ ಮತ್ತು ರಾಜ್ಯಸಭಾ) ನಾಯಕರುಗಳು ಪರಸ್ಪರ ಚರ್ಚೆಯ ನಂತರವೂ ಈ ಸಮಿತಿಯನ್ನು ರಚಿಸಬಹುದಾಗಿದೆ.
- ಜೆಪಿಸಿ ಸಮತಿಯಲ್ಲಿ ಲೋಕಸಭಾ ಸದಸ್ಯರುಗಳ ಸಂಖ್ಯೆ ರಾಜ್ಯ ಸಭಾ ಸದಸ್ಯರಿಗಿಂತಲೂ ಎರಡು ಪಟ್ಟು ಹೆಚ್ಚಿರುತ್ತದೆ ಉದಾ: ಲೋಕಸಭೆ ಸದಸ್ಯರ ಸಂಖ್ಯೆ 10 ಇದ್ದರೆ, 5 ರಾಜ್ಯಸಭಾ ಸದಸ್ಯರನ್ನು ಒಳಗೊಂಡಿರುತ್ತದೆ.

- ಹೀಗೆ ರಚಿಸಲಾದ ಜೆಪಿಸಿಯು ಯಾವುದೇ ಹಗರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ವಶಪಡಿಸಿಕೊಳ್ಳುವ, ಪರಿಶೀಲಿಸುವ, ತನಿಖೆ ನಡೆಸುವ ಮತ್ತು ವರದಿ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

ಭಾರತದ ಮೊದಲ ಜೆಪಿಸಿ

- ಆಗಸ್ಟ್ 6, 1987 ರಲ್ಲಿ ಬೋಫೋರ್ಸ್ ಒಪ್ಪಂದಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಮೊದಲು ಜೆಪಿಸಿಯನ್ನು ರಚಿಸಲಾಯಿತು. ಬಿ.ಶಂಕರನಂದ ಈ ಸಮಿತಿಯ ಅಧ್ಯಕ್ಷರಾಗಿದ್ದರು.
- ಇಲ್ಲಿಯವರೆಗೆ ಒಟ್ಟು 5 ಜೆಪಿಸಿಗಳನ್ನು ರಚಿಸಲಾಗಿದೆ. ಹೆಲಿಕ್ಯಾಪ್ಟರ್ ಖರೀದಿಗೆ ಸಂಬಂಧಿಸದ ಹಗರಣ ತನಿಖೆ ಸೇರಿದರೆ ಒಟ್ಟು 6 ಆಗಲಿದೆ.

**ಅತಿ ಹೆಚ್ಚು ನಗರ ಜನಸಂಖ್ಯೆಯನ್ನು ಹೊಂದಲಿರುವ ಮಹಾರಾಷ್ಟ್ರ**

2026 ರ ವೇಳೆಗೆ ಮಹಾರಾಷ್ಟ್ರದ ನಗರ ಜನಸಂಖ್ಯೆಯಲ್ಲಿ ಹೆಚ್ಚಳವಾಗಲಿದ್ದು, ಅತಿ ಹೆಚ್ಚು ನಗರ ಜನಸಂಖ್ಯೆಯನ್ನು ಹೊಂದಿರುವ ರಾಜ್ಯವಾಗಿ ಮಹಾರಾಷ್ಟ್ರ ಹೊರಹೊಮ್ಮಲಿದೆ. ಉಳಿದಂತೆ ಉತ್ತರ ಪ್ರದೇಶ ಮತ್ತು ತಮಿಳುನಾಡು ನಂತರದ ಸ್ಥಾನದಲ್ಲಿ ಮುಂದುವರೆಯಲಿದೆ ಎಂಬ ವರದಿಯನ್ನು ಲೋಕ ಸಭೆಯಲ್ಲಿ ತಿಳಿಸಲಾಗಿದೆ. ಭಾರತ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ಅಂದಾಜು ಮಾಡಿರುವ ಪ್ರಕಾರ 2026 ರ ಹೊತ್ತಿಗೆ ಭಾರತ ಜನಸಂಖ್ಯೆ 140 ಕೋಟಿಗೆ ಏರಿಕೆಯಾಗಲಿದೆ. ಮತ್ತು ಮುಂದಿನ 13 ವರ್ಷಗಳಲ್ಲಿ ದೇಶದ ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆ ಪಾಲು ಶೇ.53.48 ಕೋಟಿ ಇರಲಿದೆ.

- ಜನಗಣತಿ ಅಂಕಿ ಅಂಶಗಳ ಪ್ರಕಾರ ನಗರ ಜನಸಂಖ್ಯೆ ಅಧಿಕವಾಗಲಿರುವ ಮೊದಲ ಐದು ರಾಜ್ಯಗಳು ಮಹಾರಾಷ್ಟ್ರ (8.13 ಕೋಟಿ) ಉತ್ತರ ಪ್ರದೇಶದಲ್ಲಿ (6.75 ಕೋಟಿ), ತಮಿಳುನಾಡು (5.37 ಕೋಟಿ), ಗುಜರಾತ್ (3.67 ಕೋಟಿ) ಮತ್ತು ಪಶ್ಚಿಮ ಬಂಗಾಳ (3.53 ಕೋಟಿ). ಲಕ್ಷದ್ವೀಪ ಕೇವಲ 24,000 ಜನಸಂಖ್ಯೆಯೊಂದಿಗೆ ಕೊನೆಯ ಸ್ಥಾನದಲ್ಲಿದೆ.
- ನಗರಗಳ ಪೈಕಿ ಮುಂಬೈ ಅಗ್ರಸ್ಥಾನದಲ್ಲಿರಲಿದೆ, ನಂತರದ ಸ್ಥಾನದಲ್ಲಿ ದೆಹಲಿ, ಕೊಲ್ಕತ್ತಾ ಮುಂದುವರೆಯಲಿವೆ.

# ಅಂತರ್ ರಾಷ್ಟ್ರೀಯ

**ಪಾಕಿಸ್ತಾನದ ವಿವಾದಾತ್ಮಕ ಮಸೂದೆಗೆ ಸಂಸತ್ತು ಒಪ್ಪಿಗೆ**

ಪಾಕಿಸ್ತಾನದ ಗುಪ್ತಚರ ಮತ್ತು ತನಿಖಾ ಸಂಸ್ಥೆಗಳ ಅಧಿಕಾರವನ್ನು ಬಲಗೊಳಿಸುವ ಮಹತ್ತರ ಹಾಗೂ ವಿವಾದಾತ್ಮಕ ಮಸೂದೆಯೊಂದಕ್ಕೆ ಪಾಕ್ ಸಂಸತ್ತು ಒಪ್ಪಿಗೆ ನೀಡಿದೆ. ಸದ್ಯ ಈ ಮಸೂದೆಯನ್ನು ಅಧ್ಯಕ್ಷರ ಅನುಮೋದನಗೆ ಕಳುಹಿಸಲಾಗಿದ್ದು, ಅಧ್ಯಕ್ಷರು ಸಹಿ ಮಾಡಿದ್ದಲ್ಲಿ ಕಾನೂನು ಆಗಿ ಜಾರಿಗೊಳ್ಳಲಿದೆ.

ಮಸೂದೆ ಯಾವುದು?

- ಫೇರ್ ಟ್ರಯಲ್ -2012 (Fair Trial-2012) ಎಂಬ ಈ ಮಸೂದೆಗೆ ಪಾಕಿಸ್ತಾನದ ಕೆಳಮನೆ (ನ್ಯಾಷನಲ್ ಅಸೆಂಬ್ಲಿ) ಮತ್ತು ಮೇಲ್ಮನೆ (ಸೆನೆಟ್) ಸಹಿ ಹಾಕುವ ಮೂಲಕ ಒಪ್ಪಿಗೆ ಸೂಚಿಸಿವೆ.
- ಈ ಮಸೂದೆಯ ಪ್ರಕಾರ ಗುಪ್ತಚರ ಮತ್ತು ತನಿಖಾ ಸಂಸ್ಥೆಗಳು ದೂರವಾಣಿ ಕದ್ದಾಲಿಕೆ, ಇಮೇಲ್, ಎಸ್ಎಂಎಸ್ ಮೇಲೆ ನೇರ ನಿಗಾ ಇಡಬಹುದಾಗಿದೆ. ಅಲ್ಲದೇ, ತನಿಖಾ ಸಂಸ್ಥೆಗಳು ಸಂಗ್ರಹಿಸುವ ಎಲೆಕ್ಟ್ರಾನಿಕ್ ಅಂಕಿ-ಅಂಶಗಳಿಗೆ ನ್ಯಾಯಾಲಯ ಮಾನ್ಯತೆ ನೀಡಲಿದೆ.
- ಭಯೋತ್ಪಾದನೆಯ ನಿಗ್ರಹಕ್ಕೆ ಪಾಕ್ ಈ ಅಧಿಕಾರವನ್ನು ಗುಪ್ತಚರ ಮತ್ತು ತನಿಖಾ ಸಂಸ್ಥೆಗಳಿಗೆ ನೀಡಲು ಮುಂದಾಗಿದೆ.

ವಿವಾದ ಏಕೆ?

- ನಾಗರಿಕರ ಖಾಸಗಿತನ ಮತ್ತು ಸ್ವಾತಂತ್ರಕ್ಕೆ ದಕ್ಕೆ ಬರಲಿದೆ ಎಂದು ಮಾನವ ಹಕ್ಕುಗಳ ಗುಂಪು ಇದನ್ನು ವಿರೋಧಿಸಿದೆ.

**ಗ್ವದಾರ್ (Gwadar) ಬಂದರನ್ನು ಚೀನಾಗೆ ಹಸ್ತಾಂತರಿಸಿದ ಪಾಕ್**

ಪಾಕಿಸ್ತಾನ ತನ್ನ ದೇಶದ ಗ್ವದಾರ್ ಬಂದರ ನಿರ್ವಹಣೆಯನ್ನು ಚೀನಾಗೆ ಹಸ್ತಾಂತರಿಸಿದೆ. ಇದುವರೆಗೂ ಇದರ ನಿರ್ವಹಣೆಯನ್ನು ಸಿಂಗಾಪುರ್ ಮೂಲದ ಪೋರ್ಟ್ ಆಫ್ ಸಿಂಗಾಪುರ ಆಥಾರಿಟಿ ಇಂಟರ್ ನ್ಯಾಷನಲ್ ಗೆ (Port of Singapore Authority International) ವಹಿಸಲಾಗಿತ್ತು. ಆದರೆ ಭದ್ರತಾ ವಿಚಾರ, ಸ್ಥಳ ಹಸ್ತಾಂತರ ಮುಂತಾದ ವಿಷಯಗಳಲ್ಲಿ ಪಾಕಿಸ್ತಾನ ಜೊತೆ ಬಿನ್ನಾಭಿಪ್ರಾಯ ಮೂಡಿದ ಕಾರಣ PSA ಈ ಒಪ್ಪಂದದಿಂದ ಹಿಂದೆ ಸರಿದಿದೆ.

- ಈ ಬಂದರಿನ ಹಸ್ತಾಂತರದಿಂದ ಚೀನಾಗೆ ಬಹಳಷ್ಟು ಅನುಕೂಲವಾಗಲಿದೆ. ಚೀನಾದ ವಾಯುವ್ಯ ಭಾಗಕ್ಕೆ ತೈಲ ಮತ್ತು ಅನಿಲವನ್ನು ಪೂರೈಸಲು ಇದು ಸಹಕಾರಿಯಾಗಲಿದೆ. ಅಲ್ಲದೇ ಚೀನಾದ ಉದ್ದೇಶಿತ "ಸ್ಟ್ರಿಂಗ್ ಆಫ್ ಪರ್ಲ್" ಯೋಜನೆಗೂ ಇದು ಅನುಕೂಲವಾಗಲಿದೆ ಎಂದು ತಿಳಿಯಲಾಗಿದೆ.

ಭಾರತದ ನಿಲುವೇನು?

ಪಾಕಿಸ್ತಾನ ಈ ಬಂದರನ್ನು ಚೀನಾಕ್ಕೆ ಹಸ್ತಾಂತರಿಸಿರುವುದನ್ನು ಭಾರತ ಅತಿ ಸೂಕ್ಷವಾಗಿ ಪರಿಗಣಿಸಿದೆ. ಚೀನಾ ಈ ಪ್ರಾಂತ್ಯದಲ್ಲಿ ಮಿಲಿಟರಿ ನೆಲೆಯನ್ನು ಸ್ಥಾಪಿಸಬಹುದು ಎಂಬ ಶಂಕೆಯನ್ನು ಭಾರತ ಹೊಂದಿದೆ. ಅಲ್ಲದೇ ಈ ಬೆಳವಣಿಗೆಯೂ ಚೀನಾದ "ಸ್ಟ್ರಿಂಗ್ ಆಫ್ ಪರ್ಲ್ (String of Pearl)" ಯೋಜನೆಯ ಒಂದು ಭಾಗವೆಂದು ಭಾರತ ಪ್ರತಿವಾದಿಸಿದೆ.

ಏನಿದು "ಸ್ಟ್ರಿಂಗ್ ಆಫ್ ಪರ್ಲ್"?

- ಚೀನಾ ತನ್ನ ಭೂ ಭಾಗದಿಂದ ಸೂಡಾನ್ ಬಂದರಿನ ತನಕ ಸಮುದ್ರ ಮಾರ್ಗವನ್ನು ರೂಪಿಸುತ್ತಿರುವ ಯೋಜನೆಯೇ "ಸ್ಟ್ರಿಂಗ್ ಆಫ್ ಪರ್ಲ್". ಈ ಮಾರ್ಗವು ಪ್ರಮುಖ ಸ್ಥಳಗಳಾದ ಮಂದೇಡ್ ಜಲಸಂಧಿ, ಮಲಾಕ ಜಲಸಂಧಿ, ಹರ್ಮುಜ್ ಜಲಸಂಧಿ ಮತ್ತು ಬಾಂಗ್ಲದೇಶ, ಶ್ರೀಲಂಕಾ ಹಾಗೂ ಪಾಕಿಸ್ಥಾನ ದೇಶಗಳ ಮೂಲಕ ಹಾದು ಹೋಗಲಿದೆ.
- ಆದರೆ ಭಾರತದ ಗ್ರಹಿಕೆಯೆ ಬೇರೆಯಾಗಿದೆ ಚೀನಾ, ಭಾರತದ ಸುತ್ತಲಿನ ಪ್ರದೇಶಗಳ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದು, ಈ ಭಾಗಗಳಲ್ಲಿ ಮಿಲಿಟರಿ ನೆಲೆಯನ್ನು ಸ್ಥಾಪಿಸುತ್ತಿದೆ ಎಂದು ಆಕ್ಷೇಪಿಸಿದೆ. ಚೀನಾ ಈಗಾಗಲೇ ಶ್ರೀಲಂಕಾ ಮತ್ತು ಬಾಂಗ್ಲದೇಶಗಳಲ್ಲಿ ಬಂದರನ್ನು ಅಭಿವೃದ್ಧಿಪಡಿಸುವ ಒಪ್ಪಂದಕ್ಕೆ ಸಹಿ ಹಾಕಿದೆ.

**ವರ್ಷಾಂತ್ಯಕ್ಕೆ 34 ಸಾವಿರ ಸೈನಿಕರನ್ನು ವಾಪಸ್ಸು ಕರೆಸಿಕೊಳ್ಳಲಾಗುವುದು: ಒಬಾಮ**

ಆಫ್ಘಾನಿಸ್ತಾನದಲ್ಲಿ ಅಮೆರಿಕಾ ನಿಯೋಜಿಸಿರುವ ತನ್ನ 64 ಸಾವಿರ ಯೋಧರ ಪೈಕಿ 34 ಸಾವಿರ ಯೋಧರನ್ನು ವಾಪಸ್ಸು ಕರೆಸಿಕೊಳ್ಳುವುದಾಗಿ ಒಬಾಮ ಹೇಳಿದ್ದಾರೆ. ಎರಡನೇ ಅವಧಿಗೆ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡ ನಂತರ ಮೊದಲ ಬಾರಿಗೆ ಅಮೆರಿಕಾದ ಸೆನೆಟ್ ನಲ್ಲಿ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ವೇಳೆ ತಮ್ಮ ನಿಲುವನ್ನು ಪ್ರಕಟಿಸಿದ್ದಾರೆ.

- ಆಫ್ಘಾನಿಸ್ತಾನ ಮತ್ತು ಅಮೆರಿಕದ ನಡುವೆ 2010 ರಲ್ಲಿ ಲಿಸ್ಬನ್ ಒಪ್ಪಂದ ಹಾಗೂ ಕಳೆದ ವರ್ಷ ಷಿಕಾಗೋದ ಸಭೆಯಲ್ಲಿ ನಿರ್ಧಾರವಾದಂತೆ, 2014 ರ ವೇಳೆಗೆ ಆಫ್ಘಾನಿಸ್ತಾನ ತನ್ನ ದೇಶದ ರಕ್ಷಣೆಯನ್ನು ತಾನೇ ವಹಿಸಿಕೊಳ್ಳಲಿದೆ ಎಂದು ಒಬಾಮ ಹೇಳಿದ್ದಾರೆ.
- ಅಮೆರಿಕದ ಈ ಕ್ರಮವನ್ನು ಆಫ್ಘಾನಿಸ್ತಾನ ಸ್ವಾಗತಿಸಿದ್ದು, ಈ ವರ್ಷದ ಅಂತ್ಯದೊಳಗೆ ನಮ್ಮ ಸರ್ಕಾರ ಎಲ್ಲಾ ರಕ್ಷಣಾ ವ್ಯವಸ್ಥೆ ಮಾಡಿಕೊಳ್ಳಲಿದೆ ಎಂದು ಹೇಳಿದೆ.

**ಭಾರತಕ್ಕೆ ಪೊಟಾಷ್ ಪೂರೈಕೆ ಬೆಲಾರಸ್ ಕಂಪನಿ ಜೊತೆ ಒಪ್ಪಂದ**

ಬೆಲಾರಸ್ ಮೂಲದ ಬೆಲಾರೆಷಿಯನ್ (Belarusian) ಕಂಪನಿಯು ಭಾರತಕ್ಕೆ ಪೊಟಾಷ್ ಪೂರೈಕೆ ಮಾಡುವ ಸಂಬಂಧ ಇಂಡಿಯಾ ಪೊಟಾಷ್ ಲಿಮಿಟೆಡ್ ಕಂಪನಿ ಜೊತೆ ಒಪ್ಪಂದಕ್ಕೆ ಸಹಿಹಾಕಿದೆ.

- ಒಪ್ಪಂದದ ಪ್ರಕಾರ ಬೆಲಾರೆಷಿಯನ್ ಕಂಪನಿಯು ಬಾರತಕ್ಕೆ ಇದೇ ತಿಂಗಳಿನಿಂದ 2014 ರ ತನಕ ಸುಮಾರು ಆರು ಮಿಲಿಯನ್ ಟನ್ ಗಳಷ್ಟು ಪೊಟಾಷ್ ನ್ನು ರಫ್ತು ಮಾಡಲಿದೆ. ಪ್ರತಿ ಟನ್ ಪೊಟಾಷ್ ಗೆ 457 ಡಾಲರ್ ಮೊತ್ತವನ್ನು ನಿಗಧಿ ಪಡಿಸಲಾಗಿದೆ.
- ವಿಶ್ವದ ಶೇ 50% ಪೊಟಾಷ್ ನ್ನು ಹೊಂದಿರುವ ಖ್ಯಾತಿಯನ್ನು ಕೆನಡಾ ಹೊಂದಿದೆ. ರಷ್ಯಾ ಮತ್ತು ಬೆಲಾರಸ್ ತದ ನಂತರ ಸ್ಥಾನಗಳಲ್ಲಿವೆ.
- ಭಾರತದಲ್ಲಿ ಪೊಟಾಷ್ ಗೆ ಭಾರಿ ಬೇಡಿಕೆಯಿದ್ದು, ಕೊರತೆಯನ್ನು ನೀಗಿಸುವ ಸಲುವಾಗಿ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವುದು ಅನಿವಾರ್ಯ. ಪೊಟಾಷ್ ಬಳಕೆ ಗೆ ಕೇಂದ್ರ ಸರ್ಕಾರ ಸಬ್ಸಿಡಿ ಸಹ ಘೋಷಿಸಿದೆ.

ಪೊಟಾಷ್: ಪೊಟಾಷಿಯಂ ಒಂದು ನೀರಿನಲ್ಲಿ ಕರಗಬಲ್ಲ ಉಪ್ಪಾಗಿದ್ದು ಸಾಮಾನ್ಯವಾಗಿ ಪೊಟಾಷ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಜಾಗತಿಕವಾಗಿ ಪ್ರತಿ ವರ್ಷ ಸುಮಾರು 30 ಮಿಲಿಯನ್ ಟನ್ ಗಿಂತಲೂ ಹೆಚ್ಚಾಗಿ ಪೊಟಾಷ್ ನ್ನು

ಉತ್ಪಾದಿಸಲಾಗುತ್ತಿದ್ದು ರಸಗೊಬ್ಬರವಾಗಿ ಅತಿ ಹೆಚ್ಚಾಗಿ ಬಳಸಲಾಗುತ್ತಿದೆ. ನೈಟ್ರೋಜನ್ ಮತ್ತು ಪಾಸ್ಪರಸ್ ನಂತರ ಬೆಳೆಗಳಿಗೆ ಅತಿ ಮುಖ್ಯವಾಗಿ ಬೇಕಾಗುವ ಪೋಷಕಾಂಶ ಪೊಟಾಷಿಯಂ.

<u>**ಕಾಫಿ ರಸ್ಟ್ ರೋಗ: ತುರ್ತು ಪರಿಸ್ಥಿತಿ ಘೋಷಿಸಿದ ಗ್ವಾಟೆಮಾಲ ದೇಶ**</u>

ಗ್ವಾಟೆಮಾಲ ದೇಶದಲ್ಲಿ ಕಾಫಿ ಬೆಳೆಗೆ "ಕಾಫಿ ರಸ್ಟ್" (Coffee Rust) ರೋಗವು ತೀವ್ರವಾಗಿ ಭಾದಿಸಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ದೇಶದಾದ್ಯಂತ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ಗ್ವಾಟೆಮಾಲದ ಅಧ್ಯಕ್ಷರಾದ ಒಟ್ಟೊ ಮೊಲಿನ (Otto Molina)ರವರು ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದು, ಸುಮಾರು 14 ಮಿಲಿಯನ್ ಡಾಲರನ್ನು ಹಣವನ್ನು ಬಿಡುಗಡೆಗೊಳಿಸಿದ್ದಾರೆ. ಈ ಸಹಾಯ ಧನವು ಸುಮಾರು 60,000 ಸಣ್ಣ ರೈತರಿಗೆ ಕ್ರಿಮಿ ನಾಶಕ ಕೊಳ್ಳಲು ನೆರವಾಗಲಿದೆ. ಅಲ್ಲದೇ ಈ ಮಾರಕ ರೋಗ ವ್ಯಾಪಕವಾಗಿ ತಡೆಯುವ ಸಲುವಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಸಹಾಯವಾಗಲಿದೆ ಎಂದು ಅವರು ಹೇಳಿದ್ದಾರೆ.

- ಈ ಆಘಾತಕಾರಿ ಬೆಳವಣೆಗೆಗೆ ಕಳವಳ ವ್ಯಕ್ತ ಪಡಿಸಿರುವ ಒಟ್ಟೊ ಮೊಲಿನ ರವರು ಈ ರೋಗವನ್ನು ತಡೆಯದಿದ್ದರೆ ದೇಶದ ಶೇ.40 ಕಾಫಿ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.
- ನ್ಯಾಷನಲ್ ಕಾಫಿ ಅಸೋಸಿಯೇಶನ್ ಆಫ್ ಗ್ವಾಟೆಮಾಲದ ಅಧ್ಯಕ್ಷರಾದ ನಿಲ್ಸ್ ಲೆಪೊರೊಸ್ಕಿ ಪ್ರಕಾರ ದೇಶದ ಒಟ್ಟು 333 ಮುನಿಸಿಪಾಲಿಟಿಗಳಲ್ಲಿ, 206 ಮುನಿಸಿಪಾಲಿಟಿಗಳಲ್ಲಿ ಕಾಫಿಯನ್ನು ಬೆಳೆಯಲಾಗಿದೆ. ಒಟ್ಟು 667,000 ಎಕರೆಗಳಲ್ಲಿ ಕಾಫಿ ಬೆಳೆಯಲಾಗಿದ್ದು ಅದರಲ್ಲಿ 477,000 ಎಕರೆ ಪ್ರದೇಶಕ್ಕೆ ಕಾಫಿ ರಸ್ಟ್ ರೋಗ ಹರಡಿದೆ.
- ಗ್ವಾಟೆಮಾಲದಲ್ಲಿ ಕಾಫಿ ಉದ್ಯಮದಿಂದ 500,000 ನೇರ ಉದ್ಯೋಗ ಸೃಷ್ಟಿಯಾಗಿದ್ದರೆ, ಸುಮಾರು 700,000 ಜನರು ಕಾಫಿಗೆ ಸಂಬಂಧಿಸಿದ ಉದ್ಯಮಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಆದರೆ ಈ ರೋಗದಿಂದ ಈಗಾಗಲೇ 100,000 ಜನರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಹೇಳಲಾಗಿದೆ.
- 1970 ರ ದಶಕದಲ್ಲಿ ಕೇವಲ ಮದ್ಯ ಆಮೆರಿಕಾ ಭಾಗಕ್ಕೆ ಮಾತ್ರ ಸೀಮಿತವಾಗಿದ್ದ ಈ ರೋಗ ಇದೆ ಮೊದಲ ಬಾರಿಗೆ ಗ್ವಾಟಮಾಲ ದೇಶದಲ್ಲಿ ತನ್ನ ಪ್ರಭಾವ ಬೀರಿದೆ.

ಕಾಫಿ ರಸ್ಟ್ ಏನಿದು?

- ಹೆಮಿಲಿಯಾ ವಸ್ಟಟ್ರಿಕ್ಸ್ (Hemileia vastatrix) ಎಂಬ ಶಿಲೀಂದ್ರ (Fungus) ಈ ರೋಗಕ್ಕೆ ಮೂಲ ಕಾರಣವಾಗಿದೆ. ರೋಗ ಪೀಡಿತ ಕಾಫಿ ಗಿಡಗಳ ಎಲೆಗಳ ಮೇಲೆ ಕಂದು (ಕಬ್ಬಿಣಕ್ಕೆ ತುಕ್ಕು ಹಿಡಿದಾಗ ಕಾಣಿಸುವ ಕಲೆಗಳ ಬಣ್ಣ) ಬಣ್ಣದ ಕಲೆಗಳು ಕಾಣಿಸಿಕೊಳ್ಳುವ ಮೂಲಕ ಈ ರೋಗದ ಲಕ್ಷಣಗಳು ಗೋಚರವಾಗುತ್ತದೆ. ಕಾಲ ಕ್ರಮೇಣ ಎಲೆಗಳು ಒಣಗಿ ಉದುರಲು ಶುರುವಾಗುವುದರಿಂದ ಸಸ್ಯ ತನ್ನ ಆಹಾರ ಉತ್ಪಾದನೆ ಸಾಮರ್ಥ್ಯವನ್ನು ಕಳೆದುಕೊಂಡು ಸಾಯುತ್ತದೆ. ಸಾಮಾನ್ಯವಾಗಿ ಈ ಶಿಲೀಂದ್ರವು ಸಸ್ಯದ ಎಲೆಗಳಿಗೆ ಮಾತ್ರ ಬಾದಿಸುತ್ತದೆ.

<u>ವಿಶ್ವದ ಪ್ರಮುಖ ಕಾಫಿ ಬೆಳೆಯುವ ದೇಶಗಳು</u>

- ಬ್ರೆಜಿಲ್ ದೇಶ ಪ್ರಪಂಚದಲ್ಲೇ ಅತಿ ಹೆಚ್ಚು ಕಾಫಿ ಬೆಳೆಯುವ ದೇಶ ಎಂಬ ಕೀರ್ತಿ ಹೊಂದಿದೆ. ಎರಡನೇಯ ಸ್ಥಾನದಲ್ಲಿ ವಿಯಟ್ನಾಂ, ಮೂರನೇ ಸ್ಥಾನದಲ್ಲಿ ಕೊಲಂಬಿಯಾ, ನಾಲ್ಕನೆ ಸ್ಥಾನದಲ್ಲಿ ಇಂಡೊನೇಷಿಯಾ ಮತ್ತು ಐದನೇ ಸ್ಥಾನದಲ್ಲಿ ಇಥೋಪಿಯಾ ದೇಶವಿದೆ.
- ಜಾಗತಿಕ ಕಾಫಿ ಬೆಳೆಯುವ ದೇಶಗಳ ಪಟ್ಟಿಯಲ್ಲಿ ಭಾರತ 6 ನೇ ಸ್ಥಾನದಲ್ಲಿದೆ. ಭಾರತದ ಶೇ.56 ಕಾಫಿ ಉತ್ಪಾದನೆ ಕರ್ನಾಟಕದಿಂದ ಆಗಲಿದೆ
- ಕಾಫಿ ಉತ್ಪಾದನೆಯನ್ನು ಬ್ಯಾಗ್ ಗಳ ಲೆಕ್ಕದಲ್ಲಿ ಹೇಳಲಾಗುತ್ತದೆ. ಉದಾಹರಣೆಗೆ 2011 ರಲ್ಲಿ ಭಾರತದ ಕಾಫಿ ಉತ್ಪಾದನೆ 5,005,00. ಒಂದು ಬ್ಯಾಗ್ 60 ಕೆ.ಜಿ ಗೆ ಸಮ.

**ರಷ್ಯಾದಲ್ಲಿ ಉಲ್ಕಾ ಸ್ಫೋಟ: 1100 ಮಂದಿಗೆ ಗಾಯ**

ಅಪರೂಪವಾದ ಮತ್ತು ಅತಿ ವಿಸ್ಮಯವಾದ ಘಟನೆಯೊಂದು ರಷ್ಯಾದಲ್ಲಿ ನಡೆಯುವ ಮೂಲಕ ಆತಂಕ ಸೃಷ್ಟಿಸಿದೆ. ಮಧ್ಯ ರಷ್ಯಾದ ಮೂರು ಪ್ರದೇಶಗಳಲ್ಲಿ ಅಂತರಿಕ್ಷದಿಂದ ಬೆಂಕಿಯ ಉಂಡೆಯಂತೆ ಬಂದು ಸಿಡಿದ ಉಲ್ಕಾಪಾತದಲ್ಲಿ ಸುಮಾರು 1100 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಉಲ್ಕೆ ಸಿಡಿದು ಸಂಭವಿಸಿದ ಅಪಘಾತದಿಂದ ಕಟ್ಟಡಗಳ ಕಿಟಕಿ ಗಾಜುಗಳು ಚೂರಾಗಿವೆ.

- ರಷ್ಯಾದ ಚೆಲ್ಯಾಬಿನ್ಸ್ ಪ್ರದೇಶದಲ್ಲಿ ಈ ಅವಗಡ ಸಂಭವಿಸಿದೆ. ಈ ಉಲ್ಕೆ (Meteor) ಬಸ್ ಗಾತ್ರದಲ್ಲಿದ್ದು, 7,000 ಟನ್ ಗಳಷ್ಟು ತೂಕವಿದೆ. ಸುಮಾರು 18 ಕಿ.ಮೀ/ ಸೆಕೆಂಡ್ ವೇಗದಲ್ಲಿ ಅಪ್ಪಳಿಸಿದೆ ಎಂದು ನಾಸಾ ತಿಳಿಸಿದೆ.
- 1908 ರಲ್ಲಿ ಸೈಬೀರಿಯಾದ ತುಂಗುಸ್ಕಾ (Tunguska) ದಲ್ಲಿ ಸಂಭವಿಸಿದ ಉಲ್ಕಾಪಾತ ನಂತರ ನಡೆದ ಅತಿ ದೊಡ್ಡ ಅಪಘಾತ ಇದಾಗಿದೆ ಎಂದು ನಾಸಾ ವಿಜ್ಞಾನಿಗಳು ಹೇಳಿದ್ದಾರೆ. 1908 ರಲ್ಲಿ ಅಂದು ತುಂಗುಸ್ಕಾದಲ್ಲಿ ಸಂಭವಿಸಿದ ಉಲ್ಕಾಪಾತದಲ್ಲಿ 80 ಸಾವಿರ ಮಿಲಿಯನ್ ಮರಗಳು ನೆಲಕಚ್ಚಿದ್ದವು.

**ನಾಲ್ಕು ದಿನಗಳ ಅಂತರದಲ್ಲಿ ಎರಡನೇ ಕ್ಷಿಪಣಿ ಪ್ರಯೋಗಾರ್ಥ ಪರೀಕ್ಷೆ ನಡೆಸಿದ ಪಾಕಿಸ್ತಾನ**

ಅಣ್ವಸ್ತ್ರ ತಲೆಗಳನ್ನು ಹೊತ್ತಯ್ಯಬಲ್ಲ ಹತ್ಫ್-II ಕ್ಷಿಪಣಿಯನ್ನು ಪಾಕಿಸ್ತಾನ ಯಶಸ್ವಿಯಾಗಿ ಪ್ರಯೋಗ ಪರೀಕ್ಷೆ ನಡೆಸಿದೆ. ಕೇವಲ ನಾಲ್ಕು ದಿನಗಳ ಅಂತರದಲ್ಲಿ ಎರಡನೇ ಕ್ಷಿಪಣಿ ಪರೀಕ್ಷೆ ಇದಾಗಿದ್ದು, ಫೆಬ್ರವರಿ 11 ರಂದು ಹತ್ಫ್-IX ಎಂಬ ಕ್ಷಿಪಣಿಯ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತ್ತು. ಭಾರತ ಮತ್ತು ಪಾಕಿಸ್ತಾನದ ನಡುವೆ ಸಂಬಂಧ ಬಿರುಕು ಬಿಟ್ಟಿರುವ ಸಂದರ್ಭದಲ್ಲಿ ಈ ಕ್ಷಿಪಣಿ ಪರೀಕ್ಷೆ ಭಾರತಕ್ಕೆ ಎಚ್ಚರಿಕೆ ಗಂಟೆಯಾಗಿದೆ.

ಹತ್ಫ್-II ಬಗ್ಗೆ

- ಹತ್ಫ್-II ಖಂಡಾತರ ಕ್ಷಿಪಣಿಯು ಅಣ್ವಸ್ತ್ರ ತಲೆಗಳನ್ನು ಸಾಗಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಈ ಕ್ಷಿಪಣಿಯು ಭೂಮಿಯಿಂದ ಭೂಮಿಗೆ ಉಡಾಯಿಸಬಹುದಾಗಿದ್ದು, ನಿಖರವಾಗಿ ಸುಮಾರು 180 ಕೀ.ಮೀ ದೂರವನ್ನು ಕ್ರಮಿಸಬಲ್ಲದಾಗಿದೆ. ಫೆಬ್ರವರಿ 11 ರಂದು ಪರೀಕ್ಷಿಸಲಾದ ಹತ್ಫ್-IX ಕ್ಷಿಪಣಿಯು 60 ಕೀ.ಮೀ ದೂರವನ್ನು ಕ್ರಮಿಸುವ ಸಾಮರ್ಥ್ಯವನ್ನು ಹೊಂದಿತ್ತು.

**ಈಕ್ವೇಡರ್ ನ ಅಧ್ಯಕ್ಷರಾಗಿ ರಾಫೆಲ್ ಕೊರಿಯಾ ಎರಡನೇ ಬಾರಿ ಆಯ್ಕೆ**

ಈಕ್ವೇಡರ್ ನ ಅಧ್ಯಕ್ಷರಾಗಿ ರಾಫೆಲ್ ಕೊರಿಯಾರವರು ಎರಡನೇ ಬಾರಿ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಕೊರಿಯಾರವರು ಶೇ.56.7 ಮತಗಳನ್ನು ಪಡೆಯುವ ಮೂಲಕ ಗೆಲುವು ಸಾಧಿಸಿದ್ದಾರೆ. ಕೊರಿಯಾರವರ ಪ್ರತಿಸ್ಪರ್ಧಿ ಗಿಲೆರ್ಮೊ ರವರು ಶೇ.23.3 ಮತಗಳನ್ನು ಮಾತ್ರ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

- ರಾಫೆಲ್ ರವರು 2007 ರಲ್ಲಿ ಪ್ರಥಮ ಬಾರಿಗೆ ಚುನಾಯಿತರಾಗಿದ್ದರು. ಈಕ್ವೇಡರ್ ನಲ್ಲಿ ರಾಜಕೀಯ ಸ್ಥಿರತೆಯನ್ನು ತರುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು. 49 ವರ್ಷ ವಯಸ್ಸಿನರಾದ ರಾಫೆಲ್ ರವರು ಈಕ್ವೇಡರ್ ನಲ್ಲಿ ನಡೆಸಿದ ನಾಗರಿಕ ಕ್ರಾಂತಿಯಿಂದ ದೇಶದ ಪ್ರಮುಖ ನಾಯಕರಾಗಿ ಉದಯಿಸಿದರು.
- ತಮ್ಮ 6 ವರ್ಷದ ಅಧಿಕಾರದಲ್ಲಿ ಸಾಕಷ್ಟು ಬದಲಾವಣೆಯನ್ನು ಅವರು ತಂದಿದ್ದಾರೆ. ಶಿಕ್ಷಣ, ಆರೋಗ್ಯ, ರಸ್ತೆ ಸಂಪರ್ಕ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಅವರು ಶ್ಲಾಘನೀಯ ಸುಧಾರಣೆಯನ್ನು ತಂದಿದ್ದಾರೆ.
- ಕೊರಿಯಾ ರವರು ತಮ್ಮ ಗೆಲುವನ್ನು ವೆನುಜುವೆಲಾ ಅಧ್ಯಕ್ಷರಾದ ಹುಗೋ ಚಾವೆಜ್ ರವರಿಗೆ ಅರ್ಪಿಸಿದ್ದಾರೆ.

**ಜಂಟಿ ಮಿಲಿಟರಿ ಅಭ್ಯಾಸ ನಡೆಸಲಿರುವ ಅಮೆರಿಕಾ ಮತ್ತು ದಕ್ಷಿಣ ಕೋರಿಯಾ**

ಉತ್ತರ ಕೋರಿಯಾ ಮೂರನೇ ಅಣ್ವಸ್ತ್ರ ಪರೀಕ್ಷೆ ನಡೆಸಿದ ಸುದ್ದಿ ಮಾಸುವ ಮುನ್ನವೇ ಅಮೆರಿಕಾ ಮತ್ತು ದಕ್ಷಿಣ ಕೋರಿಯಾ ಜಂಟಿಯಾಗಿ ಸಮರಭ್ಯಾಸ ನಡೆಸಲು ಸಜ್ಜಾಗಿವೆ. ಮಾರ್ಚ್ 1 ರಿಂದ ಏಪ್ರಿಲ್ 30 ರ ತನಕ ನಡೆಯಲಿರುವ ಈ ಅಭ್ಯಾಸದಲ್ಲಿ ವಾಯು ಸೇನೆ, ಭೂ ಸೇನೆ ಮತ್ತು ನೌಕ ದಳಕ್ಕೆ ಸಂಬಂಧಪಟ್ಟಂತೆ ಉಭಯ ದೇಶಗಳ ಸೇನೆಗಳು ಪಾಲ್ಗೊಳ್ಳಲಿವೆ. ಫೋಲ್ ಈಗಲ್ (Foal Eagle) ಎಂಬ ಈ ಮಿಲಿಟರಿ ಅಭ್ಯಾಸವನ್ನು ಉತ್ತರ ಕೋರಿಯಾ ತೀವ್ರವಾಗಿ ಖಂಡಿಸಿದ್ದು ತನ್ನ ಮೇಲೆ ದಾಳಿ ನಡೆಸುವ ಸಲುವಾಗಿ, ಇದೊಂದು ಪೂರ್ವ ಯೋಚಿತ ಸಮರಭ್ಯಾಸ ಎಂದು ಟೀಕಿಸಿದೆ. ಆದರೆ ಇದನ್ನು ಅಲ್ಲಗಳೆದಿರುವ ಅಮೆರಿಕಾ ಮತ್ತು ದಕ್ಷಿಣ ಕೋರಿಯಾ ಇದನ್ನು ಎರಡು ದೇಶಗಳ ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಲು ನಡೆಸುತ್ತಿರುವುದಾಗಿ ಹೇಳಿವೆ.

- ಈ ಮಿಲಿಟರಿ ಅಭ್ಯಾಸದಲ್ಲಿ ಸುಮಾರು 10,000 ಕ್ಕೂ ಹೆಚ್ಚು ಅಮೆರಿಕಾ ಸೇನಾ ಪಡೆಗಳು ಮತ್ತು ಸುಮಾರು 3500 ಕ್ಕೂ ಹೆಚ್ಚು ದಕ್ಷಿಣ ಕೋರಿಯಾ  ಸೇನಾಪಡೆಗಳು ಭಾಗವಹಿಸಲಿವೆ.
- ಇತ್ತೀಚೆಗೆ ದಕ್ಷಿಣ ಕೋರಿಯಾ ಮತ್ತು ಅಮೆರಿಕಾ ಜಂಟಿಯಾಗಿ ನೌಕದಳ ಸಮರಭ್ಯಾಸವನ್ನು ಆಯೋಜಿಸಿದ್ದವು.

**ಟುನೇಷಿಯಾ ಪ್ರಧಾನ ಮಂತ್ರಿ ಹಮಾದಿ ಜೆಬಲಿ (Hamadi Jebali) ರಾಜೀನಾಮೆ**

ಟುನೇಷಿಯಾದಲ್ಲಿ ಬಿರುಗಾಳಿಯಂತೆ ಎದ್ದಿರುವ ರಾಜಕೀಯ ಅಸ್ಥಿರತೆ ಕೊನೆಗೊಳ್ಳದ ಕಾರಣ ಟುನೇಷಿಯಾದ ಪ್ರಧಾನ ಮಂತ್ರಿ ಹಮಾದಿ ಜೆಬಲಿ ಪ್ರಧಾನಿ ಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಸರ್ಕಾರದ ಅಸ್ಥಿರತೆಯನ್ನು ಸರಿಪಡಿಸಿ ಸರ್ಕಾರವನ್ನು ಮುಂದುವರೆಸುವ ಪ್ರಯತ್ನವನ್ನು ಮಾಡಿದರು ಸಹ ಅದು ಫಲಕಾರಿಯಾಗದ ಕಾರಣ ಜೆಬಲಿ ಪದತ್ಯಾಗ ಮಾಡಿದರು.

ರಾಜಕೀಯ ಅಸ್ಥಿರತೆ ಹೇಗೆ?

- ಟುನೇಷಿಯ ವಿರೋಧ ಪಕ್ಷದ ನಾಯಕರಾದ ಚೊಕ್ರಿ ಬೆಲೈಡ್ (Chokri Belaid) ರವರನ್ನು ಫೆಬ್ರವರಿ 6, 2013 ರಂದು ಗುಂಡಿಕ್ಕಿ ಹತ್ಯೆ ಮಾಡಲಾಯಿತು. ಸರ್ಕಾರದ ಪ್ರಮುಖ ಟೀಕಾಕಾರರಾಗಿದ್ದ ಬೆಲೈಡ್ ರವರ ಹತ್ಯೆಯನ್ನು ಖಂಡಿಸಿ ರಾಷ್ಟ್ರ ವ್ಯಾಪ್ತಿ ಪ್ರತಿಭಟನೆಯನ್ನು ನಡೆಸಲಾಯಿತು. ಅಲ್ಲದೇ ಸರ್ಕಾರವನ್ನು ಬೆಂಬಲಿಸಿದ್ದ ಮಿತ್ರ ಪಕ್ಷಗಳು ಬೆಂಬಲವನ್ನು ಹಿಂಪಡೆದುಕೊಂಡ ಪರಿಣಾಮ ಟುನೇಷಿಯಾದಲ್ಲಿ ರಾಜಕೀಯ ಅಸ್ಥಿರತೆ ತಾಂಡವಾಡಿತ್ತು. ಮಿತ್ರ ಪಕ್ಷಗಳ ಮನವೊಲಿಸುವಲ್ಲಿ ವಿಫಲರಾದ ಜೆಬಲಿ ರವರಿಗೆ ರಾಜೀನಾಮೆ ಅಂತಿಮ ನಿರ್ಧಾರವಾಯಿತು.

  ಹಮಾದಿ ಜೆಬಲಿ:

- ಎನ್ನಹದ ಪಕ್ಷದವರಾದ (Ennahda) ಹಮಾದಿ ಜೆಬಲಿರವರು ಡಿಸೆಂಬರ್ 19, 2011 ರಿಂದ ಟುನೇಷಿಯಾದ ಪ್ರಧಾನಿ ಹುದ್ದೆಯನ್ನು ಅಲಂಕರಿಸಿದ್ದರು. ಎನ್ನಹದ ಚಳುವಳಿಯ ಸೆಕ್ರೆಟರಿ ಜನರಲ್ ಆಗಿ ಸಹ ಜೆಬಲಿಯವರು ಕಾರ್ಯನಿರ್ವಹಿಸಿದ್ದರು.

ಇವರ ರಾಜೀನಾಮೆಯ ನಂತರ **ಅಲಿ ಲಾರಯೆದ್** (Ali Laarayed) ರವರ ಹೆಸರನ್ನು ಪ್ರಧಾನಿ ಹುದ್ದೆಗೆ ಶಿಫಾರಸ್ಸು ಮಾಡಲಾಗಿದೆ.

**ಕ್ಯೂಬಾ ದೇಶದ ಅಧ್ಯಕ್ಷರಾಗಿ ರೌಲ್ ಕ್ಯಾಸ್ಟ್ರೋ (Raul Castro) ಮರು ಆಯ್ಕೆ**

ಕ್ಯೂಬಾ ದೇಶದ ಅಧ್ಯಕ್ಷರಾಗಿ ರೌಲ್ ಕ್ಯಾಸ್ಟ್ರೋ ರವರು ಪುನರ್ ಆಯ್ಕೆಯಾಗಿದ್ದಾರೆ. ನ್ಯಾಷನಲ್ ಅಸೆಂಬ್ಲಿ ಆಫ್ ಪ್ಯೂಪಲ್ ಪವರ್ (National Assembly of People Power) ಕ್ಯಾಸ್ಟ್ರೋ ರವರ ಮರು ಆಯ್ಕೆಯನ್ನು ಸಮ್ಮತಿಸಿದ್ದು, ಮುಂದಿನ ಐದು ವರ್ಷಗಳ ತನಕ ಅವರು ಅಧ್ಯಕ್ಷರಾಗಿ ಸೇವೆ ಸಲ್ಲಿಸಲ್ಲಿದ್ದಾರೆ. ಇದೇ ಮೊದಲ ಬಾರಿಗೆ ಕ್ಯೂಬಾ ದೇಶ ಮಿಗಲ್ ದಿಯಾಜ್ ಕೆನಲ್ ಬರ್ಮುಡೆಜ್ (Miguel Diaz Canel Bermudez) ರವರನ್ನು ದೇಶದ ಪ್ರಥಮ ಉಪಾಧ್ಯಕ್ಷರನ್ನಾಗಿ ಆಯ್ಕೆಮಾಡಿದೆ. ಇದೇ ವೇಳೆ ಎಸ್ಟೆಬೆನ್ ಲಾಜೋ ರವರು ಸ್ಪೀಕರ್ ಆಗಿ ನೇಮಕಗೊಂಡಿದ್ದಾರೆ.

ರೌಲ್ ಕ್ಯಾಸ್ಟ್ರೋ:

- ಕ್ಯೂಬಾ ದ ಕ್ರಾಂತಿಕಾರಿ ಫಿಡೆಲ್ ಕ್ಯಾಸ್ಟ್ರೋ ರವರ ಸಹೋದರರಾಗಿರುವ 81 ವರ್ಷದ ರೌಲ್ ರವರನ್ನು ಫಿಡೆಲ್ ರವರು 2006 ರಲ್ಲಿ ಕ್ಯೂಬಾ ದ ಹಂಗಾಮಿ ಅಧ್ಯಕ್ಷರಾಗಿ ನೇಮಕ ಮಾಡಿದ್ದರು. 2008 ರಲ್ಲಿ ರೌಲ್ ರವರು ಅಧಿಕೃತವಾಗಿ ಕ್ಯೂಬಾ ದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಈಗ ಐದು ವರ್ಷದ ಅವಧಿ ಪೂರ್ಣಗೊಂಡ ಬಳಿಕ ಮತ್ತೇ ಅಧ್ಯಕ್ಷರಾಗಿ ಪುನರ್ ಆಯ್ಕೆಯಾಗಿದ್ದಾರೆ.

ದಿಯಾಜ್ ಕೆನಲ್:

- ಎಲೆಕ್ಟ್ರಿಕಲ್ ಎಂಜನಿಯರ್ ಪಧವಿದರ ಆಗಿರುವ ದಿಯಾಜ್ ಕೆನಲ್ ರವರು ಕ್ಯೂಬಾದ ಮಾಜಿ ಶಿಕ್ಷಣ ಸಚಿವರು. ಕ್ಯೂಬಾ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗಿಯಾಗಿರುವ ದಿಯಾಜ್ ತಮ್ಮ ನಿಷ್ಠೆಯಿಂದಲೇ ಖ್ಯಾತಿ ಹೊಂದಿದ್ದಾರೆ.

**ಡೆಮೋಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಶಾಂತಿ : ವಿಶ್ವ ಸಂಸ್ಥೆ ಜೊತೆಗೆ ಆಫ್ರಿಕಾ ದೇಶಗಳ ಒಪ್ಪಂದ**

ಡೆಮೋಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೋ ಅಥವಾ DR ಕಾಂಗೋದ ಪೂರ್ವ ಭಾಗದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ಕೊನೆಗೊಳಿಸಿ ಶಾಂತಿ ನೆಲೆಸುವಂತೆ ಮಾಡಲು ಆಫ್ರಿಕಾದ ಗ್ರೇಟ್ ಲೇಕ್ ಭಾಗದ ದೇಶಗಳು ವಿಶ್ವಸಂಸ್ಥೆಯೊಂದಿಗೆ ಕೈಜೋಡಿಸಿವೆ. ಈ ಸಂಬಂಧ ತಾಂಜಾನೀಯಾ, ರವಾಂಡ, ದಕ್ಷಿಣ ಆಫ್ರಿಕಾ, ಮೊಜಂಬಿಕ್, ಕಾಂಗೋ ರಿಪಬ್ಲಿಕ್, ದಕ್ಷಿಣ ಸೂಡಾನ ಮತ್ತು ಡೆಮೋಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೋ ದೇಶಗಳು ವಿಶ್ವಸಂಸ್ಥೆಯ ಮಧ್ಯಸ್ಥಿಕೆ ವಹಿಸುವ ಸಲುವಾಗಿ ಇಥೋಪಿಯಾದ

ರಾಜಧಾನಿ ಅಡಿಸ್ ಅಬಾಬದಲ್ಲಿ ಒಪ್ಪಂದಕ್ಕೆ ಸಹಿಹಾಕಿದವು. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್-ಕಿ-ಮೂನ್ ಈ ಸಂದರ್ಭದಲ್ಲಿ ಭಾಗವಹಿಸಿದ್ದರು. ಈ ಒಪ್ಪಂದದ ಅನ್ವಯ ವಿಶ್ವಸಂಸ್ಥೆಯು ತನ್ನ ಸೇನೆಯನ್ನು ಡೆಮೋಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ನಿಯೋಜಿಸಲಿದ್ದು, M23 ಬಂಡುಕೋರರನ್ನು ಹತ್ತಿಕ್ಕಲು ತರಲು ಶ್ರಮಿಸಲಿದೆ.

M23 ಏನಿದು?

- M23 ಅಥವಾ ಮಾರ್ಚ್ 23 ಚಳುವಳಿ ಒಂದು ಬಂಡುಕೋರ ಮಿಲಿಟರಿ ಪಡೆ. ಡೆಮೋಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಸೇನಾಪಡೆಗಳ ಜೊತೆ ಸಂಘರ್ಷವನ್ನು ನಡೆಸುತ್ತಿರುವ ಕಾರಣದಿಂದ ಪೂರ್ವ DR ಕಾಂಗೋದಲ್ಲಿ ಅನೇಕ ಜನರು ಕಾಣೆಯಾಗಿದ್ದಾರೆ. ಏಪ್ರಿಲ್ 2012 ರಲ್ಲಿ ಸ್ಥಾಪಿಸಲಾದ ಈ ಪಡೆಯು DR ಕಾಂಗೋದಲ್ಲಿ ಮಾನವ ಹಕ್ಕು, ಉತ್ತಮ ಸರ್ಕಾರ ಮತ್ತು ನಿಷ್ಕಕಲ್ಮಷ ಪ್ರಜಾಪ್ರಭುತ್ವಕ್ಕೆ ಬೇಡಿಕೆ ಇಟ್ಟಿದೆ. ವಿಶ್ವ ಸಂಸ್ಥೆ ವೀಕ್ಷಣೆ ಪ್ರಕಾರ ರವಾಂಡ ಮತ್ತು ಉಗಾಂಡ ದೇಶಗಳು M23 ಬಂಡುಕೋರರಿಗೆ ಪರೋಕ್ಷವಾಗಿ ಬೆಂಬಲ ನೀಡುತ್ತಿರುವುದಾಗಿ ತಿಳಿದು ಬಂದಿದೆ.

**ಸಿಪ್ರಸ್ ದೇಶದ ನೂತನ ಅಧ್ಯಕ್ಷರಾಗಿ ನಿಕೊಸ್ ಅನಸ್ತಸಿದೆಸ್ (Nicos Anastasides)**

ಡೆಮಾಕ್ರಟಿಕ್ ರಾಲಿ ಪಕ್ಷದ ನಾಯಕ ನಿಕೊಸ್ ಅನಸ್ತಸಿದೆಸ್ ರವರು ಸಿಪ್ರೆಸ್ ನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಫೆಬ್ರವರಿ 28 ರಿಂದ ನಿಕೊಸ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅಧ್ಯಕ್ಷೀಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವರು ಶೇ.57.5 ರಷ್ಟು ಮತಗಳನ್ನು ಪಡೆಯುವ ಮೂಲಕ ಸುಲಭ ಜಯ ಸಾಧಿಸಿದರು. ಇವರ ಪ್ರತಿಸ್ಪರ್ಧಿ ಸ್ಟವರ್ಸೊ ಮಲಾಸ್ (Starvos Malas)ರವರು ಕೇವಲ 42.5 ರಷ್ಟು ಮತಗೊಳಿಸುವ ಮೂಲಕ ಸೋಲನ್ನು ಅನುಭವಿಸಿದ್ದಾರೆ.

ನಿಕೊಸ್ ಅನಸ್ತಸಿದೆಸ್

- ಮೂಲತಃ ವಕೀಲರಾಗಿರುವ 66 ವರ್ಷದ ನಿಕೊಸ್ ರವರು 1981 ರಿಂದ ಸಿಪ್ರಸ್ ಸಂಸತ್ತಿನ ಸದಸ್ಯರಾಗಿದ್ದಾರೆ.
- 1997 ರಿಂದ ಇವರು ಸಿಪ್ರಸ್ ಡೆಮಾಕ್ರಟಿಕ್ Rally ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಈ ಮುಂಚೆ ಸಿಪ್ರಸ್ ದೇಶದ ಅಧ್ಯಕ್ಷರಾಗಿದ್ದ ಡಿಮಿಟ್ರಿಸ್ ಕ್ರಿಸ್ಟೋಫಿಯಸ್ ರವರ ಸ್ಥಾನವನ್ನು ನಿಕೊಸ್ ರವರು ತುಂಬಲ್ಲಿದ್ದಾರೆ. ಪ್ರೋಗ್ರೆಸಿವ್ ಪಾರ್ಟಿ ಆಫ್ ವರ್ಕಿಂಗ್ ಪ್ಯೂಪಲ್ ಪಕ್ಷದವರಾದ ಡಿಮಿಟ್ರಿಸ್ ರವರು ಫೆಬ್ರವರಿ 28 ರಿಂದ 2008 ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

**ಪಾರ್ಕ್ ಗೆನ್ ಹೈ(Park Geun Hye): ದಕ್ಷಿಣ ಕೊರಿಯಾದ ಮೊದಲ ಮಹಿಳಾ ಅಧ್ಯಕ್ಷೆ**

ಏಷ್ಯಾದ ನಾಲ್ಕನೇ ಅತಿ ದೊಡ್ಡ ಆರ್ಥಿಕ ಬಲಿಷ್ಠ ರಾಷ್ಟ್ರವಾದ ದಕ್ಷಿಣ ಕೊರಿಯಾದ ಮೊದಲ ಮಹಿಳೆ ಅಧ್ಯಕ್ಷರಾಗಿ ಪಾರ್ಕ್ ಗೆನ್ ಹೈ ರವರು ಪ್ರಮಾಣ ವಚನ ಸ್ವೀಕರಿಸಿದರು. ಸುಮಾರು 70, 000 ಬೆಂಬಲಿಗರ ಸಮ್ಮುಖದಲ್ಲಿ ಪಾರ್ಕ್ ರವರ ಪ್ರಮಾಣ ವಚನ ಸೋಲ್ ನಲ್ಲಿ ಅದ್ದೂರಿಯಾಗಿ ನಡೆಯಿತು. ಪಾರ್ಕ್ ಗೆನ್ ರವರ ತಂದೆ ಪಾರ್ಕ್ ಚುಂಗ್ ಹೀ ರವರು ಕಟ್ಟಾ ಕಮ್ಯೂನಿಸ್ಟ್ ವಿರೋದಿಯಾಗಿದ್ದರು. ಪಾರ್ಕ್ ಚುಂಗ್ ಹೀ ರವರು 50 ವರ್ಷಗಳ ಹಿಂದೆ ಸೇನಾ ಕ್ಷಿಪ್ರಕ್ರಾಂತಿಯಲ್ಲಿ ಅಧಿಕಾರವಹಿಸಿಕೊಂಡು ರಾಷ್ಟ್ರವನ್ನು ಸುರ್ಪದಿಗೆ ತೆಗೆದುಕೊಂಡಿದ್ದರು.

- ಉತ್ತರ ಕೊರಿಯಾ ನಡೆಸುತ್ತಿರುವ ಅಣ್ವಸ್ತ್ರ ಪರೀಕ್ಷೆಯನ್ನು ಸಹಿಸುವುದಿಲ್ಲ ಎಂದು ಪಾರ್ಕ್ ರವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಉತ್ತರ ಕೊರಿಯಾದ ಈ ಆಘಾತಕಾರಿ ಬೆಳವಣಿಗೆ ಉತ್ತರ ಕೊರಿಯಾವನ್ನು ಮುಂದೊಂದು ದಿನ ನಿರ್ನಾಮ ಮಾಡಲಿದೆ ಎಂದು ಪಾರ್ಕ್ ಅಭಿಪ್ರಾಯಪಟ್ಟರು.
- 61 ವರ್ಷದ ಪಾರ್ಕ್ ರವರು ದಕ್ಷಿಣ ಕೊರಿಯಾ ದೇಶದಲ್ಲಿ ಆರ್ಥಿಕ ಕ್ಷೇತ್ರದಲ್ಲಿ ತಲೆದೊರಿರುವ ಮಂದಗತಿ ಬೆಳವಣಗೆಯನ್ನು ಎದುರಿಸಬೇಕಿದೆ.
- ದಕ್ಷಿಣ ಕೊರಿಯಾದ ನೂತನ ಅಧ್ಯಕ್ಷರನ್ನು ಭಾರತದ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಅಭಿನಂದಿಸಿದ್ದಾರೆ. ಅಲ್ಲದೇ ಭಾರತಕ್ಕೆ ಬೇಟಿ ನೀಡುವಂತೆ ಆಹ್ವಾನ ನೀಡಿದ್ದಾರೆ.

ಕರುನಾಡು ಎಗ್ಸಾಮ್ಸ

# ಪರಿಸರ

**10 ಹೊಸ ಜಾತಿಯ ಎರೆಹುಳುಗಳನ್ನು ಪತ್ತೆ ಹಚ್ಚಿರುವ ವಿಜ್ಞಾನಿಗಳು**

ಥಾಯ್ಲೆಂಡ್ ನ ನದಿ ಪ್ರದೇಶವೊಂದರಲ್ಲಿ 10 ಹೊಸ ಬಗೆಯ ಎರೆಹುಳುಗಳನ್ನು ಪತ್ತೆ ಹಚ್ಚಿರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. ಝೂಕಿ (Zooki) ಎಂಬ ಜರ್ನಲ್ ನಲ್ಲಿ ಈ ಸಂಶೋಧನೆ ಬಗ್ಗೆ ಪ್ರಕಟಿಸಲಾಗಿದ್ದು, ಗ್ಲೈಪಿಡ್ರಿಲಸ್ (Glypidrilus) ಎಂಬ ಪಂಗಡಕ್ಕೆ ಸೇರುವ ಈ ಎರೆಹುಳುಗಳು ಸಿಹಿ ನೀರಿನಲ್ಲಿ ಮತ್ತು ಭತ್ತದ ಗದ್ದೆಗಳಲ್ಲಿ ಅತಿ ಹೆಚ್ಚಾಗಿ ವಾಸಿಸುವುದಾಗಿ ತಿಳಿದು ಬಂದಿದೆ.

- ಈ ಹುಳುಗಳ ದುಂಡಕಾರದ ದೇಹವನ್ನು ಹೊಂದಿದ್ದು ಮತ್ತು ದೇಹದ ಕೊನೆ ಭಾಗ ಚಪ್ಪಟೆಯಾಗಿದೆ. ತಲೆಯ ಭಾಗ ಭೂಮಿಯಲ್ಲಿ ಅವಿತಿಟ್ಟುಕೊಂಡು ವಾಸಿಸುವ ಈ ಹುಳುಗಳ ಹಿಂಭಾಗ ಭೂಮಿಯ ಮೇಲೆ ಇರುತ್ತದೆ. ಆಮ್ಲಜನಕದ ಸಾಗಣೆಕೆಗೆಂದು ದೇಹ ವಿಶಿಷ್ಟವಾದ ಮಾರ್ಪಾಡನ್ನು ಹೊಂದಿರುವುದಾಗಿ ವಿಜ್ಞಾನಿಗಳು ತಿಳಿಸಿದ್ದಾರೆ.
- ದೇಹದ ಮೇಲೆ ರೆಕ್ಕೆಗಳನ್ನು ಹೋಲುವ ಆಕಾರವನ್ನು ಗುರುತಿಸಲಾಗಿದೆ ಆದರೆ ಇದರ ಉಪಯೋಗವೇನು ಎಂಬುದು ಇನ್ನು ತಿಳಿದು ಬಂದಿಲ್ಲ.
- ವಿಜ್ಞಾನಿಗಳ ಪ್ರಕಾರ ಭತ್ತದ ಬೆಳೆವಣಿಗೆಯಲ್ಲಿ ಈ ಹುಳುಗಳು ಪ್ರಮುಖ ಪಾತ್ರ ವಹಿಸಲಿವೆ. ಮಣ್ಣಿನಲ್ಲಿರುವ ಸಾವಯವ ಪದಾರ್ಥಗಳನ್ನು ವಿಭಜಿಸುವ ಮೂಲಕ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲಿವೆ. ಅಷ್ಟೇ ಅಲ್ಲದೇ ರಾಸಾಯನಿಕ ಗೊಬ್ಬರಗಳಲ್ಲಿರುವ ಖನಿಜಾಂಶಗಳ ಬಿಡುಗಡೆಯಲ್ಲು ಸಹಕಾರಿಯಾಗಲಿವೆ.
- ಸಾವಯವ ಕೃಷಿಯಲ್ಲಿ ಪ್ರಮುಖ ಪಾತ್ರವಹಿಸಲಿರುವ ಈ ಎರೆಹುಳುಗಳು ಕ್ರಿಮಿನಾಶಕಗಳ ಬಳಕೆಯಿಂದ ಅಪಾಯ ಎದುರಿಸಲಿವೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

**ಜಲಜೀವಿ ಪರಿಸರ ವ್ಯವಸ್ಥೆಯ ಸರಂಕ್ಷಣಾ ಯೋಜನೆ ಸ್ಥಾಪಿಸಲು ಕೇಂದ್ರ ಸರ್ಕಾರ ಒಪ್ಪಿಗೆ**

ರಾಷ್ಟ್ರೀಯ ಕೆರೆ ಸಂರಕ್ಷಣೆ ಯೋಜನೆ (National Lake Conservation Plan) ಮತ್ತು ರಾಷ್ಟ್ರೀಯ ತೇವಭೂಮಿ ಸಂರಕ್ಷಣೆ ಕಾರ್ಯಕ್ರಮವನ್ನು (National Wetland Conservation Programme) ವಿಲೀನಗೊಳಿಸುವ ಮೂಲಕ ರಾಷ್ಟ್ರೀಯ ಸಮಗ್ರ ಜಲಜೀವಿ ಪರಿಸರ ವ್ಯವಸ್ಥೆಯ ಸರಂಕ್ಷಣಾ ಯೋಜನೆಯನ್ನು(National Plan for Conservation of Aquatic Eco-system (NPCA) ಪ್ರಾರಂಭಿಸಲು ಸಲ್ಲಿಸಲಾಗಿದ್ದ ಪ್ರಸ್ತಾವನೆಗೆ ಆರ್ಥಿಕ ವ್ಯವಹಾರಗಳ ಮೇಲಿನ ಸಂಪುಟ ಸಮಿತಿಯು ಅನುಮೋದನೆ ನೀಡಿದೆ.

- ಈ ಉದ್ದೇಶಿಸಲಾದ ಯೋಜನೆಯ ಅನುಷ್ಠಾನಕ್ಕೆ 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ರೂ.900 ಕೋಟಿ ವೆಚ್ಚ ತಗುಲಲಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಈ ವೆಚ್ಚವನ್ನು 70:30 ಅನುಪಾತದಲ್ಲಿ ಭರಿಸಲಿವೆ. ಆದರೆ ಈಶಾನ್ಯ ರಾಜ್ಯಗಳಿಗೆ ಮಾತ್ರ ಈ ಅನುಪಾತ 90:10 ಇರಲಿದೆ.

ಜಲಜೀವಿಗಳ ಮತ್ತು ಜಲ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸುವ ದೃಷ್ಟಿಯಿಂದ ಈ ಯೋಜನೆಯನ್ನು ರೂಪಿಸಲಾಗಿದ್ದು, ಇದರ ಅನುಷ್ಠಾನಕ್ಕೆ ಸಂಬಂಧಿಸಿದ ರೂಪುರೇಶೆಗಳನ್ನು ಶೀಘ್ರದಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿದೆ.

**2500 ಮೆಗಾ ವ್ಯಾಟ್ ಸಾಮರ್ಥ್ಯದ ಜಲವಿದ್ಯುತ್ ಯೋಜನೆಗಳಿಗೆ ಪರಿಸರ ಸಚಿವಾಲಯ ಒಪ್ಪಿಗೆ**

ದೇಶದ ವಿವಿಧ ರಾಜ್ಯಗಳಲ್ಲಿ ಸುಮಾರು 2500 ಮೆಗಾ ವ್ಯಾಟ್ ಉತ್ಪಾದನೆ ಗುರಿ ಹೊಂದಿರುವ ಜಲವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ಅರಣ್ಯ ಸಲಹೆ ಸಮಿತಿ (Forest Advisory Committee) ಹಸಿರು ನಿಶಾನೆ ತೋರಿದೆ. ಈ ಯೋಜನೆಗಳ ಅನುಷ್ಠಾನಕ್ಕೆ ಅರಣ್ಯ ನಾಶವಾಗುವುದರಿಂದ ಇವುಗಳ ಅನುಮೋದನೆಯು ನೆನೆಗುದಿಗೆ ಬಿದ್ದಿತ್ತು.

ಯಾವ ಯಾವ ರಾಜ್ಯಗಳಲ್ಲಿ:

- ತವಾಂಗ್ II ಜಲವಿದ್ಯುತ್ ಯೋಜನೆ (800 MW) - ಅರುಣಾಚಲ ಪ್ರದೇಶ
- ತೀಸ್ತಾ IV ಜಲವಿದ್ಯುತ್ ಯೋಜನೆ (520 MW) - ಸಿಕ್ಕಿಂ
- ಲೂಹ್ರಿ ಜಲವಿದ್ಯುತ್ ಯೋಜನೆ (775 MW) - ಹಿಮಾಚಲ ಪ್ರದೇಶ
- ವಿಷ್ಣುಗಡ್ ಜಲವಿದ್ಯುತ್ ಯೋಜನೆ (444 MW) - ಉತ್ತರಖಂಡ

**ಛತ್ತೀಸ್ ಗರ್ ನಲ್ಲಿ ದೇಶದ ಮೊದಲ ಜಿಯೋಥರ್ಮಲ್ ವಿದ್ಯುತ್ ಘಟಕ**

ದೇಶದ ಮೊದಲ ಜಿಯೋಥರ್ಮಲ್ ವಿದ್ಯುತ್ ಘಟಕವೂ ಛತ್ತೀಸ್ ಗರ್ ನಲ್ಲಿ ಸ್ಥಾಪನೆಯಾಗಲಿದೆ. ಇದರ ಸ್ಥಾಪನೆಗೆ ಸಂಬಂಧಿಸಿದಂತೆ ಛತ್ತೀಸ್ ಗರ್ ರಾಜ್ಯವು ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ (NTPC) ನೊಂದಿಗೆ ಒಡಂಬಡಿಕೆ ಒಪ್ಪಂದಕ್ಕೆ ಸಹಿಹಾಕಿದೆ.

- ಛತ್ತೀಸ್ ಗರ್ ನ ಬಲರಾಮ್ ಪುರ ಜಿಲ್ಲೆಯಲ್ಲಿ ಈ ಘಟಕವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.
- NTPC ಯು ಮುಂದಿನ ಎರಡು ವರ್ಷಗಳಲ್ಲಿ ಈ ಘಟಕದಿಂದ ವಿದ್ಯುತ್ ಉತ್ಪಾದನೆ ಮಾಡುವ ಗುರಿ ಹೊಂದಿದೆ.

ಜಿಯೋಥರ್ಮಲ್ ಶಕ್ತಿ: ಜಿಯೋಥರ್ಮಲ್ ಶಕ್ತಿಯು ಭೂಭಾಗದಲ್ಲಿ ಅಡಗಿರುವ ಶಾಖದಿಂದ ಪಡೆಯುವಂತಹ ಶಕ್ತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಜಿಯೋಥರ್ಮಲ್ ಶಕ್ತಿಯ ಉತ್ಪಾದನೆ ಬಗ್ಗೆ ಅನೇಕ ದೇಶಗಳು ಚಿಂತನೆ ನಡೆಸಿವೆ. ಭಾರತದಲ್ಲಿ ಉತ್ತರ ಪ್ರದೇಶ, ಉತ್ತರಖಂಡ್, ಹಿಮಾಚಲ ಪ್ರದೇಶ್ ಮತ್ತು ಛತ್ತೀಸ್ ಗರ್ ರಾಜ್ಯಗಳು ಜಿಯೋಥರ್ಮಲ್ ವಿದ್ಯುತ್ ಉತ್ಪಾದನೆಗೆ ಸೂಕ್ತ ಸ್ಥಳಗಳು.

**ಕಿಶನ್ ಗಂಗಾ ಯೋಜನೆಯನ್ನು ಮುಂದುವರಿಸಲು ಭಾರತಕ್ಕೆ ಕೋರ್ಟ್ ಆದೇಶ**

ಭಾರತ ಮತ್ತು ಪಾಕಿಸ್ತಾನ ದೇಶಗಳ ನಡುವೆ ಬಹಳ ದಿನಗಳಿಂದ ವಿವಾದಕ್ಕೆ ಎಡೆಮಾಡಿಕೊಟ್ಟಿರುವ ಕಿಶನ್ ಗಂಗಾ ವಿದ್ಯುತ್ ಯೋಜನೆಯನ್ನು ಮುಂದುವರೆಸಲು ಹೇಗ್ ಅಂತರ್ ರಾಷ್ಟ್ರೀಯ ನ್ಯಾಯಾಲಯ ಭಾರತಕ್ಕೆ ಸೂಚಿಸಿದೆ. ಈ ಯೋಜನೆಯು ಭಾರತ ಮತ್ತು ಪಾಕಿಸ್ತಾನದ ನಡುವೆ 1960 ರಲ್ಲಿ ಮಾಡಿಕೊಳ್ಳಲಾದ ಜಲ ಒಪ್ಪಂದವನ್ನು ಉಲ್ಲಂಘಿಸಿದ್ದು, ಇದರ ವಿಚಾರಣೆಯನ್ನು ನಡೆಸುವಂತೆ ಕೋರಿ ಪಾಕಿಸ್ತಾನ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಾಲಯ ಈ ತೀರ್ಪನ್ನು ನೀಡಿದೆ. ಆದರೆ ನೀರನ್ನು ಹರಿಸಲು Drawdown ತಂತ್ರಜ್ಞಾನವನ್ನು ಕೈಬಿಟ್ಟು ಬೇರೆ ವಿಧಾನವನ್ನು ಅಳವಡಿಸಿಕೊಳ್ಳಲು ಕೋರ್ಟ್ ಭಾರತಕ್ಕೆ ಸೂಚಿಸಿದೆ.

ಕಿಶನ್ ಗಂಗಾ ಯೋಜನೆ:

- ಭಾರತ ಸುಮಾರು 3600 ಕೋಟಿ ರೂ ವೆಚ್ಚದಲ್ಲಿ ಈ ಜಲ ವಿದ್ಯುತ್ ಯೋಜನೆಯನ್ನು 2007 ರಲ್ಲಿ ಆರಂಭಿಸಿದೆ. ಜಮ್ಮು ಮತ್ತು ಕಾಶ್ಮೀರದ ಬಂಡಿಪೊರ್ ಬಳಿ ಜೀಲಂ ನದಿಯ ಉಪನದಿಯಾದ ಕಿಶನ್ ಗಂಗಾ ನದಿಗೆ ಅಡ್ಡವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.
- 330 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ ಹೊಂದಿರುವ ಈ ಯೋಜನೆಯು 2016 ಕ್ಕೆ ಪೂರ್ಣಗೊಳ್ಳಲಿದೆ.

ವಿವಾದ ಏಕೆ?

- ಕಿಶನ್ ಗಂಗಾ ಯೋಜನೆಯಂತಯೇ ಪಾಕಿಸ್ತಾನ ನೀಲಂ-ಜೀಲಂ ಜಲ ವಿದ್ಯುತ್ ಯೋಜನೆಯ ನಿರ್ಮಾಣವನ್ನು ಕೈಗೆತ್ತಿಕೊಂಡಿದೆ. ಕಿಶನ್ ಗಂಗಾ ಯೋಜನೆಯಿಂದ ನದಿ ನೀರಿನ ಹರಿವಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು ತಾನು ನಿರ್ಮಿಸುತ್ತಿರುವ ಜಲ ವಿದ್ಯುತ್ ಯೋಜನೆಗೆ ಅನಾನುಕೂಲ ಉಂಟಾಗಲಿದೆ ಎಂಬುದು ಪಾಕಿಸ್ತಾನದ ವಾದ. ಇದಲ್ಲದೇ ಉಭಯ ದೇಶಗಳು 1960 ರಲ್ಲಿ ಮಾಡಿಕೊಂಡ ಜಲ ಒಪ್ಪಂದ (Indus Water Treaty-1960)ವನ್ನು ಭಾರತ ಉಲ್ಲಂಘಿಸಿದೆ ಎಂದು ಪಾಕಿಸ್ತಾನ ಅಂತರ್ ರಾಷ್ಟ್ರೀಯ ನ್ಯಾಯಾಲಯದ ಮೆಟ್ಟಿಲೇರಿತ್ತು.

# ವಿಜ್ಞಾನ ಮತ್ತು ತಂತ್ರ ಜ್ಞಾನ

**ಔಷಧ ನಿರೋಧಕ ಶಿಲೀಂದ್ರಗಳು ಆಗಲಿವೆ ವೈದ್ಯಕೀಯ ಕ್ಷೇತ್ರದ ಸವಾಲ್?**

ಕಳೆದ ವರ್ಷ ದೆಹಲಿಯಲ್ಲಿ ಪತ್ತೆ ಹಚ್ಚಲಾಗಿದೆ ಎನ್ನಲಾದ ಸೂಪರ್ ಬಗ್ ಅಥವಾ ಮೆಟಲೊ-ಬಿಟಾ-ಲಾಕ್ಟಮೇಸ್-1 ಎಂಬ ಬ್ಯಾಕ್ಟೀರಿಯಾವು ಪ್ರತಿಜೀವಕಗಳಿಗೆ (Antibiotics) ಪ್ರತಿರೋಧ ಹೊಂದಿದೆ ಎಂಬ ಸುದ್ದಿ ಮಾಸುತ್ತಿರುವಾಗಲೇ, ದೆಹಲಿಯ ಶ್ರೀ ಗಂಗಾ ರಾಮ್ ಆಸ್ಪತ್ರೆಯ ಸೂಕ್ಷ್ಮಾಣುಜೀವಿ ತಜ್ಞರು ಆಂಟಿ ಫಂಗಲ್ ಔಷಧಿಗಳಿಗೆ ಪ್ರತಿರೋಧ ನೀಡುವ ಶಿಲೀಂದ್ರಗಳನ್ನು ಪತ್ತೆಹಚ್ಚಿರುವುದಾಗಿ ಹೇಳಿದ್ದಾರೆ. ತಜ್ಞನರ ಪ್ರಕಾರ ಕೆಲವು ಹೊಸ ಪ್ರಭೇದದ ಶಿಲೀಂದ್ರಗಳು ಅಂಫೊಟೆರಿಸಿನ್ (Amphotericin) ನಂತಹ ಹೆಚ್ಚು ಸಾಮರ್ಥ್ಯವುಳ್ಳ ಆಂಟಿ ಫಂಗಲ್ ಔಷಧಿಗಳಿಗೂ ಪ್ರತಿರೋಧ ಒಡ್ಡುವ ಸಾಮರ್ಥ್ಯ ಹೊಂದಿವೆ. ಅದರಲ್ಲೂ ಸಿ-ಹೆಮುಲೊನಿ (C-Haemuloni) ಎಂಬ ಶಿಲೀಂದ್ರ ಪ್ರಭೇದವನ್ನು ಕೆಲವೂಮ್ಮೆ ಗುಣಪಡಿಸಲಾಗದೆ ಇರುವುದಾಗಿ ಹೇಳಿದ್ದಾರೆ.

- ಸದ್ಯ ಕೆಲವೇ ಕೆಲವು ಆಂಟಿ ಫಂಗಲ್ ಔಷಧಿಗಳು ಲಭ್ಯವಿದ್ದು, ಮುಂದೆ ಈ ಔಷಧಿಗಳಿಗೂ ಪ್ರತಿರೋಧವನ್ನು ಶಿಲೀಂದ್ರಗಳು ವೃದ್ದಿಪಡಿಸಿಕೊಂಡಿದ್ದೆ ಆದಲ್ಲಿ ತೀವ್ರ ತರನಾದ ಸಮಸ್ಯೆ ಕಾಡಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.
- 1999 ರಿಂದ 2008 ರವರೆಗೆ ಶಿಲೀಂದ್ರಗಳ ಸೋಂಕಿಗೆ ಒಳಗಾದ ರೋಗಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ಫಲಿತಾಂಶವನ್ನು "ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ರಿಸರ್ಚ್ ನಲ್ಲಿ" ಪ್ರಕಟಿಸಲಾಗಿದೆ.
- ಅಪರಿಮಿತ ಜೀವ ನಿರೋಧಕಗಳ ಬಳಕೆ, ವ್ಯಾಪಕ ಶಸ್ತ್ರ ಚಿಕಿತ್ಸೆ ಮತ್ತು ಅಂಗಾಂಗಳ ಕಸಿ ವಿಧಾನಗಳು ಇವುಗಳಿಗೆ ಕಾರಣವಾಗಿವೆ.

**ನೋಕಿಯಾ ಕಂಪನಿಯಿಂದ ಸ್ಮಾಶ್ ಪ್ರೂಫ್ (Smash Proof) ಫೋನ್**

ಮೊಬೈಲ್ ತಯಾರಿಕೆ ಕಂಪನಿ ನೋಕಿಯಾ ಈಗ ಸ್ಮಾಶ್ ಪ್ರೂಫ್ ಫೋನ್ ತಯಾರಿಕೆಗೆ ಸಿದ್ದವಾಗಿದೆ. ವಿಶ್ವದಲ್ಲೇ ಅತ್ಯಂತ ಬಲಿಷ್ಠ ಪದಾರ್ಥವಾದ "ಗ್ರಾಫಿನ್" (Graphene) ಬಳಸುವ ಸಂಬಂಧ ಸಂಶೋಧನೆ ಕೈಗೊಳ್ಳಲು ಸುಮಾರು 1.35 ಬಿಲಿಯನ್ ಡಾಲರ್ ನಷ್ಟು ಸಹಾಯ ಧನ ವನ್ನು ಯೂರೋಪಿಯನ್ ಯೂನಿಯನ್ ನೋಕಿಯಾಗೆ ನೀಡಿದೆ.

- ಗ್ರಾಫೀನ್ ಶುದ್ಧ ಇಂಗಾಲದಿಂದ ಮಾಡಲ್ಪಟ್ಟಿದ್ದು ಕೇವಲ ಒಂದೇ ಒಂದು ಅಣುವಿನಷ್ಟು ತೆಳುವಾಗಿರುತ್ತದೆ. ನೋಕಿಯಾ ಕಂಪನಿಯ ಪ್ರಕಾರ ಇದು ಉಕ್ಕಿಗಿಂತಲೂ 300 ಪಟ್ಟು ಹೆಚ್ಚು ಬಲಿಷ್ಠವಾಗಿರುತ್ತದೆ.
- ಇತ್ತೀಚಿನ ದಿನಗಳಲ್ಲಿ ಗ್ರಾಫೀನ್ ಅನೇಕ ಕ್ಷೇತ್ರಗಳಲ್ಲಿ ವರದಾನವಾಗಿದ್ದೂ ಎಲೆಕ್ಟ್ರಾನಿಕ್, ಸೌರ ಶಕ್ತಿ, ಮೆಡಿಸಿನ್ ಮತ್ತು ನೀರಿನ ಡಿಸಾಲಿನೇಷನ್ ನಲ್ಲಿ ಉಪಯೋಗಿಸಬಹುದಾಗಿದೆ.
- ಆಂಡ್ರೆ ಗ್ರಿಮ್ ಮತ್ತು ಕೊಂಸ್ಟಾಂಟಿನ್ ನೊವೊಸೆಲೊವ್ ರವರು "ಗ್ರಾಫೀನ್" ಮೇಲೆ ನಡೆಸಿದ ಸಂಶೋಧನೆಗಾಗಿ 2010 ರ ಭೌತಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದರು.

**ಫೇಸ್ ಬುಕ್ ಗೆ 9ನೇ ವರ್ಷದ ಹುಟ್ಟು ಹಬ್ಬ**

ವಿಶ್ವದ ಪ್ರಸಿದ್ಧ ಸಾಮಾಜಿಕ ತಾಣ ಫೇಸ್ ಬುಕ್ ಗೆ ಈಗ 9 ವರ್ಷ. ಈ ಪ್ರಸಿದ್ಧ ಸಾಮಾಜಿಕ ತಾಣ ಫೆಬ್ರವರಿ 4, 2004 ರಂದು ತನ್ನ ಕಾರ್ಯವನ್ನು ಆರಂಭಿಸಿ ಈಗ ವಿಶ್ವದ ನಂ.1 ಸಾಮಾಜಿಕ ತಾಣವಾಗಿ ಹೊರಹೊಮ್ಮಿರುವುದು ವಿಸ್ಮಯವೇ ಸರಿ.

ಫೇಸ್ ಬುಕ್ ಹುಟ್ಟಿದ್ದು ಹೇಗೆ?

- ಫೇಸ್ ಬುಕ್ ನ ಸಂಸ್ಥಾಪಕ ಮಾರ್ಕ ಜುಕರ್ ಬರ್ಗ (Mark Zuckerbarg) ಇದನ್ನು ಹವ್ಯಾಸಕ್ಕಾಗಿ ತಮ್ಮ ಗೆಳೆಯರ ಜೊತೆ ಸೇರಿ ಹಾರ್ವರ್ಡ್ ಯೂನಿವರ್ಸಿಟಿಯಲ್ಲಿ ಫೆಬ್ರವರಿ 4, 2004 ದಿ ಫೇಸ್ ಬುಕ್ (The Facebook) ನ್ನು ಹುಟ್ಟುಹಾಕಿದರು. ತದ ನಂತರ ಇದರ ಹೆಸರನ್ನು ಕೇವಲ ಫೇಸ್ ಬುಕ್ ಎಂದು ಬದಲಿಸಲಾಯಿತು.
- ಮೊದ ಮೊದಲು ಕಾಲೇಜು ಮಟ್ಟದಲ್ಲಿ, ನಂತರ ವಿಶ್ವ ವಿದ್ಯಾಲಯಗಳ ಮಟ್ಟದಲ್ಲಿ ಸಾಮಾಜಿಕ ತಾಣವಾಗಿ ಗುರುತಿಸಿಕೊಂಡ ಫೇಸ್ ಬುಕ್, 2004 ರ ಅಂತ್ಯದಲ್ಲಿ ವಿಶ್ವ ವ್ಯಾಪ್ತಿಯಲ್ಲ ಹರಡಿ ಹೆಮ್ಮರವಾಗಿ ಬೆಳೆಯಿತು.
- 2007 ರಲ್ಲಿ ಸಾಫ್ಟ್ ವೇರ್ ದಿಗ್ಗಜ ಮೈಕ್ರೋಸಾಫ್ಟ್ ಕಂಪನಿ, ಫೇಸ್ ಬುಕ್ ನ 1.6% ಷೇರನ್ನು 240 ಮಿಲಿಯನ್ ಡಾಲರ್ ಗಳನ್ನು ನೀಡಿ ಖರೀದಿಸಿತು.
- ಸದ್ಯ ಜಾಗತೀಕ ಮಟ್ಟದಲ್ಲಿ ಆಮೆರಿಕಾ ಅತಿ ಹೆಚ್ಚು ಫೇಸ್ ಬುಕ್ ಬಳಕೆದಾರರನ್ನು ಹೊಂದಿದೆ, ನಂತರದ ಸ್ಥಾನದಲ್ಲಿ ಬ್ರೆಜಿಲ್, ಇಂಡಿಯಾ ಮತ್ತು ಇಂಡೋನೇಷಿಯಾ ಮತ್ತು ಮೆಕ್ಸಿಕೋ ದೇಶಗಳು ಅತಿ ಹೆಚ್ಚು ಬಳಕೆದಾರರನ್ನು ಹೊಂದಿರುವ ದೇಶಗಳಾಗಿವೆ.
- ಇತ್ತೀಚೆಗೆ ಫೇಸ್ ಬುಕ್ ಸಂಸ್ಥಾಪಕ ಮತ್ತು CEO ಸಹ ಆಗಿರುವ ಮಾರ್ಕ ಜುಕರ್ ಬರ್ಗ ರವರು ಗ್ರಾಫ್ ಸರ್ಚ್ (Graph Search) ಎಂಬ ವಿಶಿಷ್ಟ ಸೌಲಭ್ಯವನ್ನು ಬಳಕೆದಾರರಿಗೆ ಒದಗಿಸಿದ್ದಾರೆ. ಅಲ್ಲದೇ, ಬಳಕೆದಾರರನ್ನು ಆಕರ್ಷಿಸುವ ಸಲುವಾಗಿ ಫೇಸ್ ಬುಕ್ ಕಾರ್ಡ್ ಮತ್ತು ಐಫೋನ್ ನಲ್ಲಿ ಧ್ವನಿ ಕರೆ ಮಾಡಬಹುದಾದ ಸೌಲಭ್ಯವನ್ನು ಉತ್ತರ ಆಮೆರಿಕಾದಲ್ಲಿ ಪರಿಚಯಿಸಿಲಾಗಿದೆ.

**W49B ಎಂಬ ಕಿರಿಯ ಕಪ್ಪು ರಂಧ್ರ ಪತ್ತೆಹಚ್ಚಿದ ನಾಸಾ**

ಹಾಲು ಹಾದಿ ಗೆಲಾಕ್ಸಿಯಲ್ಲಿ ಅತ್ಯಂತ ಕಿರಿಯ ಕಪ್ಪು ರಂಧ್ರ (Black Hole) ವನ್ನು ಪತ್ತೆಹಚ್ಚಿರುವುದಾಗಿ ನಾಸಾ ವಿಜ್ಞಾನಿಗಳು ಹೇಳಿದ್ದಾರೆ. ಸುಮಾರು 1000 ವರ್ಷ ಹಳೆಯದಾದ ಹಾಗೂ ಭೂಮಿಯಿಂದ ಕೇವಲ 26000 ಜ್ಯೋತಿರ್ ವರ್ಷ ದೂರದಲ್ಲಿರುವ ಈ ಕಪ್ಪು ರಂಧ್ರಕ್ಕೆ W49B ಎಂದು ಕರೆಯಲಾಗಿದೆ. ಈ ಕಪ್ಪು ರಂಧ್ರವು ಅತ್ಯಂತ ಬಲಿಷ್ಠ ಸೂಪರ್ ನೋವಾದ ಅವಶೇಷಗಳನ್ನು ಒಳಗೊಂಡಿದೆ ಎಂದು ನಾಸಾ ದ ಚಂದ್ರ ಎಕ್ಸ್ ರೇ-ವೀಕ್ಷಣಾಲಯ ಅಭಿಪ್ರಾಯಪಟ್ಟಿದೆ.

- ಮೆಸ್ಸಾಚುಸೆಟ್ ತಾಂತ್ರಿಕ ಸಂಸ್ಥೆಯ ಲಾರ ಲಾಫೆಜ್ ನೇತೃತ್ವದ ತಂಡ ಈ ಶೋಧನೆಯನ್ನು ಮಾಡಿದ್ದು, ಇದೊಂದು ಅಪರೂಪದ ಕಪ್ಪುರಂಧ್ರವಾಗಿದ್ದು, ಪ್ರಥಮ ಬಾರಿಗೆ ಗೆಲಾಕ್ಸಿಯಲ್ಲಿ ಕಂಡುಹಿಡಿಯಲಾಗಿದೆ ಎಂದು ಹೇಳಿದೆ.

**"ಸರಳ್" ಉಪಗ್ರಹ ಉಡಾವಣೆ: ಇಸ್ರೋದಿಂದ ಮತ್ತೊಂದು ಮೈಲಿಗಲ್ಲು**

ಭಾರತ ಮತ್ತು ಫ್ರಾನ್ಸ್ ದೇಶಗಳ ಸಹಭಾಗಿತ್ವದಲ್ಲಿ ನಿರ್ಮಿಸಿರುವ "ಸರಳ್" ಮತ್ತು ಇತರೆ ಆರು ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಉಡಾಯಿಸುವ ಮೂಲಕ ಇಸ್ರೋ ತನ್ನ ಸಾಮರ್ಥ್ಯವನ್ನು ಮತ್ತೊಮ್ಮೆ ಪ್ರದರ್ಶಸಿದೆ. ಆಂಧ್ರ ಪ್ರದೇಶದ ಶ್ರೀಹರಿಕೋಟದಲ್ಲಿ ಉಡಾಯಿಸಿದ ಪಿಎಸ್ಎಲ್ ವಿ-ಸಿ20 (ಪೋಲಾರ್ ಸೆಟಲೈಟ್ ಲಾಂಚ್ ವೆಹಿಕಲ್) ಮೂಲಕ ಈ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಯಿತು. ಈ ಮಹತ್ವಪೂರ್ಣ ಸಂಧರ್ಭಕ್ಕೆ ರಾಷ್ಟ್ರಪತಿಗಳಾದ ಪ್ರಣಭ್ ಮುಖರ್ಜಿಯವರು ಸಾಕ್ಷಿಯಾದರು.

ಸರಳ್ (SARAL): Satellite with ARgos and ALtika ಉಪಗ್ರಹವನ್ನು ಭಾರತ ಮತ್ತು ಫ್ರಾನ್ಸ್ ದೇಶಗಳು ಜೊತೆಯಾಗಿ ನಿರ್ಮಿಸಿವೆ. 450 ಕೆ.ಜಿ ತೂಕವಿರುವ ಈ ಉಪಗ್ರಹವನ್ನು ಸನ್ ಸಿಂಕ್ರೋನಸ್ ಕಕ್ಷೆಗೆ (Sun Synchronous Orbit) ಸೇರಿಸಲಾಗಿದೆ. ALtika ಮತ್ತು Argos ಪ್ಲೇ ಲೋಡ್ ಗಳನ್ನು ಫ್ರಾನ್ಸ್ ಅಭಿವೃದ್ದಿಪಡಿಸಿದೆ. Ka ತರಂಗ ಬ್ಯಾಂಡ್ ಗಳಲ್ಲಿ (Frequency Band) ಈ ಉಪಗ್ರಹವು ಕಾರ್ಯನಿರ್ವಹಿಸಲ್ಲಿದ್ದು ಹೆಚ್ಚು ನಿಖರತೆಯನ್ನು ಹೊಂದಿದೆ. ಸಾಗರದ ಆಳ ಮತ್ತು ಮೇಲ್ಮೈ ಬದಲಾವಣೆಯನ್ನು ಅಧ್ಯಯನ ನಡೆಸಿ ಮಾಹಿತಿ ಒದಗಿಸಲಿದೆ.

ಇತರೆ ಉಪಗ್ರಹಗಳು

- ಸರಳ್ ನ್ನು ಹೊರತುಪಡಿಸಿ, ಆಸ್ಟ್ರೀಯಾ ದ ಯೂನಿಬ್ರೈಟ್ (UniBrite) ಮತ್ತು Brite, ಡೆನ್ಮಾರ್ಕ್ ನ AAUSAT3, ಯು.ಕೆ ಯ STRaND ಮತ್ತು ಕೆನಡಾದ ಸಣ್ಣ ಉಪಗ್ರಹಗಳಾದ NEOssat ಮತ್ತು SAPPIRE ಉಪಗ್ರಹಗಳನ್ನು ಕಕ್ಷೆಗೆ ಕಳುಹಿಸಲಾಯಿತು.
- ಇಸ್ರೋ ಇಲ್ಲಿಯವರೆಗೂ 23 ಉಡಾವಣೆಗಳನ್ನು ಕೈಗೊಂಡಿದೆ. ಈ ಪೈಕಿ 22 ಬಾರಿ PSLV ಯಶಸ್ಸನ್ನು ಕಂಡಿದೆ.

**ಫೆಬ್ರವರಿ 28: ರಾಷ್ಟ್ರೀಯ ವಿಜ್ಞಾನ ದಿನ**

ಪ್ರತಿ ವರ್ಷ ಫೆಬ್ರವರಿ 28 ನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತದೆ. ಫೆಬ್ರವರಿ 28, 1928 ರಲ್ಲಿ ಭಾರತದ ಭೌತಶಾಸ್ತ್ರ ವಿಜ್ಞಾನಿ ಶ್ರೀ ಚಂದ್ರಶೇಖರ ವೆಂಕಟರಾಮನ್ ರವರು ರಾಮನ್ ಎಫೆಕ್ಟ್ ನ್ನು ಅನ್ವೇಷಿಸಿದ ಸ್ಮರಣರ್ಥ ಈ ದಿನವನ್ನು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಘೋಷಿಸಿದೆ. ಶಾಲೆ ಮತ್ತು ಕಾಲೇಜುಗಳಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವುದು ಮತ್ತು ಉತ್ತೇಜಿಸುವುದು ಈ ಆಚರಣೆಯ ಮುಖ್ಯ ಉದ್ದೇಶ.

- ಈ ವರ್ಷದ ಥೀಮ್ "ಜೆನೆಟಿಕಲಿ ಮಾಡಿಫೈಡ್ ಕ್ರಾಪ್ಸ್ ಅಂಡ್ ಫುಡ್ ಸೆಕ್ಯೂರಿಟಿ" (Genetically Modified Crops and Food Security).

**ಬಾಹ್ಯಕಾಶ ಕಕ್ಷೆಗೆ ಸ್ಮಾರ್ಟ್ ಫೋನ್ ಕಳುಹಿಸಿದ ಭಾರತ**

ವಿಶ್ವದಲ್ಲೇ ಪ್ರಥಮ ಬಾರಿಗೆ ಅಂತರಿಕ್ಷಕ್ಕೆ ಸ್ಮಾರ್ಟ್ ಫೋನ್ ಕಳುಹಿಸಿದ ಪ್ರಥಮ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಅಂತರಿಕ್ಷದಲ್ಲಿ ಸ್ಮಾರ್ಟ್ ಫೋನ್ ಹೇಗೆ ಕಾರ್ಯನಿರ್ವಹಿಸಲಿರುವ ಸಾಮರ್ಥ್ಯವನ್ನು ತಿಳಿಯುವ ಸಲುವಾಗಿ ಭಾರತ ಬಾಹ್ಯಕಾಶ ಸಂಶೋಧನ ಸಂಸ್ಥೆ (ಇಸ್ರೊ) ಇತ್ತೀಚೆಗೆ ಉಡಾಯಿಸಿದ ಪಿಎಸ್ಎಲ್ ವಿ-20ಸಿ ರಾಕೆಟ್ ಮೂಲಕ ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ.

- ಹಲವು ಅಪ್ಲಿಕೇಶನ್ ಗಳನ್ನು ಹೊಂದಿರುವ ಈ ಸ್ಮಾರ್ಟ್ ಫೋನ್ ನನ್ನು ಬ್ರಿಟನ್ ನ ಸರ್ರೆಯ ವಿಜ್ಞಾನಿಗಳು ನಿರ್ಮಿಸಿದ್ದಾರೆ. ಸ್ಟ್ರಾಂಡ್ (STraund) ಎಂದು ಕರೆಯಲಾಗುವ ಈ ಪುಟ್ಟ ಉಪಗ್ರಹವನ್ನು ಆಂಧ್ರಪ್ರದೇಶದ ಶ್ರೀಹರಿ ಕೋಟದಿಂದ ಅಂತರಿಕ್ಷಕ್ಕೆ ಕಳುಹಿಸಲಾಯಿತು.
- 4.3 ಕೆ.ಜಿ ತೂಕವಿರುವ ಈ ಪುಟ್ಟ ಉಪಗ್ರಹವನ್ನು ಸರ್ರೆ ವಿಶ್ವವಿದ್ಯಾಲಯದ ಸರ್ರ್ರ ಉಪಗ್ರಹ ಕೇಂದ್ರ ಮತ್ತು ಸರ್ರೆ ಉಪಗ್ರಹ ತಂತ್ರಜ್ಞಾನ ಲಿಮಿಟೆಡ್ ನ ವಿಜ್ಞಾನಿಗಳ ತಂಡ ಇದನ್ನು ಅಭಿವೃದ್ದಿಪಡಿಸಿದ್ದಾರೆ.

# ವ್ಯವಹಾರ

**ಭಾರತೀಯರ ಮಾಸಿಕ ತಲಾ ಆದಾಯ (Per capita Income): ರೂ 5,130**

ದೇಶದಲ್ಲಿ ಜನರ ಜೀವನ ಮಟ್ಟ ತಿಳಿಸುವ ಮಾಸಿಕ ತಲಾ ಆದಾಯ ವರದಿ ಹೊರಬಿದ್ದಿದೆ. ಇದರ ಅನ್ವಯ 2011-12 ರಲ್ಲಿ ಭಾರತೀಯರ ಮಾಸಿಕ ತಲಾ ಆದಾಯ ರೂ.5,130 ಮಾತ್ರ. ಅಂದರೆ ವರ್ಷಕ್ಕೆ ರೂ.**61,594** ಮಾತ್ರ.

- 2009-10 ನೇ ಸಾಲಿಗೆ ಹೋಲಿಸಿದರೆ 2010-11 ರಲ್ಲಿ ಮಾಸಿಕ ತಲಾ ಆದಾಯ ಪ್ರಮಾಣದಲ್ಲಿ ಶೇ.17.1 ರಷ್ಟು ಏರಿಕೆಯಾಗಿತ್ತು. ಆದರೆ 2010-11 ಕ್ಕೆ ಹೋಲಿಸಿದರೆ 2011-12 ರಲ್ಲಿ ಶೇ 13.7 ರಷ್ಟು ಮಾತ್ರ ಏರಿಕೆಯಾಗಿದೆ.
- 2010-11 ರಲ್ಲಿ ಭಾರತೀಯರ ಮಾಸಿಕ ಆದಾಯ ರೂ.4,513 ಇದ್ದು ತಲಾ ವಾರ್ಷಿಕ ಆದಾಯ ರೂ.54,156 ಇತ್ತು.
- ಸಮಗ್ರ ಆಂತರಿಕ ಉಳಿತಾಯ ಪ್ರಮಾಣದಲ್ಲು ಇಳಿಕೆ ಕಂಡುಬಂದಿದೆ. 2010-11 ನೇ ಸಾಲಿನಲ್ಲಿ ಉಳಿತಾಯ ಪ್ರಮಾಣ 26,51, 291 ಇದ್ದರೆ, 2011-12 ನೇ ಸಾಲಿನಲ್ಲಿ 27,65,291 ಆಗುವ ಮೂಲಕ ಅಲ್ಪ ಬೆಳವಣಿಗೆ ಕಂಡಿದೆ.
- ಸದ್ಯ ವಿಶ್ವ ತಲಾ ಆದಾಯ ದೇಶಗಳ ಪಟ್ಟಿಯಲ್ಲಿ ಭಾರತ 139 (2011) ನೇ ಸ್ಥಾನದಲ್ಲಿದೆ.

**ವಿಜಯಾ ಬ್ಯಾಂಕ್ ನಿಂದ ಪ್ಲಾಟಿನಮ್ ಕಾರ್ಡ್**

ರಾಷ್ಟ್ರೀಕೃತ ವಿಜಯಾ ಬ್ಯಾಂಕ್ ತನ್ನ ಗ್ರಾಹಕರಿಗಾಗಿ ಎರಡು ವಿಶಿಷ್ಟ ಕ್ರೆಡಿಟ್ ಕಾರ್ಡ್ ಗಳಾದ ವಿ-ಪ್ಲಾಟಿನಂ ಮತ್ತು ವಿ-ಪ್ರಿವಲಿಜ್ ಹೊರತಂದಿದೆ.

- ಗರಿಷ್ಟ ಮಟ್ಟದ ವಹಿವಾಟು ಹೊಂದಿರುವ ಶ್ರೀಮಂತ ಗ್ರಾಹಕರಿಗೆ ವಿ-ಪ್ಲಾಟಿನಂ ಮತ್ತು ನಿಶ್ಚಿತ ಠೇವಣಿದಾರರಿಗೆ ವಿ-ಪ್ರಿವಲಿಜ್ ಕಾರ್ಡನ್ನು ಬಿಡುಗಡೆ ಮಾಡಿರುವುದಾಗಿ ಬ್ಯಾಂಕ್ ನ ಅಧ್ಯಕ್ಷ ಉಪೇಂದ್ರ ಕಾಮತ್ ತಿಳಿಸಿದ್ದಾರೆ.
- ಇವೆರಡು ಕಾರ್ಡ್ ಗಳ ಕನಿಷ್ಠ ವಹಿವಾಟು ಮಿತಿ ಕ್ರಮವಾಗಿ ರೂ.2 ಲಕ್ಷ ಮತ್ತು ರೂ.10 ಸಾವಿರ.
- ಇ-ಮೇಲ್ ಮತ್ತು ಎಸ್ಎಮ್ಎಸ್ ಮೂಲಕ ಮಾಹಿತಿ, ರಿಯಾಯಿತಿ ದರದ ಆರೋಗ್ಯ ವಿಮೆ ಸೌಲಭ್ಯ ಸೇರಿದಂತೆ ಅಂತರ್ ರಾಷ್ಟ್ರೀಯ ಕ್ರೆಡಿಟ್ ಕಾರ್ಡ್ ನ ಎಲ್ಲಾ ಸೌಲಭ್ಯಗಳು ಇದರಲ್ಲಿವೆ ಎಂದು ಬ್ಯಾಂಕ್ ಹೇಳಿದೆ.

**ಚಿನ್ನ ಬ್ಯಾಂಕ್ (Gold Bank) ಆರಂಭಕ್ಕೆ RBI ಸಮಿತಿ ಪ್ರಸ್ತಾವನೆ**

ದೇಶದಲ್ಲಿ ಲಭ್ಯವಿರುವ ಚಿನ್ನದ ಉತ್ತಮ ಬಳಕೆಗೆ “ಚಿನ್ನ ಬ್ಯಾಂಕ್” ಸ್ಥಾಪನೆ ಅವಶ್ಯವೆಂದು RBI ನ ಹಿರಿಯ ಅಧಿಕಾರಿಯಾದ ಕೆ.ಯು.ಬಿ.ರಾವ್ ಅವರ ನೇತೃತ್ವದ ಸಮಿತಿ ಪ್ರಸ್ತಾವನೆ ಸಲ್ಲಿಸಿದೆ.

ಏನಿದು ಗೋಲ್ಡ್ ಬ್ಯಾಂಕ್:

- ಗೋಲ್ಡ್ ಬ್ಯಾಂಕ್ ಅಥವಾ Bullion Corporation of India ಒಂದು ವಿಶೇಷ ಬ್ಯಾಂಕ್ ಆಗಿದ್ದು, ಚಿನ್ನದ ಆಮದು, ರಫ್ತು, ವ್ಯಾಪಾರ, ಸಾಲ ವಿತರಣೆ, ಚಿನ್ನವನ್ನು ಸಾಲವನ್ನಾಗಿ ಪಡೆಯುವುದು, ಚಿನ್ನದ ಹೂಡಿಕೆ ಯೋಜನೆಗಳನ್ನು ನಿರ್ವಹಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರಲಿದೆ.

- ಗೋಲ್ಡ್ ಬ್ಯಾಂಕ್ ಕಲ್ಪನೆ ಇಂದು ನಿನ್ನೆಯದಲ್ಲ 1992 ರಲ್ಲಿ ಅಂದಿನ ಹಣಕಾಸು ಸಚಿವರಾಗಿದ್ದ ಮನಮೋಹನ್ ಸಿಂಗ್ ರವರು ಈ ಬಗ್ಗೆ ಯೋಚಿಸಿದ್ದರು. 1992 ರ ಫೆಬ್ರವರಿಯಲ್ಲಿ ಮುಂಗಡ ಪತ್ರ ಮಂಡಿಸಿದಾಗಲೇ ಇದರ ಬಗ್ಗೆ ಸಿಂಗ್ ರವರು ಪ್ರಸ್ತಾಪಿಸಿದ್ದರು.
- ಸದ್ಯ ವಾಣಿಜ್ಯ ಬ್ಯಾಂಕ್ ಗಳು ಚಿನ್ನದ ಮೇಲೆ ಲೋನ್ ಮತ್ತು ಚಿನ್ನ ಶೇಖರಣೆ ಕೆಲಸವನ್ನು ನಿರ್ವಹಿಸುತ್ತಿದ್ದರು ಅದು ಸಮರ್ಪಕವಾಗಿ ನಡೆಯುತ್ತಿಲ್ಲ. ದೇಶದಲ್ಲಿ 20,000 ದಿಂದ 25,000 ಟನ್ ನಷ್ಟು ಚಿನ್ನ ಮನೆಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ನೆಲೆ ನಿಂತಿದೆ.

ಗೋಲ್ಡ್ ಬ್ಯಾಂಕ್ ಏಕೆ?

- ಚಿನ್ನದ ಬೆಲೆ ದಿನೇ ದಿನೇ ಏರುತ್ತಿರುವುದರಿಂದ ಚಿನ್ನದ ಮೇಲೆ ಬಂಡವಾಳ ಹೂಡಿಕೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಅಲ್ಲದೇ ಚಿನ್ನದ ಆಮದು ಸಹ ಏರಿಕಯಾಗುತ್ತಿರುವುದರಿಂದ ಚಾಲ್ತಿ ಖಾತೆ ಕೊರತೆ (Current Account Deficit) ಹೆಚ್ಚುತ್ತಿರುವುದು RBI ಗೆ ತಲೆಬಿಸಿಯಾಗಿ ಪರಿಣಮಿಸಿದೆ. ಚಿನ್ನದ ಆಮದು ನಿಯಂತ್ರಿಸಲೆಂದೇ ಕೇಂದ್ರ ಸರ್ಕಾರ ಇತ್ತೀಚೆಗೆ ಚಿನ್ನದ ಆಮದು ಸುಂಕವನ್ನು ಶೇ.50% ರಷ್ಟು ಏರಿಸಿತ್ತು.
- ದೇಶದಲ್ಲಿ ಬಳಕಗೆ ಸಿಗದಿರುವ ಸುಮಾರು 20,000 ದಿಂದ 25,000 ಚಿನ್ನವನ್ನು ವ್ಯಾಪಾರ ವಿನಿಮಯಕ್ಕೆ ಭದ್ರತೆಯಾಗಿ ಬಳಸಿಕೊಳ್ಳಬಹುದಾಗಿದ್ದು ಅದಕ್ಕಾಗಿ ಗೋಲ್ಡ್ ಬ್ಯಾಂಕ್ ನ ಅವಶ್ಯವಿದೆ.

**ನಬಾರ್ಡ್ ಅಧಿಕೃತ ಬಂಡವಾಳ ಹೆಚ್ಚಳಕ್ಕೆ ಸಚಿವ ಸಂಪುಟ ಅನುಮೋದನೆ**

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಭಿವೃದ್ಧಿ ಬ್ಯಾಂಕ್ (NABARD) ಅಧಿಕೃತ ಬಂಡವಾಳವನ್ನು ರೂ.20 ಸಾವಿರ ಕೋಟಿಗೆ ಹೆಚ್ಚಿಸುವ ಮಹತ್ವದ ನಿರ್ಧಾರಕ್ಕೆ ಪ್ರಧಾನಿ ಮನಮೋಹನ್ ಸಿಂಗ್ ರವರ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

- ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳ ಹಣಕಾಸು ಕಾರ್ಯ ಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತರಿಸಲಿ ಎಂಬ ಉದ್ದೇಶದಿಂದ ನಬಾರ್ಡ್ ಅಧಿಕೃತ ಬಂಡವಾಳವನ್ನು 5 ಕೋಟಿಯಿಂದ ರೂ.20 ಕೋಟಿಗೆ ಹೆಚ್ಚಿಸಲು ತಿರ್ಮಾನಿಸಲಾಗಿದೆ.
- ನಬಾರ್ಡ್ ಕಾಯ್ದೆ -1981 ಕ್ಕೆ ತಿದ್ದುಪಡಿ ತರುವ ಮೂಲಕ ಗ್ರಾಹಕರನ್ನು ಸೆಳೆಯಲು ಅನುಕೂಲವಾಗುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಸಾಲ ಯೋಜನೆ ರೂಪಿಸುವುದು ಮತ್ತು ನಬಾರ್ಡ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಹುದ್ದೆಗಳನ್ನು ವಿಲೀನಗೊಳಿಸಲು ತಿರ್ಮಾನಿಸಲಾಗಿದೆ.

ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಸರ್ವಋತು ರಸ್ತೆ

- ದೇಶದ 82 ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ನೂರಕ್ಕೂ ಹೆಚ್ಚು ಬುಡಕಟ್ಟು ಜನಸಂಖ್ಯೆಯನ್ನು ಹೊಂದಿರುವ ಗ್ರಾಮಗಳಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (PMGSY) ಅಡಿ ಸರ್ವಋತು ರಸ್ತೆಗಳನ್ನು ನಿರ್ಮಿಸುವ ಪ್ರಸ್ತಾವನಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಸದ್ಯ ಈ ಯೋಜನೆಯಡಿ 250 ಕ್ಕೂ ಹೆಚ್ಚು ಬುಡಕಟ್ಟು ಜನಸಂಖ್ಯೆಯನ್ನು ಹೊಂದಿರುವ ಗ್ರಾಮಗಳಿಗೆ ಮಾತ್ರ ರಸ್ತೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

**ರಕ್ಷಣಾ ವೆಚ್ಚ: 2020 ರ ಹೊತ್ತಿಗೆ ನಾಲ್ಕನೇ ಸ್ಥಾನಕ್ಕೆ ಏರಲಿರುವ ಭಾರತ**

2020 ರ ಹೊತ್ತಿಗೆ ಜಾಗತಿಕ ಮಟ್ಟದಲ್ಲಿ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಣವನ್ನು ಖರ್ಚುಮಾಡಲಿರುವ ದೇಶಗಳ ಪಟ್ಟಿಯಲ್ಲಿ ಭಾರತ ನಾಲ್ಕನೇ ಸ್ಥಾನಕ್ಕೆ ಏರಲಿದೆ ಎಂದು ಸಮೀಕ್ಷೆಯೊಂದು ತಿಳಿಸಿದೆ. ಇನ್ ಫಾರ್ಮೇಶನ್ ಹ್ಯಾಂಡ್ಲಿಂಗ್ ಸರ್ವಿಸ್ (Information Handling Service) ಎಂಬ ಸಂಸ್ಥೆ ನಡೆಸಿರುವ ಸಮೀಕ್ಷೆ ಪ್ರಕಾರ ಭಾರತ 2020 ರ ವೇಳೆಗೆ ತನ್ನ ಒಟ್ಟು ಅಂತರಿಕ ಉತ್ಪನ್ನದ (GDP) ಅಧಿಕ ಪ್ರಮಾಣವನ್ನು ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ವೆಚ್ಚಗಳಿಗೆ ಮೀಸಲಿಡುವ ಮೂಲಕ ಈ ಸ್ಥಾನವನ್ನು ಅಲಂಕರಿಸಲಿದೆ.

- ಸದ್ಯ ಆಮೆರಿಕಾ, ಚೀನಾ, ರಷ್ಯಾ, ಪ್ರಾನ್ಸ್, ಜಪಾನ್ ಮತ್ತು ಯು.ಕೆ ದೇಶಗಳ ನಂತರ ಭಾರತವಿದೆ. 2020 ರ ವೇಳೆಗೆ ಭಾರತ ಫ್ರಾನ್ಸ್, ಜಪಾನ್ ಮತ್ತು ಯು.ಕೆ ದೇಶಗಳನ್ನು ಹಿಂದಿಕ್ಕಲಿದೆ.
- ಇತ್ತೀಚೆಗೆ ಭಾರತ ತನ್ನ ರಕ್ಷಣಾ ವೆಚ್ಚವನ್ನು ಕಡಿತಗೊಳಿಸಿದೆ ಆದರೂ, 2020 ರ ಹೊತ್ತಿಗೆ ಸುಮಾರು 65.4 ಬಿಲಿಯನ್ ಡಾಲರ್ ಗಳಷ್ಟು ಮೊತ್ತವನ್ನು ಇದಕ್ಕೆ ವ್ಯಯಿಸಲಿದೆ ಎಂದು ಸಮೀಕ್ಷೆ ಹೇಳಿದೆ. ಈಗ ಭಾರತದ ಆರ್ಥಿಕ ಬೆಳವಣಿಗೆ ಅಷ್ಟೇನು ಹಿತಕರವಾಗಿರದಿದ್ದರು 2015 ರ ವೇಳೆಗೆ ಚೇತರಿಸಿಕೊಳ್ಳಲ್ಲಿದ್ದು ಮತ್ತೆ ರಕ್ಷಣಾ ವೆಚ್ಚವನ್ನು ಅಧಿಕಗೊಳಿಸುವುದೆಂದು ಈ ಸಮೀಕ್ಷೆಯಲ್ಲಿ ವರದಿ ಮಾಡಲಾಗಿದೆ.
- ಸಮೀಕ್ಷೆಯಲ್ಲಿ ಅಂದಾಜಿಸಿರುವಂತೆ ಫ್ರಾನ್ಸ್ ದೇಶವನ್ನು 2016 ಕ್ಕೆ, ಯು,ಕೆ ಯನ್ನು 2018 ಕ್ಕೆ ಮತ್ತು ಜಪಾನ್ ದೇಶವನ್ನು 2020 ಕ್ಕೆ ಭಾರತ ಹಿಂದಿಕ್ಕಲಿದೆ. ಅಲ್ಲದೇ ವಿದೇಶಗಳಿಂದ ರಕ್ಷಣಾ ಸಾಮಾಗ್ರಿಗಳನ್ನು ಕೊಳ್ಳುವುದನ್ನು ಭಾರತ ಮುಂದುವರಿಸಲಿದೆ.

**ರಾಜೀವ್ ಗಾಂಧಿ ಷೇರು ಉಳಿತಾಯ ಯೋಜನೆಗೆ ಚಾಲನೆ (Rajiv Gandhi Equity Saving Scheme)**

ರಾಜೀವ್ ಗಾಂಧಿ ಷೇರು ಉಳಿತಾಯ ಯೋಜನೆಗೆ ಪಿ.ಚಿದಂಬರಂ ರವರು ಇತ್ತೀಚಗೆ ಮುಂಬೈನಲ್ಲಿ ಚಾಲನೆ ನೀಡಿದರು. 2012-13 ನೇ ಸಾಲಿನ ಬಜೆಟ್ ನಲ್ಲಿ ಈ ಯೋಜನೆಯ ಬಗ್ಗೆ ಪ್ರಕಟಿಸಲಾಗಿತ್ತು. ಈ ಯೋಜನೆಗೆ ಸಂಬಂಧಿಸಿದ ಕೆಲವು ಪ್ರಮುಖ ಅಂಶಗಳು ಇಲ್ಲಿವೆ.

- ಸಣ್ಣ ಮತ್ತು ಚಿಲ್ಲರೆ ಹೂಡಿಕೆ ದಾರರಿಗಾಗಿ ಈ ಯೋಜನೆಯನ್ನು ರೂಪಿಸಲಾಗಿದೆ. ಷೇರು ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆಗೆ ಸಣ್ಣ ಹೂಡಿಕೆದಾರರನ್ನು ಆಕರ್ಷಿಸುವುದು ಈ ಯೋಜನೆಯ ಧ್ಯೇಯವಾಗಿದೆ.
- ಈ ಯೋಜನೆಯನ್ನು ಜಾರಿಗೆ ತರುವ ಸಲುವಾಗಿ ಆದಾಯ ತೆರಿಗೆ ಕಾಯ್ದೆ-1961 ರಲ್ಲಿ ಹೊಸದಾಗಿ ಸೆಕ್ಷನ್ 80CCG ಯನ್ನು ಸೇರ್ಪಡೆಮಾಡಲಾಗಿದೆ.
- ಈ ಯೋಜನೆಯಡಿ 10 ಲಕ್ಷಕ್ಕಿಂತಲೂ ಕಡಿಮೆ ವರಮಾನ ಹೊಂದಿರುವ ವ್ಯಕ್ತಿಗಳು ಮಾತ್ರ ಬಂಡವಾಳ ಹೂಡಬಹುದಾಗಿದೆ. 10 ಲಕ್ಷಕ್ಕಿಂತ ಹೆಚ್ಚು ವರಮಾನ ಹೊಂದಿರುವ ವ್ಯಕ್ತಿಗಳು ಈ ಯೋಜನೆಯಡಿ ಬಂಡವಾಳ ಹೂಡಲು ಅರ್ಹರಲ್ಲ.
- ಅರ್ಹ ವ್ಯಕ್ತಿಯು ಷೇರು ಪೇಟೆಯಲ್ಲಿ 50 ಸಾವಿರದವರಗೆ ಬಂಡವಾಳ ತೊಡಗಿಸಬಹುದಾಗಿದ್ದು, ಇದಕ್ಕೆ ಅರ್ಧದಷ್ಟು ತೆರಿಗೆ ವಿನಾಯತಿ ದೊರೆಯಲಿದೆ. ಯಾವುದೇ ಕಂಪನಿ ಮೂಲಕ ಬಂಡವಾಳ ಹೂಡಲು ಸಾಧ್ಯವಿಲ್ಲ.

- ಈ ಯೋಜನೆಯ ಲಾಕ್ ಇನ್ ಅವಧಿ ಮೂರು ವರ್ಷ ಮಾತ್ರ.
- ಈ ಯೋಜನೆಯು ಮೊದಲ ಬಾರಿಗೆ ಬಂಡವಾಳ ಹೂಡುತ್ತಿರುವವರಿಗೆ ಮಾತ್ರ ಅನುಕೂಲವಾಗಲಿದೆ. ಅಂದರೆ ಯಾವ ವ್ಯಕ್ತಿಯು ಈ ಯೋಜನೆಯ ಅಧಿಸೂಚನೆಯಾದ ದಿನಾಂಕ ನವೆಂಬರ್ 23, 2012 ವೇಳೆಗೆ ಡಿಮ್ಯಾಟ್ ಖಾತೆಯನ್ನು ಹೊಂದಿರುವುದಿಲ್ಲವೊ ಮತ್ತು ಷೇರು ಮಾರುಕಟ್ಟೆಯಲ್ಲಿ ವಹಿವಾಟು ನಡೆಸದೆ ಇದಲ್ಲಿ ಅಥವಾ ಡಿಮ್ಯಾಟ್ ಖಾತೆಯನ್ನು ಹೊಂದಿದ್ದು ವಹಿವಾಟು ನಡೆಸದೆ ಇದ್ದಲ್ಲಿ ಮಾತ್ರ ಅರ್ಹನಾಗುತ್ತಾನೆ.

**ಸಿಂಗಪುರ ಮೂಲದ ಸಿಮೆಲಿಯಾ ಕಂಪನಿಯನ್ನು ಖರೀದಿಸಿದ "ಸೆರೆಬ್ರಾ"**

ಬೆಂಗಳೂರು ಮೂಲದ ಸೆರಬ್ರಾ ಕಂಪನಿಯೂ ಸಿಂಗಪುರ ಮೂಲದ ಸಿಮೆಲಿಯಾ ಕಂಪನಿಯ ಷೇರುಗಳನ್ನು ರೂ.110 ಕೋಟಿ ನೀಡುವ ಮೂಲಕ ಖರೀದಿಸಿದೆ.

- ಸೆರಬ್ರಾ ಒಂದು ಐಟಿ ಸಲ್ಯೂಷನ್ಸ್ ಕಂಪನಿಯಾಗಿದೆ. ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ ಪರಿಕರಗಳ ತ್ಯಾಜ್ಯವನ್ನು ನಿರ್ವಹಣೆ ಮಾಡುವಲ್ಲಿ ಕಂಪನಿ ಮುಂಚೂಣಿಯಲ್ಲಿದೆ.
- ಸದ್ಯ ಬೆಂಗಳೂರಿನಲ್ಲಿ 75 ಸಾವಿರ, ಮುಂಬೈನಲ್ಲಿ 82 ಸಾವಿರ ಟನ್ ಸೇರಿದಂತೆ ಭಾರತದಲ್ಲಿ ಪ್ರತಿ ವರ್ಷ 25 ಲಕ್ಷ ಟನ್ ಇ-ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಇದರಿಂದ ಇ-ತ್ಯಾಜ್ಯ ನಿರ್ವಹಣೆ ಉದ್ಯಮ ವಾರ್ಷಿಕ ಶೇ.25 ರಷ್ಟು ಬೆಳೆಯುತ್ತಿರುವುದಾಗಿ ಸೆರೆಬ್ರಾ ನಿರ್ದೇಶಕ ವಿ.ರಂಗನಾಥನ್ ಹೇಳಿದ್ದಾರೆ.
- ಸಿಮೆಲಿಯಾ ಸಿಂಗಪುರದ ಎನ್ವಿರೋ-ಹಬ್ ಹೋಲ್ಡಿಂಗ್ಸ್ ನ ಅಂಗ ಸಂಸ್ಥೆಯಾಗಿದ್ದು, ಇದರ ಖರೀದಿಯಿಂದ ಸೆರೆಬ್ರಾದ ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ ಪರಿಕರಗಳ ತ್ಯಾಜ್ಯವನ್ನು ನಿರ್ವಹಿಸುವ ಸಾಮರ್ಥ್ಯ ಹೆಚ್ಚಾಗಲಿದೆ.

**ಪಾರ್ಲೆ-ಜಿ 5000 ಕೋಟಿ ವಹಿವಾಟು ದಾಖಲೆ**

ಬಿಸ್ಕೇಟ್ ತಯಾರಿಕ ಉದ್ದೇಶದಿಂದ 1939 ರಲ್ಲಿ ಮಾರುಕಟ್ಟೆಗೆ ಕಾಲಿಟ್ಟ ಪಾರ್ಲೆ-ಜಿ ಬಿಸ್ಕೇಟ್ ಕಂಪನಿ ರೂ. 5000 ವಹಿವಾಟು ಮಾಡುವ ಮೂಲಕ ದಾಖಲೆ ನಿರ್ಮಿಸಿದೆ.

- 2012 ನೇ ಸಾಲಿನಲ್ಲಿ ಪಾರ್ಲೆ-ಜಿ ಕಂಪನಿ 5010 ಕೋಟಿ ರೂ ಮೌಲ್ಯದ ಬಿಸ್ಕೇಟ್ ಗಳನ್ನು ಮಾರುವ ಮೂಲಕ ಈ ಸಾಧನೆ ಮಾಡಿದೆ.
- 1929 ರಲ್ಲಿ ಮುಂಬೈನ ವಿಲೆ ಪಾರ್ಲೆಯಲ್ಲಿ ಆರಂಭವಾದ ಕಂಪನಿ 1939 ರಲ್ಲಿ ಪಾರ್ಲೆ-ಜಿ ಬಿಸ್ಕೇಟ್ ಗಳ ಮೂಲಕ ಮಾರುಕಟ್ಟೆಗೆ ಹೆಜ್ಜೆ ಇಟ್ಟಿತು.

**ಯೂರೋನೆಕ್ಸ್ಟ್ (Euronext) ನಲ್ಲಿ ಇನ್ಫೋಸಿಸ್ ಗೆ ಸ್ಥಾನ**

ದೇಶದ ಸಾಫ್ಟವೇರ್ ದಿಗ್ಗಜ ಇನ್ಫೋಸಿಸ್ ಫೆಬ್ರವರಿ 20 ರಂದು ಅಂತರ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ NYSE ಯೂರೋನೆಕ್ಸ್ ನಲ್ಲಿ (ಪ್ಯಾರಿಸ್ ಮತ್ತು ಲಂಡನ್) ವಹಿವಾಟು ನಡೆಸಲಿದೆ. ಈ ಮೂಲಕ ವಹಿವಾಟಿಗೆ ನೊಂದಣಿಯಾದ ಮೊದಲ ಭಾರತೀಯ ಕಂಪನಿ ಎಂಬ ಹಿರಿಮೆಗೂ ಕಂಪನಿ ಪಾತ್ರವಾಗಲಿದೆ.

- ಯುರೋನೆಕ್ಸ್ಟ್ ನಲ್ಲಿ ಭಾಗಿಯಾಗುವುದರಿಂದ ಇಂಗ್ಲೆಂಡ್, ಪ್ರೆಂಚ್ ಮತ್ತು ಇತರೆ ಯೂರೋಪ್ ಹೂಡಿಕೆದಾರರು ನೇರವಾಗಿ "ಇನ್ಫೋಸಿಸ್ ಎಡಿಎಸ್" ಸೇವೆ ಪಡೆಯಬಹುದು. ಅಲ್ಲದೇ ಇದು ಭಾರತ ಮತ್ತು ಬ್ರಿಟನ್ ನಡುವಿನ ವ್ಯವಹಾರವನ್ನು ವೃದ್ಧಿಸಲಿದೆ.
- ಡಿಸೆಂಬರ್ 12, 2012 ರಿಂದ ಇನ್ಫೋಸಿಸ್ ನ್ಯೂಯಾರ್ಕ್ ಷೇರು ವಿನಿಮಯ ಕೇಂದ್ರದಲ್ಲಿ "ಇನ್ಫಿ" ಎಂಬ ಹೆಸರಿನಲ್ಲಿ ವಹಿವಾಟು ನಡೆಸುತ್ತಿದೆ. ಯೂರೋನೆಕ್ಸ್ಟ್ ನಲ್ಲಿ ನಹ ಇದೇ ಹೆಸರಿನಡಿ ವಹಿವಾಟು ನಡೆಸಲಿದೆ ಎಂದು ಕಂಪನಿಯ ಸಿಇಒ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಶಿಬುಲಾಲ್ ಹೇಳಿದ್ದಾರೆ.
- 1981 ರಲ್ಲಿ ಸ್ಥಾಪನೆಯಾದ ಇನ್ಫೋಸಿಸ್ ಕಂಪನಿಯು ಇಂದು ಸುಮಾರು 7 ಬಿಲಿಯನ್ ನಷ್ಟು ವಹಿವಾಟು ಹೊಂದಿದೆ. 1,55,000 ಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ನೀಡಿರುವ ಈ ಕಂಪನಿಯು ದೇಶದಿಂದ ಸಾಫ್ಟ್ ವೇರ್ ರಫ್ತಿನಲ್ಲಿ ಶೇ.24 ರಷ್ಟು ಪಾಲನ್ನು ಹೊಂದಿದೆ.

**ಮತ್ತೆ ವಿಮಾನಯಾನ ಸೇವೆ ಆರಂಭಿಸಲಿರುವ ಟಾಟಾ ಸಂಸ್ಥೆ**

ಭಾರತದ ಮೊಟ್ಟ ಮೊದಲ ವಿಮಾನಯಾನ ಸಂಸ್ಥೆ ಸ್ಥಾಪಿಸಿದ್ದ ಟಾಟಾ ಕಂಪನಿ ಸುಮಾರು 60 ವರ್ಷಗಳ ಬಳಿಕ ದೇಶದಲ್ಲಿ ಮತ್ತೆ ವಿಮಾನಯಾನ ಉದ್ಯಮಕ್ಕೆ ಕಾಲಿಡಲು ನಿರ್ಧರಿಸಿದೆ. ಮಲೇಷ್ಯಾ ಮೂಲದ ಹಗ್ಗದ ದರದ ವಿಮಾನಯಾನ ಸಂಸ್ಥೆ "ಏರ್ ಏಷ್ಯಾ" ಈ ಬಾರಿ ಟಾಟಾ ಸನ್ಸ್ ಜತೆಗೆ ಜಂಟಿ ಪಾಲುದಾರಿಕೆಯಲ್ಲಿ ಭಾರತದಲ್ಲಿ ವಿಮಾನಯಾನ ಸೇವೆಯನ್ನು ಪ್ರಾರಂಭಿಸುವುದಾಗಿ ಹೇಳಿದೆ.

- ಅರುಣ್ ಭಾಟಿಯಾ ಒಡೆತನದ "ಟೆರೆಸ್ಟ್ರಾ ಟ್ರೇಡ್ ಪ್ಲೇಸ್" ಸಂಸ್ಥೆ ಈ ಯೋಜಜನೆಯ ಮೂರನೇ ಪಾಲುದಾರ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ. ಮೊದಲ ಹಂತದಲ್ಲಿ ಚೆನ್ನೈನಿಂದ ಎರಡು ಮತ್ತು ಮೂರನೇಯ ಹಂತದಲ್ಲಿ ವಿವಿಧ ನಗರಗಳಿಗೆ ಸಂಚಾರ ವ್ಯವಸ್ಥೆ ಒದಗಿಸುವ ಯೋಜನೆ ಹೊಂದಿರುವುದಾಗಿ ಕ್ವಾಲಾಂಪುರ ಷೇರು ವಿನಿಮಯ ಕೇಂದ್ರಕ್ಕೆ ಸಲ್ಲಿಸಿರುವ ವರದಿಯಲ್ಲಿ ಕಂಪನಿ ತಿಳಿಸಿದೆ.
- ಈ ಯೋಜನೆಯಲ್ಲಿ ಏರ್ ಏಷ್ಯಾ ಶೇ.49 ರಷ್ಟು ಮತ್ತು ಟಾಟಾ ಸನ್ಸ್ ಶೇ.30 ರಷ್ಟು ಪಾಲನ್ನು ಹೊಂದಿರಲಿವೆ. ಅಗ್ಗದ ವಿಮಾನಯಾನ ಸೇವೆಗೆ ಭಾರತದಲ್ಲಿ ವಿಪುಲ ಅವಕಾಶಗಳಿದ್ದು, ಒಟ್ಟಾರೆ ಮಾರುಕಟ್ಟೆ ಪ್ರಗತಿಗೆ ಗಣನೀಯ ಸೇವೆ ನೀಡುವುದಾಗಿ ಮಲೇಷಿಯಾ ಮೂಲದ ಕಂಪನಿ ಹೇಳಿದೆ. ಸದ್ಯ ಏರ್ ಏಷ್ಯಾ 118 ವಿಮಾನಗಳನ್ನು ಹೊಂದಿದ್ದು, ಥಾಯ್ಲೆಂಡ್ ಮತ್ತು ಮಲೇಷಿಯಾದಿಂದ ಚೆನ್ನೈ, ಬೆಂಗಳೂರು, ಕೊಚ್ಚಿ, ಕೊಲ್ಕತ್ತಾ ನಗರಗಳಿಗೆ ಸಂಚಾರ ಒದಗಿಸುತ್ತಿದೆ.
- 1932 ರಲ್ಲಿ ಟಾಟಾ ಸನ್ಸ್ ವಿಮಾನಯಾನ ಸೇವೆಯನ್ನು ಆರಂಭಿಸಿತ್ತು. 1953 ರಲ್ಲಿ ಭಾರತ ಸರ್ಕಾರ ಟಾಟಾ ಸನ್ಸ್ ನಿಂದ ಸಂಪೂರ್ಣ ಷೇರು ಖರೀದಿ ಮೂಲಕ ಸಂಸ್ಥೆಯನ್ನು ಕೈವಶಮಾಡಿಕೊಂಡಿತು.

**ಹೊಸ ಬ್ಯಾಂಕ್ ಆರಂಭಕ್ಕೆ ಮಾರ್ಗಸೂಚಿ ಪ್ರಕಟಿಸಿದ RBI**

ದೇಶದಲ್ಲಿ ಹೊಸ ಬ್ಯಾಂಕ್ ಗಳನ್ನು ಆರಂಭಿಸಲು ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ ಅಂತಿಮ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಇನ್ನು ಮುಂದೆ ಹೊಸ ಬ್ಯಾಂಕ್ಗಳನ್ನು ಆರಂಭಸಿಲು ಈ ಮಾರ್ಗಸೂಚಿಯನ್ನು ಪಾಲಿಸುವುದ ಕಡ್ಡಾಯವಾಗಲಿದೆ.

**ಹೊಸ ಮಾರ್ಗಸೂಚಿಯಲ್ಲಿ ಏನಿದೆ?**

- ಖಾಸಗಿ ಕಂಪನಿಗಳೂ, ಸರ್ಕಾರಿ ಸಂಸ್ಥೆ ಉದ್ದಿಮೆ (PSU), ಬ್ಯಾಂಕಿಗೇತರ ಹಣಕಾಸು ಸಂಸ್ಥೆಗಳು (NBFI) ಇನ್ನು ಮುಂದೆ ಬ್ಯಾಂಕ್ ಆರಂಭಿಸಬಹುದು. ಆದರೆ ಈ ಸಂಸ್ಥೆಗಳು ಕನಿಷ್ಠ 10 ವರ್ಷಗಳ ಕಾಲ ಉತ್ತಮ ವಹಿವಾಟು ನಡೆಸಿರಬೇಕು, ಮತ್ತು ವಿಶ್ವಾಸವುಳ್ಳ ವ್ಯವಹಾರ ಹಾಗೂ ಆರ್ಥಿಕವಾಗಿ ಸಧೃಡವಾಗಿರಬೇಕು.
- ಮಾರ್ಗಸೂಚಿಯ ಪ್ರಕಾರ ಮಧ್ಯಸ್ಥಿಕೆ (ಬ್ರೋಕರೇಜ್) ಸಂಸ್ಥೆ, ರಿಯಲ್ ಎಸ್ಟೇಟ್ ಸಂಸ್ಥೆಗಳು ಇನ್ನು ಬ್ಯಾಂಕಿಂಗ್ ಕ್ಷೇತ್ರವನ್ನು ಪ್ರವೇಶಿಸಲು ಮುಕ್ತವಾಗಿವೆ.
- ಕೇಂದ್ರ ಅನ್ವೇಷಣಾ ಬ್ಯೂರೋ (CBI), ಆದಾಯ ತೆರಿಗೆ ಇಲಾಖೆ (Income tax) ಮತ್ತು ಜಾರಿ ನಿರ್ದೇಶನಾಲಯ (Enforcement Directorate) ಅಭಿಪ್ರಾಯಗಳನ್ನು ಪಡೆದ ನಂತರವೇ ಅನುಮತಿ ನೀಡಲಾಗುವುದು.
- ಹೊಸದಾಗಿ ಬ್ಯಾಂಕ್ ನ್ನು ಆರಂಭಿಸಲು ಇಚ್ಚಿಸುವ ಕಂಪನಿಯು ಕನಿಷ್ಠ ರೂ.500 ಕೋಟಿ ಬಂಡವಾಳ ತೊಡಗಿಸಬೇಕಿದೆ.
- ಹೊಸದಾಗಿ ಬ್ಯಾಂಕ್ ಆರಂಭಿಸಲು ವಿದೇಶಿ ಹೂಡಿಕೆ ಮೇಲೆ ಮಿತಿ ವಿಧಿಸಲಾಗಿದ್ದು, ವಿದೇಶಿ ನೇರ ಹೂಡಿಕೆ (FDI) ಮತ್ತು ವಿದೇಶಿ ಸಾಂಸ್ಥಿಕ ಹೂಡಿಕೆ (FII) ಮತ್ತು ಅನಿವಾಸಿ ಭಾರತೀಯರ ಹೂಡಿಕೆ (NRI) ಶೇ.49 ರನ್ನು ಮೀರಬಾರದು.
- ಹೊಸದಾಗಿ ಆರಂಭಿಸಲಾಗುವ ಪ್ರತಿ ನಾಲ್ಕು ಬ್ಯಾಂಕ್ ಶಾಖೆಗಳಲ್ಲಿ ಒಂದು ಶಾಖೆಯನ್ನು ಗ್ರಾಮೀಣ ಭಾಗದಲ್ಲಿ ಆರಂಭಿಸುವುದು ಕಡ್ಡಾಯವಾಗಿದೆ.

**ಇತರೆ ಷರತ್ತುಗಳು**

- ಹೊಸದಾಗಿ ಬ್ಯಾಂಕ್ ನ್ನು ಆರಂಭಿಸುವ ಸಂಸ್ಥೆಗಳು ಜುಲೈ 1 ರೊಳಗೆ ಅರ್ಜಿ ಸಲ್ಲಿಸಬೇಕಿದೆ. ಅನುಮತಿ ಪಡೆದ ಒಂದು ವರ್ಷದೊಳಗೆ ಸಂಸ್ಥೆಯು ಬ್ಯಾಂಕ್ ಆರಂಭಿಸಬೇಕು. ಮೂರು ವರ್ಷಗಳ ಒಳಗೆ ಷೇರು ವಿನಿಮಯ ಪಟ್ಟಿಗೆ ಸೇರಿಸಿಕೊಳ್ಳಬೇಕು.

**ಬ್ಯಾಂಕ್ ಸ್ಥಾಪಿಸಲಿರುವ ಕಂಪನಿಗಳು:**

- ಅನಿಲ್ ಧಿರೂಬಾಯ್ ಅಂಬಾನಿ ಸಮೂಹ, ಎಲ್ & ಟಿ, ಟಾಟಾ ಸಮೂಹ, ಮಹೀಂದ್ರ ಅಂಡ್ ಮಹೀಂದ್ರ, ಜೀವಾ ವಿಮಾ ನಿಗಮ ಮತ್ತು ಭಾರತೀಯ ಅಂಚೆ ಸಹ ಬ್ಯಾಂಕಿಂಗ್ ಕ್ಷೇತ್ರಕ್ಕೆ ಕಾಲಿಡಲು ಸಜ್ಜಾಗಿವೆ.

**ಹೊಸ ಮಾರ್ಗಸೂಚಿ ಉಪಯೋಗಗಳೇನು?**

- ಭಾರತದ ಬಹುತೇಕ ಗ್ರಾಮೀಣ ಭಾಗಗಳು ಇಂದಿಗೂ ಬ್ಯಾಂಕಿಂಗ್ ಸೌಲಭ್ಯದಿಂದ ವಂಚಿತವಾಗಿವೆ. ಬ್ಯಾಂಕಿಂಗ್ ಚಟುವಟಿಕೆಗಳಿಂದ ದೂರವಿರುವ ಇಂತಹ ಪ್ರದೇಶಗಳಿಗೆ ಬ್ಯಾಂಕಿಂಗ್ ಸೇವೆಯನ್ನು ಒದಗಿಸಲು RBI ಪ್ರಾಮಾಣಿಕವಾಗಿ ಶ್ರದ್ದೇಯನ್ನು ವಹಿಸಿದೆ. ಈಗ ಹೊರತಂದಿರುವ ಮಾರ್ಗಸೂಚಿಯಲ್ಲಿ ಗ್ರಾಮೀಣ ಭಾಗದಲ್ಲಿ ಶೇ. 25 ಶಾಖೆಯನ್ನು ತೆರೆಯಲು ಕಡ್ಡಾಯಗೊಳಿಸಿರುವುದು ಸ್ವಾಗತರ್ಹ.

- ಅಂಚೆ ಕಛೇರಿಗಳೂ ಬ್ಯಾಂಕಿಂಗ್ ಕ್ಷೇತ್ರಕ್ಕೆ ಕಾಲಿಟ್ಟರೆ ಗ್ರಾಮೀಣ ಭಾಗದ ಜನತೆಗೆ ವರದಾನವಾಗುವುದಂತು ಸತ್ಯದ ಸಂಗತಿ.
- ಸದ್ಯ ದೇಶದಲ್ಲಿ ಸರ್ಕಾರಿ ಸ್ವಾಮ್ಯದ 26 ಮತ್ತು ಖಾಸಗಿ ಕ್ಷೇತ್ರದ 22 ಬ್ಯಾಂಕ್ ಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ದೇಶದ ಶೇ.35 ರಷ್ಟು ವಯಸ್ಕರು ಮಾತ್ರವೇ ಬ್ಯಾಂಕ್ ಗಳಲ್ಲಿ ಮತ್ತು ಇತರೆ ಹಣಕಾಸು ಸೇವಾ ಸಂಸ್ಥೆಗಳಲ್ಲಿ ಖಾತೆ ಹೊಂದಿದ್ದಾರೆ. ಜಾಗತಿಕವಾಗಿ ಸರಾಸರಿ ಬ್ಯಾಂಕ್ ಖಾತೆಗಳನ್ನು ಹೊಂದಿರುವವರ ಶೇ.50 ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಶೇ.41 ಕ್ಕೆ ಹೋಲಿಸಿದರೆ ಭಾರತದಲ್ಲಿನ ಈ ಪ್ರಮಾಣ ಬಹಳ ಕಡಿಮೆ.

**ರಫ್ತು: ಭಾರತಕ್ಕೆ 19 ನೇ ಸ್ಥಾನ**

ಭಾರತ ವಿಶ್ವದಲ್ಲೇ 19 ನೇ ಅತಿ ದೊಡ್ಡ ರಫ್ತು ದೇಶವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಶೇ.1.7 ರಷ್ಟು ರಫ್ತು ಪಾಲನ್ನು ಭಾರತ ಹೊಂದಿದೆ ಎಂದು ಹಣಕಾಸು ರಾಜ್ಯ ಸಚಿವ ನಮೋ ನಾರಾಯಣ ಮೀನ ಹೇಳಿದ್ದಾರೆ.

- ಆಮದು ಮಾರುಕಟ್ಟೆಯಲ್ಲಿ ಭಾರತ 12 ನೇ ಸ್ಥಾನದಲ್ಲಿದೆ. ಆಮದು ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಭಾರತ ಶೇ. 2.5 ರಷ್ಟು ಪಾಲನ್ನು ಹೊಂದಿದೆ.
- ವಾಣಿಜ್ಯ ಸರಕು ರಫ್ತಿನಲ್ಲಿ 8 ನೇ ಸ್ಥಾನದಲ್ಲಿದ್ದು, ಶೇ. 3.3 ರಷ್ಟು ಪಾಲನ್ನು ಜಾಗತಿಕವಾಗಿ ಹೊಂದಿದೆ.
- ವಾಣಿಜ್ಯ ಸರಕು ಆಮದುವಿನಲ್ಲಿ 7 ನೇ ಸ್ಥಾನದಲ್ಲಿರುವ ಭಾರತ ಶೇ.3.1 ರಷ್ಟು ಪಾಲನ್ನು ಹೊಂದಿದೆ.
- ಜಾಗತಿಕ ಮಟ್ಟದಲ್ಲಿ ಆರ್ಥಿಕ ಕುಸಿತ ಉಂಟಾಗಿರುವುದರಿಂದ ರಫ್ತು ಪ್ರಮಾಣದಲ್ಲಿ ಇಳಿಕೆ ಕಂಡುಬಂದಿರುವುದಾಗಿ ಮೀನಾ ರವರು ತಿಳಿಸಿದ್ದಾರೆ.

**2012-13 ನೇ ಸಾಲಿನಲ್ಲಿ ದೇಶದ ಒಟ್ಟು ದೇಶಿಯ ಉತ್ಪನ್ನ (GDP) ಕೇವಲ 5%**

ಭಾರತದ ಒಟ್ಟು ದೇಶಿಯ ಉತ್ಪನ್ನ (Gross Domestic Product) 2012-13 ನೇ ಸಾಲಿನಲ್ಲಿ ಶೇ.5% ಇರಲಿದೆ ಎಂದು ಅಂದಾಜಿಸಲಾಗಿದೆ. 2003-04 ನೇ ಸಾಲಿನ ನಂತರ ಅತಿ ಕಳಪೆ ಸಾಧನೆ ಇದಾಗಿದೆ ಎಂದು ಹಣಕಾಸು ರಾಜ್ಯ ಸಚಿವ ನಮೋ ನಾರಾಯಣ ಮೀನ ತಿಳಿಸಿದ್ದಾರೆ. ಕೇಂದ್ರ ಸಾಂಖ್ಯಿಕ ಸಂಸ್ಥೆ (Central Statistical Organization) ಮೊದಲೇ ಅಂದಾಜು ಮಾಡಿರುವ ಅಂಕಿ ಅಂಶಗಳ ಪ್ರಕಾರ ಈ ಸಾಲಿನಲ್ಲಿ ದೇಶದ GDP ಕೇವಲ 5% ಇರಲಿದೆ.

ಕಳಪೆ ಸಾಧನೆಗೆ ಕಾರಣಗಳೇನು?

- ದೇಶಿಯ ಮತ್ತು ಜಾಗತಿಕ ಮಟ್ಟದಲ್ಲಿ ಆದ ಆರ್ಥಿಕ ಏರುಪೇರುಗಳೇ ಕುಂಠಿತ ಪ್ರಗತಿಗೆ ಕಾರಣವಾಗಿದೆ.
- ದೇಶಿಯ ವಲಯಗಳಾದ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಮಂದಗತಿ ಬೆಳವಣಿಗೆಯೇ ಕಳಪೆ ಸಾಧನೆಗೆ ಪ್ರಮುಖ ಕಾರಣವಾಗಿದೆ.
- ಇದಲ್ಲದೇ ಯೂರೋ ದೇಶಗಳ ವಲಯದಲ್ಲಿ ಉಂಟಾಗಿರುವ ಆರ್ಥಿಕ ಅಸ್ಥಿರತೆ ಮತ್ತು ಕೈಗಾರಿಕ ದೇಶಗಳಲ್ಲಿ ತಲೆದೂರಿರುವ ವಿತ್ತೀಯ ಕೊರತೆ ಭಾರತದ GDP ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.
- ಹಣದುಬ್ಬರವನ್ನು ತಗ್ಗಿಸುವ ಸಲುವಾಗಿ RBI ಕೈಗೊಂಡ ಕಠಿಣ ಹಣಕಾಸು ಪರಾಮರ್ಶೆ ಕ್ರಮಗಳು ಭಾರತದಲ್ಲಿ ಬಂಡವಾಳ ಹೂಡಿಕೆ ಮೇಲೆ ಪರಿಣಾಮ ಬೀರಿರುವುದು ಸಹ ಮಂದಗತಿಯ ಬೆಳವಣಿಗೆಗೆ ಪೂರಕವಾಗಿವೆ.

**ಕಾರ್ಮಿಕ ಭವಿಷ್ಯ ನಿಧಿ (EPF) ಶೇ.8.5 ಬಡ್ಡಿ**

ಕಾರ್ಮಿಕ ಭವಿಷ್ಯ ನಿಧಿ (Employment Provident Fund) ಗೆ 2012-13 ನೇ ಸಾಲಿನಲ್ಲಿ ಶೇ.8.5 ಬಡ್ಡಿಯನ್ನು ನಿಗದಿಪಡಿಸಲಾಗಿದೆ. ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employment Provident Fund Organnization) ಹೆಚ್ಚಳದ ಬಗ್ಗೆ ಸಮ್ಮತಿ ಸೂಚಿಸಿ, ಇತ್ತೀಚೆಗೆ ನಡೆದ ಸಭೆಯಲ್ಲಿ ಈ ನಿರ್ಣಯವನ್ನು ಹೊರಡಿಸಲಾಗಿದೆ. ಹಿಂದಿನ ವರ್ಷದಲ್ಲಿ ಶೇ.8.25 ಬಡ್ಡಿಯನ್ನು ನಿಗದಿಪಡಿಸಲಾಗಿತ್ತು ಇದಕ್ಕೆ ಹೋಲಿಸಿದರೆ ಶೇ.025% ಮಾತ್ರ ಹೆಚ್ಚಿಸಲಾಗಿದೆ.

- ಭವಿಷ್ಯ ನಿಧಿ ಗೆ ಶೇ.8.6% ಬಡ್ಡಿ ನಿಗದಿಪಡಿಸಲು ಚಿಂತಿಸಲಾಗಿತ್ತು ಆದರೆ ಇದರಿಂದ ಸಂಘಟನೆಗೆ ರೂ.240. 49 ಕೋಟಿ ಹೊರೆ ಬೀಳಲಿದೆ. ಆದ್ದರಿಂದ ಶೇ.8.5% ಬಡ್ಡಿಯನ್ನು ನಿಗದಿಪಡಿಸಲಾಗಿದ್ದು, ಇದರಿಂದ ರೂ.4 ಕೋಟಿ ಉಳಿತಾಯವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.
- ಸದ್ಯ ಬ್ಯಾಂಕ್ ಗಳು ಶೇ.9-10% ರಷ್ಟು, ಮತ್ತು ಸರ್ಕಾರ ಭವಿಷ್ಯ ನಿಧಿ ಮೇಲೆ ಶೇ.8.8% ಬಡ್ಡಿ ನಿಗದಿಪಡಿಸಿರುವಾಗ ಕಾರ್ಮಿಕ ಭವಿಷ್ಯ ನಿಧಿ ಮಾತ್ರ ಏಕೆ ಶೇ.8.5% ಬಡ್ಡಿ ನಿಗದಿಪಡಿಸಿದೆ ಎಂಬ ಆರೋಪ ಕಾರ್ಮಿಕ ವಲಯದಲ್ಲಿ ಇತ್ತೀಚೆಗೆ ಕೇಳಿ ಬಂದಿತ್ತು.
- ಸದ್ಯ ಕಾರ್ಮಿಕ ಭವಿಷ್ಯ ನಿಧಿಗೆ ಹೆಚ್ಚಳ ಮಾಡಿರುವ ಈ ಬಡ್ಡಿ ದರವನ್ನು ವಿರೋಧದಿಂದಲೇ ಕಾರ್ಮಿಕ ಸಂಘಟನೆಗಳು ಒಪ್ಪಿಕೊಂಡಿದ್ದು ಮುಂದಾದರು ತಮ್ಮ ಬೇಡಿಕೆ ಇಡೇರಿಸುವಂತೆ ಮನವಿ ಮಾಡಿವೆ.

ಕರುನಾಡು

## ಕ್ರೀಡೆ

**ರಾಜಸ್ತಾನ ರಾಯಲ್ಸ್ ತಂಡಕ್ಕೆ 100 ಕೋಟಿ ದಂಡ**

ಕಾನೂನು ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ ನಡೆಸುತ್ತಿರುವ ಆರೋಪದ ಮೇಲೆ ಶಿಲ್ಪಾ ಶೆಟ್ಟಿ ಒಡೆತನದ ರಾಜಸ್ತಾನ್ ರಾಯಲ್ಸ್ ತಂಡಕ್ಕೆ ಜಾರಿ ನಿರ್ದೇಶನಾಲಯವೂ (Enforcement Directorate)ರೂ.100 ಕೋಟಿ ದಂಡ ವಿಧಿಸಿದೆ.

- ವಿದೇಶಿ ವಿನಿಮಯ ಹಸ್ತಾಂತರ ಕಾಯ್ದೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ ಅಡಿ ಮೂರು ವರ್ಷಗಳ ಕಾಲ ತನಿಖೆ ನಡೆಸಿ ದಂಡ ವಿಧಿಸಲಾಗಿದೆ.

ರಾಜಸ್ತಾನ್ ರಾಯಲ್ಸ್ ನಲ್ಲಿ ಪಾಲು ಹೊಂದಿರುವ ರಾಜಸ್ತಾನ ಕ್ರಿಕೆಟ್ ಪ್ರೈವೆಟ್ ಲಿಮೆಟೆಡ್ ರೂ.50 ಕೋಟಿ, ಶಿಲ್ಪಾ ಶೆಟ್ಟಿಗೆ ರೂ.34 ಕೋಟಿ ಹಾಗೂ ಎಂ.ಎಸ್. ಇನ್ ವೆಸ್ಟಮೆಂಟ್ ನಿರ್ದೇಶಕರಿಗೆ ರೂ.14.5 ಕೋಟಿ ದಂಡ ವಿಧಿಸಲಾಗಿದೆ.

**ಐಪಿಲ್ ಆರನೇ ಆವೃತ್ತಿ ಹರಾಜು: ಆಸ್ತ್ರೇಲಿಯಾದ ಮ್ಯಾಕ್ಸ್ ವೆಲ್ ಗೆ ಗರಿಷ್ಠ ಮೊತ್ತ**

ಐಪಿಲ್ ಆರನೇ ಆವೃತ್ತಿಗೆ ಕ್ರಿಕೆಟ್ ಆಟಗಾರರ ಹರಾಜು ಪ್ರಕ್ರಿಯೆ ಚೆನ್ನೈನಲ್ಲಿ ಇತ್ತೀಚೆಗೆ ನಡೆಯಿತು. ಕ್ರಿಕೆಟ್ ಟೂರ್ನಿಯ ಫ್ರಾಂಚೈಸ್ ಗಳು ತಮ್ಮ ತಂಡಗಳನ್ನು ಬಲಿಷ್ಠಗೊಳಿಸುವ ಸಲುವಾಗಿ ಹೊಸ ಮುಖಗಳತ್ತ ಚಿತ್ತ ಹರಿಸಿವೆ. ಈ ಬಾರಿಯ ಪ್ರಮುಖ ಅಂಶಗಳು ಇಲ್ಲಿವೆ.

- ಈ ಬಾರಿಯ ಹರಾಜಿನಲ್ಲಿ ಅತಿ ಹೆಚ್ಚು ಮೊತ್ತಕ್ಕೆ ಹರಾಜದವರು ಆಸ್ತ್ರೇಲಿಯಾದ ಗ್ಲೇನ್ ಮ್ಯಾಕ್ಸ್ ವೆಲ್. ಮುಂಬೈ ತಂಡ ಇವರನ್ನು ರೂ.5.3 ಕೋಟಿ ಮೊತ್ತಕ್ಕೆ ಖರೀದಿಸಿತು.
- ಅಲ್ ರೌಂಡರ್ ಅಭಿಷೇಕ್ ನಾಯರ್ ಅತಿ ಹೆಚ್ಚು ಮೊತ್ತಕ್ಕೆ ಮಾರಾಟವಾದ ಭಾರತದ ಆಟಗಾರ, ರೂ.3.5 ಕೋಟಿ ನೀಡುವ ಮೂಲಕ ಇವರನ್ನು ಪುಣೆ ವಾರಿಯರ್ಸ್ ಖರೀದಿಸಿತು.
- ಅತಿ ಹೆಚ್ಚು ನಿರೀಕ್ಷೆ ಇಡಲಾಗಿದ್ದ ಆಸ್ತ್ರೇಲಿಯಾದ ರಿಕಿ ಪಾಂಟಿಂಗ್ ಮತ್ತು ಕ್ಲಾರ್ಕ್ ಕೇವಲ 2.2 ಕೋಟಿ ಮೊತ್ತಕ್ಕೆ ಮಾರಾಟವಾದರು. ಪಾಂಟಿಂಗ್ ಮುಂಬೈ ಪಾಲಾದರೆ, ಕ್ಲಾರ್ಕ್ ಪುಣೆ ವಾರಿಯರ್ಸ್ ಪರವಾಗಿ ಆಡಲಿದ್ದಾರೆ.
- ಹರಾಜು ಪಟ್ಟಿಯಲ್ಲಿದ್ದ ಒಟ್ಟು 108 ಆಟಗಾರರಲ್ಲಿ ಕೇವಲ 37 ಜನ ಮಾತ್ರ ಹರಾಜಗಿದ್ದರೆ.
- ಐಪಿಎಲ್ ನಲ್ಲಿ ಒಟ್ಟಾರೆ ಅತಿ ಹೆಚ್ಚು ಹಣ ಪಡೆಯುವ ಆಟಗಾರರ ಪಟ್ಟಿಯಲ್ಲಿ ಗೌತಮ್ ಗಂಬೀರ್ ಮೊದಲ ಸ್ಥಾನದಲ್ಲಿದ್ದರೆ. ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಆಟಗಾರರಾದ ಗಂಭೀರ್ ಒಟ್ಟು 11.40 ಕೋಟಿ ಹಣ ಪಡೆಯಲ್ಲಿದ್ದಾರೆ. ಅಲ್ ರೌಂಡರ್ ರವೀಂದ್ರ ಜಡೇಜ ಎರಡನೇ ಸ್ಥಾನದಲ್ಲಿದ್ದಾರೆ.

**ಟೆಸ್ಟ್ Ranking ಸೌತ್ ಆಫ್ರಿಕಾದ ಹಶೀಮ್ ಆಮ್ಲ ನಂ.1**

ಅಂತರ್ ರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಟೆಸ್ಟ್ Ranking ಪಟ್ಟಿಯನ್ನು ಪ್ರಕಟಿಸಿದ್ದು, ಸೌತ್ ಆಫ್ರಿಕಾದ ಸ್ಪೋಟಕ ಬ್ಯಾಟ್ಸ್ ಮನ್ ಹಶೀಮ್ ಆಮ್ಲ 895 ಪಾಯಿಂಟ್ ಗಳಿಸಿ ಪ್ರಥಮ ಸ್ಥಾನದಲ್ಲಿದ್ದಾರೆ. ಅಷ್ಟೇ ಅಲ್ಲ ಆಸ್ತ್ರೇಲಿಯಾದ ಆಟಗಾರ ರಿಕಿ ಪಾಂಟಿಂಗ್ ನಂತರ ಟೆಸ್ಟ್ ಮತ್ತು ಏಕದಿನ Ranking ಪಟ್ಟಿಗಳಲ್ಲಿ ಅಗ್ರ ಸ್ಥಾನದಲ್ಲಿರುವ ಪ್ರಥಮ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

- ಬೌಲಿಂಗ್ ವಿಭಾಗದಲ್ಲಿ ದಕ್ಷಿಣಾ ಆಫ್ರಿಕಾದವರೇ ಆದ ಡೆಲ್ ಸ್ಟೈನ್ ರವರು 908 ಪಾಯಿಂಟ್ ಗಳೊಂದಿಗೆ ಅಗ್ರ ಸ್ಥಾನದಲ್ಲಿದ್ದಾರೆ. ಸ್ಟೈನ್ ಎರಡನೇ ಬಾರಿ 900 ಪಾಯಿಂಟ್ ಗಳ ಗಡಿಯನ್ನು ದಾಟುತ್ತಿರುವುದು ವಿಶೇಷ, ಈ ಹಿಂದೆ 2008 ರಲ್ಲಿ ಸಹ ಅವರು ಈ ಸಾಧನೆಯನ್ನು ಮಾಡಿದ್ದರು.

- ಇನ್ನೂ ಅಲ್ ರೌಂಡರ್ ಪಟ್ಟಿಯಲ್ಲಿ ಇದೇ ದೇಶದವರಾದ ಜಾಕ್ ಕಾಲಿಸ್ ಪ್ರಥಮ ಸ್ಥಾನಗಿಟ್ಟಿಸಿಕೊಳ್ಳುವ ಮೂಲಕ ಎಲ್ಲಾ ವರ್ಗಗಳಲ್ಲೂ ದಕ್ಷಿಣ ಆಫ್ರಿಕಾದವರೇ ಮೇಲುಗೈ ಸಾಧಿಸಿದ್ದಾರೆ.

**ಮಹಿಳೆಯ ಕ್ರಿಕೆಟ್ ವಿಶ್ವ ಕಪ್ ಟೂರ್ನಿಯಿಂದ ಹೊರಬಿದ್ದ ಭಾರತ**

ಶ್ರೀಲಂಕಾದ ತಂಡದ ವಿರುದ್ಧ ಸೋಲನ್ನು ಅನುಭವಿಸುವ ಮೂಲಕ ಭಾರತ ವನಿತೆಯರ ತಂಡ ವಿಶ್ವ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ತನ್ನ ಹೋರಾಟವನ್ನು ಅಂತಿಮಗೊಳಿಸಿತು. ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ಶ್ರೀಲಂಕಾ ತಂಡ ನೀಡಿದ 282 ರನ್ ಗಳ ಗುರಿಯನ್ನು ಮುಟ್ಟುವಲ್ಲಿ ಭಾರತ ತಂಡ ಯಶಸ್ವಿಯಾಗಲಿಲ್ಲ. ಮಿಥಲಿ ರಾಜ್ ನೇತೃತ್ವದ ಭಾರತ ತಂಡ 44.2 ಓವರ್ ಗಳಲ್ಲಿ ಕೇವಲ 144 ರನ್ ಗಳಿಸಿ ತನ್ನ ಎಲ್ಲಾ ವಿಕೆಟ್ ಕಳೆದುಕೊಂಡಿತು. ಈ ಸೋಲಿನಿಂದಾಗಿ ತವರು ನೆಲದಲ್ಲಿ ಚಾಂಪಿಯನ್ ಆಗಬೇಕು ಎಂಬ ಅತಿಥೇಯರ ಕನಸು ಭಗ್ನಗೊಂಡಿತು.

- ಈ ಪಂದ್ಯಕ್ಕೂ ಮುನ್ನ ಎರಡು ತಂಡಗಳಲ್ಲಿ ಆಡಿದ್ದ ಭಾರತ ಮೊದಲ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಬಾರಿ ಅಂತರದಲ್ಲಿ ಜಯಗಳಿಸಿತ್ತು. ಆದರೆ ಎರಡನೇ ಪಂದ್ಯದಲ್ಲಿ ಇಗ್ಲೆಂಡ್ ತಂಡದ ವಿರುದ್ಧ ಸೋಲು ಅನುಭವಿಸಿದರಿಂದ ಮುಂದಿನ ಹಂತ ಪ್ರವೇಶಿಸಲು ಮೂರನೇ ಪಂದ್ಯದಲ್ಲಿ ಶ್ರೀಲಂಕಾದ ವಿರುದ್ಧ ಗೆಲುವು ಅನಿವಾರ್ಯವಾಗಿತ್ತು.

**ಬಿಸಿಸಿಐ ಗೆ ರೂ.52.24 ಕೋಟಿ ದಂಡ ವಿಧಿಸಿದ ಸ್ಪರ್ಧಾತ್ಮಕ ಆಯೋಗ**

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (BCCI) ಸ್ಪರ್ಧೆ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದೆಯೆಂದು "ಭಾರತ ಸ್ಪರ್ಧಾತ್ಮಕ ಆಯೋಗವು" (Competition Commission of India, CCI) ಬಿಸಿಸಿಐ ಗೆ 52.24 ಕೋಟಿ ದಂಡ ವಿಧಿಸಿದೆ.

ದಂಡ ಏಕೆ?

- ನವದೆಹಲಿಯಲ್ಲಿ ನೆಲೆಸಿರುವ ಸುರಿಂಧರ್ ಸಿಂಗ್ ಎಂಬುವವರು 2010 ರಲ್ಲಿ ಸಿಸಿಐ ಗೆ ದೂರು ನೀಡಿದ್ದರು. ತಮ್ಮ ದೂರಿನಲ್ಲಿ ಅವರು ಐಪಿಎಲ್ ಮತ್ತು ಹಾಗೂ ಬಿಸಿಸಿಐ ನಡೆಸುತ್ತಿರುವ ಕೆಲವು ವೃತ್ತಿಪರ ಕ್ರಿಕೆಟ್ ಲೀಗ್ ಗೆ ಸಂಬಂಧಿಸಿದಂತೆ ಕೆಲವು ಆರೋಪಗಳನ್ನು ಮಾಡಿದ್ದರು. ಪ್ರಾಂಚೈಸ್ ಹಕ್ಕು, ಪ್ರಸಾರ ಹಕ್ಕು ಮತ್ತು ಪಾಯೋಜಕತ್ವ ಹಕ್ಕು ನೀಡುವ ಸಂದರ್ಭ ಬಿಸಿಸಿಐ ಅಕ್ರಮ ನಡೆಸಿತ್ತು ಎಂಬುದು ಅವರ ದೂರು ಆಗಿತ್ತು.
- ಈ ಬಗ್ಗೆ ವಿಚಾರಣೆ ನಡೆಸಿದ CCI ಬಿಸಿಸಿಐ ತನ್ನ ಹಣ ಬಲ ಹಾಗೂ ಖ್ಯಾತಿಯಿಂದ ಮಾರುಕಟ್ಟೆಯ ಮೇಲೆ ಏಕಸ್ವಾಮ್ಯ ಸಾಧಿಸಿದೆ. ಮಾತ್ರವಲ್ಲದೇ ತನ್ನ ಸ್ಪರ್ಧಿಗಳಿಗೆ ಮಾರುಕಟ್ಟೆ ಮೇಲೆ ಹಿಡಿತ ಸಾಧಿಸಲು ಅವಕಾಶ ನೀಡಿದೆ ಎಂದು ಆರೋಪಿಸಿ ದಂಡವನ್ನು ವಿಧಿಸಿದೆ. ಅಲ್ಲದೇ ದಂಡವನ್ನು ೯೦ ದಿನದೊಳಗೆ ತೆರಬೇಕೆಂದು ಸೂಚಿಸಿದೆ.
- ಇದಕ್ಕೆ ಪ್ರತಿಕ್ರಿಯೆ ವ್ಯಕ್ತ ಪಡಿಸಿರುವ ಬಿಸಿಸಿಐ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿದೆ.

**ಕ್ರಿಕೆಟ್ ದೇವರಿಂದ ಮತ್ತೊಂದು ದಾಖಲೆ**

ದಾಖಲೆಗಳ ಸರದಾರ, ಬ್ಯಾಟಿಂಗ್ ಮಾಂತ್ರಿಕ ಸಚಿನ್ ತೆಂಡೂಲ್ಕರ್ ಮತ್ತೊಂದು ದಾಖಲೆ ಮಾಡುವ ಮೂಲಕ ಮಿಂಚಿದ್ದಾರೆ. ಭಾರತದ ಇತರೆ ತಂಡದ ವಿರುದ್ಧದ ಇರಾನಿ ಕಪ್ ಕ್ರಿಕೆಟ್ ಪಂದ್ಯದಲ್ಲಿ ಅಜೇಯ 140 ರನ್ ಗಳಿಸುವ ಮೂಲಕ ಅವರು ಪ್ರಥಮ ದರ್ಜೆ ಪಂದ್ಯಗಳಲ್ಲಿ 81 ನೇ ಶತಕ ಸಂಪಾದಿಸಿದರು.

- ಈ ಮೂಲಕ ಸಚಿನ್ ರವರು ಇದುವರೆಗೂ ಮಾಜಿ ಆಟಗಾರ ಸುನೀಲ್ ಗಾವಸ್ಕರ್ ರವರ ಹೆಸರಿನಲ್ಲಿದ್ದ ದಾಖಲೆಯನ್ನು ಸರಿಗಟ್ಟಿದರು.
- ಸುನೀಲ್ ಗಾವಸ್ಕರ್ 1971 ರಿಂದ 1987 ರ ಅವಧಿಯಲ್ಲಿ ಒಟ್ಟು 81 ಶತಕಗಳಿಸಿದ್ದರು, ಮುಂಬೈ ಪರ ಸಚಿನ್ ರವರಿಗೆ ಇದು 81 ನೇ ಶತಕ.
- ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ ಸಚಿನ್ ತಮ್ಮ ಮೊದಲ ಶತಕವನ್ನು ವಾಂಖೇಡ ಕ್ರೀಡಾಂಗಣದಲ್ಲಿ 1988 ರಲ್ಲಿ ಗುಜರಾತ್ ವಿರುದ್ಧ ಗಳಿಸಿದ್ದರು. ಅವರ 81 ನೇ ಶತಕಕ್ಕೂ ಇದೇ ಕ್ರೀಡಾಂಗಣ ವೇದಿಕೆಯಾಗಿರುವುದು ವಿಸ್ಮಯವೇ ಸರಿ.
- ಇದೇ ವೇಳೆ ಸಚಿನ್ ಮತ್ತೊಂದು ದಾಖಲೆಗೆ ಪಾತ್ರರಾದರು. ಅವರು ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ 25 ಸಾವಿರ ರನ್ ಪೂರೈಸಿದರು.

**ಬಾರ್ಸಿಲೋನ ಜೊತೆ ಒಪ್ಪಂದ ವಿಸ್ತರಣೆಗೆ ಸಹಿ ಹಾಕಿದ ಮೆಸ್ಸಿ**

ಅರ್ಜೆಂಟೀನಾದ ಫಾರ್ವರ್ಡ್ ಆಟಗಾರ ಲಿಯೊನೆಲ್ ಮೆಸ್ಸಿ ಅವರು ಬಾರ್ಸಿಲೋನಾ ಫುಟ್ ಬಾಲ್ ಕ್ಲಬ್ ನೊಂದಗಿನ ತಮ್ಮ ಒಪ್ಪಂದವನ್ನು ವಿಸ್ತರಿಸಿದ್ದಾರೆ. ಈ ಒಪ್ಪಂದ ಪ್ರಕಾರ ಮೆಸ್ಸಿ 2018 ರ ವರೆಗೆ ಈ ಕ್ಲಬ್ ನಲ್ಲಿ ಆಡಲಿದ್ದು, ಇದಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳಿಗೆ ಸಹಿ ಹಾಕಿದ್ದಾರೆ.

- 25 ವರ್ಷ ವಯಸ್ಸಿನ ಮೆಸ್ಸಿ ಇತ್ತೀಚೆಗಷ್ಟೇ ಸತತ ನಾಲ್ಕನೇ ಬಾರಿ ಫಿಫಾ "ವರ್ಷದ ವಿಶ್ವ ಶ್ರೇಷ್ಠ ಆಟಗಾರ" ಗೌರವಕ್ಕೆ ಪಾತ್ರರಾಗಿದ್ದರು.
- ಮೆಸ್ಸಿ ಅತಿ ಹೆಚ್ಚು ಆದಾಯ ಹೊಂದಿರುವ ವಿಶ್ವದ ಆಟಗಾರ ಕೂಡ. ಅವರು ವಾರ್ಷಿಕ ರೂ.75 ಕೋಟಿ ಸಂಭಾವನೆ ಪಡೆಯುತ್ತಿದ್ದಾರೆ.
- ಮೆಸ್ಸಿ ತಮ್ಮ 13 ನೇ ವಯಸ್ಸಿನಲ್ಲೇ ಬಾರ್ಸಿಲೋನಾ ಕ್ಲಬ್ ಸೇರಿದ್ದರು. 16 ನೇ ವರ್ಷದಲ್ಲಿ ಪ್ರಥಮ ದರ್ಜೆ ಫುಟ್ ಬಾಲ್ ಗೆ ಪದಾರ್ಪಣೆ ಮಾಡಿದ್ದ ಮೆಸ್ಸಿ 21 ನೇ ವಯಸ್ಸಿನಲ್ಲಿ ಮೊದಲ ಬಾರಿ "ವರ್ಷದ ವಿಶ್ವ ಶ್ರೇಷ್ಠ ಆಟಗಾರ" ಎನಿಸಿದ್ದರು.

**<u>ಚೊಚ್ಚಲ ಹಾಕಿ ಇಂಡಿಯಾ ಲೀಗ್ ಟೂರ್ನಿ: ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ರಾಂಚಿ ರಿನೋಸ್</u>**

ಐಪಿಲ್ ಟಿ-20 ಕ್ರಿಕೆಟ್ ಟೂರ್ನಿ ಮಾದರಿಯಲ್ಲೇ ಆಯೋಜಿಸಲಾಗಿದ್ದ ಪ್ರಥಮ ಹಾಕಿ ಇಂಡಿಯಾ ಲೀಗ್ ಟೂರ್ನಿಯಲ್ಲಿ ಅಮೋಘ ಪ್ರದರ್ಶನ ನೀಡುವ ಮೂಲಕ ರಾಂಚಿ ರಿನೋಸ್ ತಂಡವು ಪ್ರಶಸ್ತಿಯನ್ನು ಬಾಚಿಕೊಂಡಿತು. ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ರಾಂಚಿ ರಿನೋಸ್ ತಂಡವು 3-1 ಗೋಲುಗಳ ಅಂತರದಿಂದ ಡೆಲ್ಲಿ ವೇವ್ ರೈಡರ್ಸ್ ತಂಡವನ್ನು ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

- ಚಾಂಪಿಯನ್ ತಂಡ ರಾಂಚಿ ರಿನೋಸ್ ಗೆ ರೂ.2.5 ಕೋಟಿ ಬಹುಮಾನ ಸಿಗಲಿದೆ. ರನ್ನರ್ ಆಫ್ ಆದ ಡೆಲ್ಲಿ ವೇವ್ ರೈಡರ್ಸ್ ತಂಡ ರೂ.1.25 ಕೋಟಿ ಗಳಿಸಿದೆ.
- ಉತ್ತರ ಪ್ರದೇಶದ ವಿಜಾರ್ಡ್ ತಂಡದವರು ಮೂರನೇ ಸ್ಥಾನವನ್ನು ಗಳಿಸಿದರು.
- ವಿಜೇತ ರಾಂಚಿ ತಂಡದ ಮನ್ ದೀಪ್ ಸಿಂಗ್ ರವರು "ಉದಯೋನ್ಮುಖ ಆಟಗಾರ" ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಅಲ್ಲದೇ ರಾಂಚಿ ರಿನೋಸ್ ತಂಡವೂ "ಫೇರ್ ಪ್ಲೇ" ಪ್ರಶಸ್ತಿಯನ್ನು ಜಯಿಸಿತು.

**<u>ಭಾರತ ಇತರೆ ತಂಡದ ಪಾಲಾದ ಇರಾನಿ ಕಪ್</u>**

ಭಾರತ ಇತರೆ ತಂಡದವರು ಸತತ ಎಂಟನೇ ಬಾರಿ ಇರಾನಿ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟಗಿಟ್ಟಿಸಿಕೊಂಡರು. ಮುಂಬೈ ವಿರುದ್ದದ ಪಂದ್ಯದಲ್ಲಿ ನಿರೀಕ್ಷೆಯಂತೆಯೇ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು. ಮೊದಲ ಇನ್ನಿಂಗ್ಸ್ ನಲ್ಲಿ ಮುನ್ನಡೆ ಆಧಾರದ ಮೇಲೆ ಪ್ರಶಸ್ತಿಯನ್ನು ಭಾರತ ಇತರೆ ತಂಡಕ್ಕೆ ನೀಡಲಾಯಿತು.

- ವಾಂಖೇಡ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಅಂತಿಮ ದಿನ ಭಾರತ ಇತರೆ ತಂಡ 120 ಓವರ್ ಗಳಲ್ಲಿ 369 ರನ್ ಗಳಿಸಿ ಎರಡನೇ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಈ ಮೂಲಕ ಮುಂಬೈ ತಂಡದ ಗೆಲುವಿಗೆ 63 ಓವರ್ ಗಳಲ್ಲಿ 507 ರನ್ ಗಳ ಗುರಿನೀಡಿತು.
- ಪಂದ್ಯ ಡ್ರಾ ಆದಾಗ ಮುಂಬೈ ತಂಡ ಎರಡನೇ ಇನ್ನಿಂಗ್ಸ್ ನಲ್ಲಿ 54 ಓವರ್ ಗಳಲ್ಲಿ 4 ವಿಕೆಟ್ ಗೆ 160 ರನ್ ಗಳಿಸಿತ್ತು.
- ಇರಾನಿ ಕಪ್ ಟೂರ್ನಿಯ ಇತಿಹಾಸದಲ್ಲಿ ಭಾರತ ಇತರೆ ತಂಡ 26 ಬಾರಿ ಕಪ್ ಗೆಲ್ಲುವ ಮೂಲಕ ಸಾಧನೆ ಮಾಡಿದೆ.

ಇರಾನಿ ಕಪ್:

ರಣಜಿ ಟ್ರೋಫಿ ಚಾಂಪಿಯನ್ ಶಿಪ್ 25 ವರ್ಷಗಳನ್ನು ಪೂರೈಸಿದರ ಸ್ಮರಣಾರ್ಥ 1959-60 ನೇ ಸಾಲಿನಲ್ಲಿ ಇರಾನಿ ಕಪ್ ಕಲ್ಪನೆಯನ್ನು ಅನಾವರಣಗೊಳಿಸಲಾಯಿತು. 1928 ರಿಂದ 1970 ರ ವರೆಗೆ ಬಿಸಿಸಿಐ ಗೆ ಶ್ಲಾಘನೀಯ ಸೇವೆ ಸಲ್ಲಿಸಿದ Z.R.ಇರಾನಿಯವರ ಹೆಸರನ್ನು ಈ ಕಪ್ ಗೆ ನೀಡಲಾಗಿದೆ. ಯಾವುದೇ ವರ್ಷದಲ್ಲಿ ರಣಜಿ ಚಾಂಪಿಯನ್ ಆಗುವ ತಂಡ ಮತ್ತು ಭಾರತದ ಇತರೆ ತಂಡಗಳ ನಡುವೆ ಮಾತ್ರ ಈ ಟೂರ್ನಿಯನ್ನು ಆಯೋಜಿಸಲಾಗುತ್ತದೆ. ಈ ವರ್ಷದಲ್ಲಿ ಮುಂಬೈ ತಂಡ 44 ನೇ ಬಾರಿ ರಣಜಿ ಚಾಂಪಿಯನ್ ಆಗಿತ್ತು.

**ಒಲಂಪಿಕ್ಸ್ ನಿಂದ ಕುಸ್ತಿ ಔಟ್**

ಒಲಂಪಿಕ್ಸ್ ಕ್ರೀಡಾಕೂಟದಿಂದ ಕುಸ್ತಿಯನ್ನು ಹೊರಗಿಡಲು ಅಂತರ್ ರಾಷ್ಟ್ರೀಯ ಒಲಂಪಿಕ್ ಸಮಿತಿ (ಐಒಸಿ) ನಿರ್ಧರಿಸಿದೆ. ಐಒಸಿ ಕಾರ್ಯಕಾರಿ ಸಮಿತಿಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದ್ದು, 2020 ರಿಂದ ಈ ನಿರ್ಣಯ ಜಾರಿಗೊಳ್ಳಲಿದೆ.

- ಐಒಸಿ ಮಂಡಳಿಯು ಒಲಂಪಿಕ್ ಕಾರ್ಯಕ್ರಮದಡಿ ಬರುವ 26 ಕ್ರೀಡೆಗಳನ್ನು ಪರಿಶೀಲಿಸಿ ಅಂತಿಮವಾಗಿ ಕುಸ್ತಿಯನ್ನು ಕೈಬಿಡಲಾಗಿದೆ.
- ಕಳೆದ ಬಾರಿ ಬೇಸ್ ಬಾಲ್ ಮತ್ತು ಸಾಫ್ಟ್ ಬಾಲ್ ಕ್ರೀಡೆಗಳನ್ನು ಒಲಂಪಿಕ್ಸ್ ಕ್ರೀಡಾಕೂಟದಿಂದ ತೆಗೆದುಹಾಕಲಾಗಿತ್ತು.
- ಮುಂದಿನ ಒಲಂಪಿಕ್ಸ್ ಪಂದ್ಯ 2016 ರಲ್ಲಿ ಬ್ರೆಜಿಲ್ ನ ರಿಯೋ ಡಿ ಜನ್ಯೆರೆಯಲ್ಲಿ ನಡೆಯಲಿದೆ. 2020 ರಲ್ಲಿ ನಡೆಯುವ ಒಲಂಪಿಕ್ಸ್ ನ್ನು ಆಯೋಜಿಸಲು ಮ್ಯಾಂಡ್ರಿಡ್, ಟೋಕಿಯೊ ಮತ್ತು ಇಸ್ತಾಂಬುಲ್ ಕಣದಲ್ಲಿವೆ. ಆದರೆ ಸೆಪ್ಟೆಂಬರ್ 2013 ರಲ್ಲಿ ನಡೆಯಲಿರುವ ಐಒಸಿ ಯ ಸಭೆಯಲ್ಲಿ ಅಂತಿಮ ನಿರ್ಣಯ ಹೊರಬೀಳಲಿದೆ.

**ಹರ್ಬಲೈಫ್ ನ್ಯೂಟ್ರಿಷನ್ ಕಂಪನಿಗೆ ಗಿರೀಶ್ ಹೊಸನಗರ ನೇಮಕ**

ಲಂಡನ್ ನಲ್ಲಿ ನಡೆದ ಪ್ಯಾರಒಲಂಪಿಕ್ಸ್ ನಲ್ಲಿ ಭಾರತಕ್ಕೆ ಏಕೈಕ ಪದಕ ತಂದುಕೊಟ್ಟ ಕರ್ನಾಟಕದ ಗಿರೀಶ್ ಹೊಸನಗರ ನಾಗರಾಜೇಗೌಡ ರವರನ್ನು ಪ್ರಸಿದ್ಧ ನ್ಯೂಟ್ರಿಷನ್ ಕಂಪನಿ "ಹರ್ಬಲೈಫ್" ತನ್ನ ಕಂಪನಿಯ ಪ್ರಚಾರ ರಾಯಭಾರಿಯನ್ನಾಗಿ ನೇಮಕ ಮಾಡಿದೆ. ಗಿರೀಶ್ ಹರ್ಬಲೈಫ್ ಕಂಪನಿಯ ಫ್ರೆಶ್ ಡ್ರಿಂಕ್ ಮತ್ತು ಫಾರ್ಮೂಲ 1 ನ್ಯೂಟ್ರಿಷನ್ ಶೇಕ್ ನ ಜಾಹೀರಾತುವಿನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

- ಲಂಡನ್ ಪ್ಯಾರಒಲಂಪಿಕ್ಸ್ ನಲ್ಲಿ ಗಿರೀಶ್ ಹೈ ಜಂಪ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಈ ವರ್ಷದ ಪದ್ಮಶ್ರೀ ಪ್ರಶಸ್ತಿ ಸಹ ಇವರು ಪಡೆದಿದ್ದಾರೆ.
- 2006 ರಲ್ಲಿ ಐರ್ಲೆಂಡ್ ನಲ್ಲಿ ನಡೆದ ವಿಕಲಚೇತರನ ಜೂಮಿಯರ್ ವರ್ಲ್ಡ್ ಚಾಂಪಿಯನ್ ಶಿಪ್ ನಲ್ಲಿ ಗಿರೀಶ್ ಕಂಚಿನ ಪದಕ ಗೆದ್ದಿದ್ದರು.

**ಪಂಕಜ್ ಅಡ್ವಾಣಿ ಐತಿಹಾಸಿಕ ಸಾಧನೆ**

ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್ ಪಂಕಜ್ ಅಡ್ವಾಣಿ ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದ್ದಾರೆ. ಪಂಕಜ್ ರವರು ವೆಲ್ಸ್ ನ ನ್ಯೂಪೋರ್ಟ್ ನಲ್ಲಿ ನಡೆಯುತ್ತಿರುವ "ವೇಲ್ಸ್ ಓಪನ್ ವೃತ್ತಿಪರ ಸ್ನೂಕರ್ ಸರಣಿಯ ಪ್ರೀ ಕ್ವಾರ್ಟರ್ ಫೈನಲ್ ನಲ್ಲಿ ಪ್ರವೇಶ ಮಾಡಿದ್ದಾರೆ. ಈ ಸಾಧನೆ ಮಾಡಿದ ಏಕೈಕ ಭಾರತದ ಆಟಗಾರ ಎಂಬ ಖ್ಯಾತಿ ಅವರಿಗೆ ಸಂದಿದೆ.

- ಈ ಹಿಂದೆ ಭಾರತದ ಯಾಸಿನ್ ಮರ್ಚೆಂಟ್ ಈ ಟೂರ್ನಿಯ ಪ್ರಧಾನ ಹಂತದಲ್ಲಿ ಆಡಲು ಅವಕಾಶ ಪಡೆದುಕೊಂಡಿದ್ದರು. ಆದರೆ ಅವರು ಮೊದಲ ಸುತ್ತಿನಲ್ಲಿ ಸೋಲು ಕಂಡಿದ್ದರು.
- ಇಂಗ್ಲೆಂಡ್ ಶಾನ್ ಮರ್ಫಿಯವರನ್ನು ಮಣಿಸುವ ಮೂಲಕ ಅಡ್ವಾಣಿಯವರು ಈ ದಾಖಲೆ ಬರೆದಿದ್ದಾರೆ.
- ಪಂಕಜ್ ಇದುವರೆಗೂ 8 ಬಾರಿ ವಿಶ್ವ ಚಾಂಪಿಯನ್ ಆಗಿದ್ದಾರೆ.

**ವಿಶ್ವದ ನಂ.1 ಟೆನ್ನಿಸ್ ಆಟಗಾರ್ತಿಯಾಗಿ ಮತ್ತೆ ಸೆರೆನಾ**

ಅಮೆರಿಕಾದ 31 ವರ್ಷದ ಸೆರೆನಾ ವಿಲಿಯಮ್ಸ್ ಮತ್ತೇ ವಿಶ್ವದ ನಂ.1 ಸ್ಥಾನಕ್ಕೆ ಏರಿದ್ದಾರೆ. ಖತಾರ್ ಓಪನ್ ಟೆನ್ನಿಸ್ ನಲ್ಲಿ ಚೆಜ್ ರಿಪಬ್ಲಿಕ್ ನ ಪೆಟ್ರಾ ಕ್ವಿತೋವರವರನ್ನು 6-3, 3-6, 7-5 ಸೆಟ್ ಗಳಿಂದ ಮಣಿಸುವ ಮೂಲಕ ಅವರು ಈ ಸಾಧನೆಗೈದಿದ್ದಾರೆ.

- ಈ ಗೆಲುವಿನ ಮೂಲಕ ಸೆರೆನಾ ಎರಡುವರೆ ವರ್ಷಗಳ ನಂತರ ಟೆನ್ನಿಸ್ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಅಲಂಕರಿಸಿದ್ದಾರೆ.
- ಖತಾರ್ ಓಪನ್ ಟೆನ್ನಿಸ್ ನ ಸೆಮಿ ಫೈನಲ್ ಪಂದ್ಯದಲ್ಲಿ ಅವರು ರಷ್ಯಾದ ಮರಿಯಾ ಶರಪೋವಾ ವಿರುದ್ಧ ಸೆಣಸಲಿರುವರು.

**ಮಹಿಳೆಯರ ವಿಶ್ವಕಪ್ ಕ್ರಿಕೆಟ್: ಆಸ್ಟ್ರೇಲಿಯಾ ತಂಡ ಚಾಂಪಿಯನ್**

ಕುತೂಹಲ ಮೂಡಿಸಿದ್ದ ಏಕದಿನ ಮಹಿಳಾ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ವನಿತೆಯರ ತಂಡ ಗೆಲುವಿನ ಕಿರೀಟವನ್ನು ಮುಡಿಗೇರಿಸಿಕೊಂಡಿತು. ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಮಣಿಸುವ ಮೂಲಕ ಆಸ್ಟ್ರೇಲಿಯಾ ತಂಡ ಆರನೇ ಬಾರಿ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

- ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ ತಂಡ ನಿಗದಿತ ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 259 ರನ್ ಪೇರಿಸಿತು. ಈ ಮೊತ್ತವನ್ನು ಬೆನ್ನಟ್ಟಿದ ಕೆರಿಬಿಯನ್ ತಂಡ ಆರಂಭದಲ್ಲೇ ಆಘಾತವನ್ನು ಅನುಭವಿಸಿತು. ಕೇವಲ 145 ರನ್ ಗಳಿಸುವ ಮೂಲಕ ವೆಸ್ಟ್ ಇಂಡೀಸ್ ತಂಡ ಆಲ್ ಔಟ್ ಆಯಿತು.
- ಟೂರ್ನಿಯಲ್ಲಿ ವೆಸ್ಟ್ ಇಂಡೀಸ್ ದ್ವಿತೀಯ ಮತ್ತು ಇಂಗ್ಲೆಂಡ್ ತಂಡ ತೃತೀಯಾ ಸ್ಥಾನ ಪಡೆದುಕೊಂಡವು.
- ನ್ಯೂಜಿಲ್ಯಾಂಡ್ ನ ಸೂಜಿ ಬೇಟ್ಸ್ ರವರು ಟೂರ್ನಿಯ ಶ್ರೇಷ್ಠ ಆಟಗಾರ್ತಿಯಾಗಿ ಗೌರವ ಸ್ವೀಕರಿಸಿದರು.

**ಅಂತರ್ ರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ಹೇಳಿದ ಲಿಸಾ ಸ್ಥಾಲೇಕರ್**

ವಿಶ್ವ ಮಹಿಳಾ ಕ್ರಿಕೆಟ್ ಚಾಂಪಿಯನ್ ತಂಡದ ಆಟಗಾರ್ತಿಯಾದ ಲಿಸಾ ಸ್ಥಾಲೇಕರ್ ರವರು ಅಂತರ್ ರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ಹೇಳಿದರು. ಲಿಸಾ ವಿಶ್ವದ ಪ್ರಮುಖ ಆಲ್ ರೌಂಡರ್ ಆಟಗಾರ್ತಿಯಾಗಿದ್ದರು. ವಿಶ್ವಕಪ್ ಫೈನಲ್ ನಲ್ಲಿ ವೆಸ್ಟ್ ಇಂಡೀಸ್ ತಂಡ ವಿರುದ್ಧ ಆಡಿದ ಪಂದ್ಯ ಅವರ ಕೊನೆಯ ಪಂದ್ಯವಾಗಿದೆ.

- 2001 ರಲ್ಲಿ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದ ಮೂಲಕ ಅಂತರ್ ರಾಷ್ಟ್ರೀಯ ಕ್ರಿಕೆಟ್ ಗೆ ಪಾದಾರ್ಪಣೆ ಮಾಡಿದರು.
- ಇದುವರೆಗೂ ಲಿಸಾ 8 ಟೆಸ್ಟ್, 125 ಏಕದಿನ ಪಂದ್ಯಗಳಲ್ಲಿ ಮತ್ತು 54 ಟಿ-20 ಪಂದ್ಯಗಳಲ್ಲಿ ಆಡಿದ್ದಾರೆ. ಟೆಸ್ಟ್ ನಲ್ಲಿ 416 ರನ್, ಏಕದಿನ ಪಂದ್ಯದಲ್ಲಿ 2728 ರನ್ ಮತ್ತು ಟಿ-20 ಯಲ್ಲಿ 769 ರನ್ ಗಳಿಸಿದ್ದಾರೆ.
- ಲಿಸಾ ರವರು 1000 ರನ್ ಗಳಿಸುವುದರ ಜೊತೆಗೆ 100 ವಿಕೆಟ್ ಪಡೆದ ಮೊದಲ ಆಟಗಾರ್ತಿ ಎಂಬ ಖ್ಯಾತಿ ಹೊಂದಿದ್ದಾರೆ.
- 33 ವರ್ಷದ ಲಿಸಾ ಟಿ-20 ಆಲ್ ರೌಂಡರ್ ವಿಭಾಗದಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಏಕದಿನ ಪಂದ್ಯದ ಬೌಲಿಂಗ್ ವಿಭಾಗದಲ್ಲಿ ದ್ವಿತೀಯ ಸ್ಥಾನದಲ್ಲಿರುವರು. 2007 ಮತ್ತು 2008 ರಲ್ಲಿ ಐಸಿಸಿ ವರ್ಷದ ಮಹಿಳಾ ಆಟಗಾರ್ತಿ ಪ್ರಶಸ್ತಿಗೂ ಅವರು ಭಾಜನರಾಗಿದ್ದರು, 2010 ಮತ್ತು 2012 ರಲ್ಲಿ ಟಿ-20 ವರ್ಷದ ಆಟಗಾರ್ತಿಯಾಗಿ ಸಹ ಲಿಸಾ ಆಯ್ಕೆಯಾಗಿದ್ದರು.

**ವಿಶ್ವನಾಥನ್ ಆನಂದ್ ಗೆ ಪ್ರಶಸ್ತಿ**

ಜರ್ಮನಿಯಲ್ಲಿ ನಡೆಯುತ್ತಿರುವ ಗ್ರೆನ್ಕೆ ಕ್ಲಾಸಿಕ್ ಚೆಸ್ ಟೂರ್ನಿಯ 10 ನೇ ಹಾಗೂ ಕೊನೆಯ ಸುತ್ತಿನ ಪಂದ್ಯದಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್ ಗೆಲುವು ಸಾಧಿಸಿದರು. ಈ ವರ್ಷದಲ್ಲಿ ಆನಂದ್ ರವರು ಜಯಿಸಿದ ಮೊದಲ ಪ್ರಶಸ್ತಿ ಇದಾಗಿದೆ.

- ಜರ್ಮನಿಯ ಅರ್ಕಾಡಿಶ್ ನೇಡಿಶ್ ಅವರನ್ನು ಮಣಿಸಿದ ಆನಂದ್ ಒಟ್ಟು 6.5 ಪಾಯಿಂಟ್ ಗಳೊಂದಿಗೆ ಅಗ್ರಸ್ಥಾನ ಪಡೆದರು.
- ಆನಂದ್ ಗೆ ಪ್ರಮುಖ ಸ್ಪರ್ಧಿಯಾಗಿದ್ದ ಇಟಲಿಯ ಕರುವಾನಾ ಅವರು ಜರ್ಮನಿಯ ಡೇನಿಯಲ್ ಫ್ರಿಡನ್ ಜೊತೆ ಡ್ರಾ ಮಾಡಿಕೊಂಡ ಕಾರಣ ಆನಂದ್ ರವರ ಗೆಲುವಿನ ಹಾದಿ ಸುಗಮವಾಯಿತು.

**ಗೋಲ್ ಲೈನ್ ತಂತ್ರಜ್ಞಾನವನ್ನು (Goal Line Technology) ಅಳವಡಿಸಲು ಫಿಪಾ ನಿರ್ಧಾರ**

ಬ್ರೆಜಿಲ್ ನಲ್ಲಿ 2014 ರಲ್ಲಿ ನಡೆಯಲಿರುವ ಫಿಪಾ (FIFA) ವಿಶ್ವ ಪುಟ್ ಬಾಲ್ ಕಪ್ ನಲ್ಲಿ "ಗೋಲ್ ಲೈನ್" ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ನಿರ್ಧಾರವನ್ನು ಫಿಪಾ (Federation of International de Football Association) ಖಚಿತಪಡಿಸಿದೆ. ಅಲ್ಲದೇ ಮುಂದಿನ ದಿನಗಳಲ್ಲಿ ನಡೆಯುವ ಪ್ರೀಮಿಯರ್ ಲೀಗ್ ನಲ್ಲಿ ಈ ತಂತ್ರಜ್ಞಾನವನ್ನು ಪರಿಚಯಿಸುವುದಾಗಿ ಹೇಳಿದೆ. ಗೋಲ್ ಲೈನ್ ತಂತ್ರಜ್ಞಾನ ಅಳವಡಿಕೆಗೆ ಸಂಬಂಧಿಸಿದಂತೆ ಈಗಾಗಲೇ ನುರಿತ ಕಂಪನಿಗಳಿಂದ ಟೆಂಡರ್ ಕೂಡ ಕರೆಯಲಾಗಿದೆ

- ಈ ತಂತ್ರಜ್ಞಾನ ಜಾರಿಯಿಂದ ಪಂದ್ಯ ರೆಫ್ರಿಗಳಿಗೆ ತುಂಬಾ ಅನುಕೂಲವಾಗಲಿದೆ. ವಿವಾದತ್ಮಕ ಪಂದ್ಯಗಳಲ್ಲಿ ರೆಫ್ರಿಗಳು ಸರಿಯಾದ ನಿರ್ಧಾರ ಕೈಗೊಳ್ಳಲು ಇದು ಸಹಕಾರಿಯಾಗಲಿದೆ.

ಗೋಲ್ ಲೈನ್ ತಂತ್ರಜ್ಞಾನ:

- ಇದೊಂದು ನೂತನ ತಂತ್ರಜ್ಞಾನವಾಗಿದ್ದು, ಇದರ ಮೂಲಕ ಬಾಲ್ ಗೋಲ್ ಲೈನನ್ನು ಹಾದು ಹೋಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಎಲೆಕ್ಟ್ರಾನಿಕ್ ಉಪಕರಣದ ಮೂಲಕ ಸುಲಭವಾಗಿ ಪತ್ತೆಹಚ್ಚಬಹುದು. ಆದ್ದರಿಂದ ಪಂದ್ಯ ರೆಫ್ರಿಗೆ ಅದು ಗೋಲ್ ಅಥವಾ ಗೋಲ್ ಅಲ್ಲವೇ ಎಂಬುದನ್ನು ನಿರ್ಣಯಿಸಲು ಸಹಕಾರಿಯಾಗಲಿದೆ.

**ದುಬೈ ಟೆನ್ನಿಸ್: ಸಾನಿಯಾ-ಬೆಥನಿ ಜೋಡಿಗೆ ಜಯ**

ದುಬೈನಲ್ಲಿ ನಡೆಯುತ್ತಿರುವ ದುಬೈ ಡ್ಯೂಟಿ ಫ್ರೀ ಟೆನ್ನಿಸ್ ಚಾಂಪಿಯನ್ ಷಿಪ್ ನಲ್ಲಿ ಸಾನಿಯಾ ಮಿರ್ಜಾ ಮತ್ತು ಬೆಥನಿ ಮಟೆಕ್ ಸ್ಯಾಂಡ್ಸ್ ಜೋಡಿ ಡಬಲ್ಸ್ ವಿಭಾಗದಲ್ಲಿ ಗೆಲುವಿನ ನಗೆ ಬೀರಿದ್ದಾರೆ. ಫೈನಲ್ ಪಂದ್ಯದಲ್ಲಿ ಈ ಜೋಡಿ ರಷ್ಯಾದ ನಾದಿಯಾ ಪೇಟ್ರೋವಾ ಮತ್ತು ಸ್ಲೊವೇನಿಯಾದ ಕ್ಯಾಥರಿನಾ ಸ್ರೆಬಾಟ್ನಿಕ್ ವಿರುದ್ಧ 6-4, 2-6, 10-7 ರಲ್ಲಿ ಜಯಗಳಿಸಿತು.

- ಭಾರತ-ಆಮೇರಿಕಾದ ಈ ಜೋಡಿಗೆ ಪ್ರಸ್ತಕ ಸಾಲಿನಲ್ಲಿ ದೊರೆತ ಎರಡನೇ ಪ್ರಶಸ್ತಿ ಇದಾಗಿದೆ. ಜನವರಿಯಲ್ಲಿ ಈ ಜೋಡಿ ಬ್ರಿಸ್ಬೇನ್ ಇಂಟರ್ ನ್ಯಾಷನಲ್ ಟೂರ್ನಿಯಲ್ಲೂ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.
- ಭಾರತದ ಸಾನಿಯಾ ಮಿರ್ಜಾರವರಿಗೆ ಈ ಪ್ರಶಸ್ತಿ ತಮ್ಮ ವೃತ್ತಿ ಜೀವನದ 16 ನೇ ಡಬಲ್ಸ್ ಪ್ರಶಸ್ತಿಯಾಗಿದೆ.

**ಏಷ್ಯನ್ ಜೂನಿಯರ್ ಸ್ಕ್ವಾಷ್ ಚಾಂಪಿಯನ್ ಷಿಪ್ ಭಾರತದ ಬಾಲಕಿಯರಿಗೆ ಬಂಗಾರ**

ದಕ್ಷಿಣ ಕೋರಿಯಾದ ಸೋಲ್(Seol) ನಲ್ಲಿ ನಡೆದ 16 ನೇ ಏಷ್ಯನ್ ಜೂನಿಯರ್ ಚಾಂಪಿಯನ್ ಷಿಪ್ ನಲ್ಲಿ ಭಾರತದ ಬಾಲಕಿಯರ ತಂಡ ಬಂಗಾರದ ಪದಕ ಜಯಿಸಿದರು. ಫೈನಲ್ ಪಂದ್ಯದಲ್ಲಿ ಬಾಲಕಿಯರ ತಂಡ 2-1 ರಲ್ಲಿ ಹಾಂಕಾಂಗ್ ತಂಡವನ್ನು ಮಣಿಸಿತು.

- ಅನಾಕ ಅಲಂಕಮನಿ 11-4, 11-5, 11-6 ರಲ್ಲಿ ಹೂ ಕಾ ಪೋ ರವರ ವಿರುದ್ಧ ಮತ್ತು ಅಪರಾಜಿತಾ ಬಾಲಮುರಗನ್ 11-7, 11-9, 11-9 ರಲ್ಲಿ ಚೊಯ್ ಯೆನ್ ಶಾನ್ ವಿರುದ್ಧ ಗೆಲುವು ಸಾಧಿಸುವ ಮೂಲಕ ಭಾರತಕ್ಕೆ ಬಂಗಾರದ ಪದಕ ತಂದುಕೊಟ್ಟರು.

ಭಾರತದ ಬಾಲಕರಿಗೆ ಬೆಳ್ಳಿ ಪದಕ:

- ಸೆಮಿಫೈನಲ್ ಪಂದ್ಯದಲ್ಲಿ ಹಾಂಕಾಂಗ್ ನ್ನು ಸೋಲಿಸಿದ್ದ ಭಾರತ ತಂಡ, ಫೈನಲ್ ನಲ್ಲಿ 2-0 ರಲ್ಲಿ ಪಾಕಿಸ್ತಾನ ವಿರುದ್ಧ ಪರಾಭವಗೊಂಡಿತು. ಪಾಕಿಸ್ತಾನದ ಬಿಲಾಲ್ ಜಾಕೀರ್ 11-7, 11-6, 11-9 ರಲ್ಲಿ ದೀಪಕ್ ಮಿಶ್ರಾ ಎದುರು ಗೆಲುವು ಪಡೆದ ಆರಂಭಿಕ ಮುನ್ನಡೆಗಳಿಸಿಕೊಟ್ಟರು. ಸಯ್ಯದ್ ಅಲಿ ಮುಜ್ತಬಾ 11-5, 5-11, 9-11, 11-6, 11-7 ರಲ್ಲಿ ಮಹೇಶ್ ಮನಗಾಂವ್ಕರ್ ಅವರನ್ನು ಸೋಲಿಸುವ ಮೂಲಕ ಪಾಕಿಸ್ತಾನ ವಿಜಯಿಯಾಯಿತು.

**ಟೆಸ್ಟ್ ಪಂದ್ಯದಲ್ಲಿ 4000 ರನ್ ಗಡಿ ದಾಟಿದ ಮಹೇಂದ್ರ ಸಿಂಗ್ ದೋನಿ**

ಭಾರತ ಮತ್ತು ಆಸ್ಟ್ರೇಲಿಯಾ ದೇಶಗಳ ನಡುವೆ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡದ ನಾಯಕ "ಮಹಿ" ಪ್ರೇಕ್ಷಕರಿಗೆ ತಮ್ಮ ಅದ್ಭುತ ಬ್ಯಾಟಿಂಗ್ ಮೂಲಕ ರಸದೌತಣ ನೀಡಿದರು. ಕಾಂಗರೂ ಬಳಗದ ಆಟಗಾರರಿಗೆ ನೀರಿಳಿಸಿದ ಮಹಿ ತಮ್ಮ ಕ್ರಿಕೆಟ್ ಜೀವನದಲ್ಲಿ ಮೊದಲ ದ್ವಿಶತಕ ಬಾರಿಸಿದರು. ಅಲ್ಲದೇ ಈ ಸಾಧನೆಯ ಮೂಲಕ 4000 ರನ್ ಪೂರೈಸಿದ ವಿಶ್ವದ ಏಳನೇ ವಿಕೆಟ್ ಕೀಪರ್ ಎಂಬ ಕೀರ್ತಿಗೂ ಭಾಜನರಾದರು. ಈ ಪಂದ್ಯ ದೋನಿಗೆ ಅತಿ ಮಹತ್ವದಾಗಿದೆ ಏಕೆಂದರೆ

- ಅಡಮ್ ಗಿಲ್ ಕ್ರಿಸ್ಟ್, ಮಾರ್ಕ್ ಬೌಚರ್, ಅಲೆಕ್ ಸ್ಟುವರ್ಟ್, ಆ್ಯಂಡಿ ಪ್ಲವರ್, ಅಲನ್ ನಾಟ್ ಮತ್ತು ಇಯಾನ್ ಹೆಲಿ ನಂತರ ಟೆಸ್ಟ್ ಪಂದ್ಯಗಳಲ್ಲಿ 4000 ರನ್ ಗಳಿಸಿದ ಏಳನೇ ವಿಕೆಟ್ ಕೀಪರ್ ಮಹಿ. 74 ಪಂದ್ಯಗಳು, 116 ಇನ್ನಿಂಗ್ಸ್ ಗಳಿಂದ ಅವರು 4089 ರನ್ ಗಳಿಸಿದ್ದಾರೆ.
- ಭಾರತ ವಿಕೆಟ್ ಆಟಗಾರರ ಪೈಕಿ ಟೆಸ್ಟ್ ಪಂದ್ಯದಲ್ಲಿ ವೈಯುಕ್ತಿಕ ಅತಿ ಹೆಚ್ಚು ರನ್ ಗಳಿಸಿರುವ ಪಟ್ಟಿಯಲ್ಲಿ ದೋನಿ ಈಗ ಅಗ್ರಸ್ಥಾನದಲ್ಲಿದ್ದಾರೆ. ಇದುವರೆಗೂ ಬುದಿ ಕುಂದ್ರೇನ್ ರವರು ಇಂಗ್ಲೆಂಡ್ ವಿರುದ್ಧ 1964 ರಲ್ಲಿ ಗಳಿಸಿದ್ದ 192 ರನ್ ಗರಿಷ್ಟ ವೈಯುಕ್ತಿಕ ಮೊತ್ತವಾಗಿತ್ತು.
- ಭಾರತದ ನಾಯಕ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಪಂದ್ಯದಲ್ಲಿ ಗಳಿಸಿರುವ ಗರಿಷ್ಟ ಮೊತ್ತ ಇದಾಗಿದೆ. ಈ ಮುಂಚೆ ಅಜರುದ್ದೀನ್ ರವರು 1998 ರಲ್ಲಿ 163 ಗಳಿಸಿದ್ದೇ ಅತಿ ಹೆಚ್ಚು ರನ್ ಆಗಿತ್ತು.
- ವಿಕೆಟ್ ಕೀಪರ್ ನಾಯಕನಾಗಿರುವವರ ಪೈಕಿ ಟೆಸ್ಟ್ ಪಂದ್ಯದಲ್ಲಿ ಅತಿ ಹೆಚ್ಚುಗಳಿಸಿದ್ ಖ್ಯಾತಿಕೂಡ ದೋನಿಗೆ ಸಲ್ಲುತ್ತದೆ. 1998 ರಲ್ಲಿ ಅಲೆಕ್ ಸ್ಟುವರ್ಟ್ ರವರು ದಕ್ಷಿಣ ಆಫ್ರಿಕಾ ವಿರುದ್ಧಗಳಿಸಿದ್ದ 164 ರನ್ನು ಅತಿ ಹೆಚ್ಚು ರನ್ ಎಂದು ದಾಖಲಾಗಿತ್ತು.

## ಸುದ್ದಿಯಲ್ಲಿರುವ ವ್ಯಕ್ತಿ/ನೇಮಕ

**ಡಾ. ಎಸ್.ಕೆ.ಸರ್ಕಾರ್ ಜಲಸಂಪನ್ಮೂಲ ಸಚಿವಾಲಯದ ನೂತನ ಕಾರ್ಯದರ್ಶಿ**

- ಡಾ.ಎಸ್.ಕೆ.ಸರ್ಕಾರ್ (ಐಎಎಸ್) ರವರು ಇತ್ತೀಚಿಗೆ ಜಲಸಂಪನ್ಮೂಲ ಸಚಿವಾಲಯದ ನೂತನ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡರು. ಈ ಮುಂಚೆ ಇವರು ಪರ್ಸನಲ್ & ಟ್ರೈನಿಂಗ್ ಇಲಾಕೆಯಲ್ಲಿ ವಿಶೇಷ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಶ್ರೀ ಧ್ರುವ ವಿಜಯ್ ಸಿಂಗ್ ರವರ ನಿವೃತ್ತಿಯಿಂದ ತೆರವಾಗಿದ್ದ ಈ ಸ್ಥಾನವನ್ನು ಸರ್ಕಾರ್ ತುಂಬಲ್ಲಿದ್ದಾರೆ.
- ಇದೇ ವೇಳೆ ಶ್ರಿ ವಿಜಯ್ ಚಿಬ್ಬರ್ ರವರನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಶ್ರೀ ಎ.ಕೆ ಉಪಾಧ್ಯ ರವರ ನಿವೃತ್ತಿಯಿಂದ ಖಾಲಿಯಾಗಿದ್ದ ಈ ಹುದ್ದೆಯನ್ನು ವಿಜಯ್ ತುಂಬಲ್ಲಿದ್ದಾರೆ.

**ಇಂಡಿಯಾ ಸಿಮೆಂಟ್ಸ್ ನ ಉಪಾಧ್ಯಕ್ಷರಾಗಿ ದೋನಿ**

ಭಾರತ ಕ್ರಿಕೆಟ್ ತಂಡದ ನಾಯಕ ಮಹೇಂದ್ರ ಸಿಂಗ್ ದೋನಿ ರವರು ಇಂಡಿಯಾ ಸಿಮೆಂಟ್ಸ್ ಕಂಪನಿಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿರುವ ಎಸ್.ಶ್ರೀನಿವಾಸ್ ರವರ ಒಡೆತನದಲ್ಲಿರುವ ಇಂಡಿಯಾ ಸಿಮೆಂಟ್ಸ್ ಕಂಪನಿಗೆ, ಎಸ್.ಶ್ರೀನಿವಾಸನ್ ಸದ್ಯ ವ್ಯವಸ್ಥಾಪಕ ನಿರ್ದೇಶಕರೂ ಆಗಿದ್ದಾರೆ.

- ದೋನಿ ಸದ್ಯ ಇಂಡಿಯಾ ಸಿಮೆಂಟ್ಸ್ ಒಡೆತನದ ಐಪಿಎಲ್ ತಂಡ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ.
- ಈ ಹಿಂದೆ ದೋನಿ ಏರ್ ಇಂಡಿಯಾ ಕಂಪನಿಯ ಹುದ್ದೆಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇತ್ತೀಚೆಗಷ್ಟೇ ಈ ಹುದ್ದೆಗೆ ರಾಜೀನಾಮೆ ನೀಡಿದ್ದರು.

**ಭಾರತಿ ಏರಟೆಲ್ ನ ನೂತನ ಮ್ಯಾನೇಜಿಂಗ್ ಡೈರೆಕ್ಟರ್: ಮನೋಜ್ ಕೊಹ್ಲಿ**

ವಿಶ್ವದಲ್ಲಿ ಸದ್ಯ ನಾಲ್ಕನೇ ಸ್ಥಾನದಲ್ಲಿರುವ ಭಾರತಿ ಏರಟೆಲ್ ದೂರ ಸಂಪರ್ಕ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಮನೋಜ್ ಕೊಹ್ಲಿ ನೇಮವಾಗಿದ್ದರೆ.

- ಕಾರ್ಗಿಲ್ ನಲ್ಲಿ ಇತ್ತೀಚಿಗೆ ತನ್ನ ಸೇವೆಯನ್ನು ಏರಟೆಲ್ ಆರಂಭಿಸಿದೆ. ಈ ಮೂಲಕ BSNL ನಂತರ ಕಾರ್ಗಿಲ್ ನಲ್ಲಿ ಸೇವೆಯನ್ನು ಆರಂಭಿಸಿದ ಎರಡನೇ ದೂರ ಸಂಪರ್ಕ ಕಂಪನಿ ಮತ್ತು ಮೊದಲ ಖಾಸಗಿ ಕಂಪನಿ ಏರ್ ಟೆಲ್. ಅಲ್ಲದೇ, ಇತ್ತೀಚಿಗೆ ಮಹಿಳೆಯರ ಸುರಕ್ಷತೆಗಾಗಿ ತುರ್ತು ಕರೆಯನ್ನು ಆರಂಭಿಸಿದ ಕೀರ್ತಿ ಏರ್ ಟೆಲ್ ಗೆ ಸಲ್ಲುತ್ತದೆ.

ಏರ್ ಟೆಲ್ ನಿಂದ ಮಹಿಳೆಯರ ತುರ್ತು ಸೇವೆ:

- ಏರ್ ಟೆಲ್ ಆರಂಭಿಸಿರುವ ಈ ತುರ್ತು ಸೇವೆಯಲ್ಲಿ ಈ ಮೊದಲೇ ನಿಗದಿ ಪಡಿಸಿರುವ ಸ್ನೇಹಿತರ ಅಥವಾ ಸಂಬಂಧಿಗಳ 10 ನಂಬರ್ ಗಳ ಸಮೂಹಕ್ಕೆ ತುರ್ತು ಸಂದೇಶ ರವಾನೆಯಾಗುತ್ತದೆ. ಉದಾಹರಣೆಗೆ ಯಾರಾದರೂ ಅಪಾಯದಲ್ಲಿದ್ದಾಗ SMS HELP ಎಂದು 55100 ಗೆ ಮೆಸೇಜ್ ಕಳುಹಿಸಿದರೆ ಅವರಿರುವ ಜಾಗದ ವಿವರ 10 ನಂಬರ್ ಗಳಿಗೆ ರವಾನೆಯಾಗುತ್ತದೆ. 24 X 7 ಕಾರ್ಯನಿರ್ವಹಿಸುವ ಈ ಯೋಜನೆಯು ಸದ್ಯ ಕೊಲ್ಕತ್ತ, ಪಶ್ಚಿಮ ಬಂಗಾಳ ಮತ್ತು ಒರಿಸ್ಸ ವೃತ್ತಗಳಲ್ಲಿ ಮಾತ್ರ ಜಾರಿಗೊಳಿಸಲಾಗಿದೆ.

**ತೈವಾನ್ ಪ್ರಧಾನಿ ಸಿಯಾನ್ ಚೆನ್ ರಾಜೀನಾಮೆ**

ಆರ್ಥಿಕ ಹಿಂಜರಿತದ ಪ್ರಭಾವವನ್ನು ಸಮರ್ಥವಾಗಿ ಎದುರಿಸುವಲ್ಲಿ ವಿಫಲರಾಗಿದ್ದರೆ ಎನ್ನುವ ಟೀಕೆಗೆ ಒಳಗಾಗಿರುವ ತೈವಾನ್ ಪ್ರಧಾನಿ ಸಿಯಾನ್ ಚೆನ್ ರವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆರ್ಥಿಕ ತಜ್ಞರು ಆಗಿದ್ದ ಚೆನ್, ಆರೋಗ್ಯದಲ್ಲಿ ಏರುಪೇರು ಆಗಿರುವುದರಿಂದ ಜವಾಬ್ದಾರಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಆದ ಕಾರಣ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡುತ್ತಿರುವುದಾಗಿ ಹೇಳಿದ್ದಾರೆ.

- ಅಧ್ಯಕ್ಷ ಮಾ ಯಿಂಗ್ ಜಿಯೋ ರವರು ರಾಜೀನಾಮೆಯನ್ನು ಅಂಗೀಕರಿಸಿದ್ದು, ಉಪಪ್ರಧಾನಿ ಜಿಯಾಂಗ್ ಯಿ-ಹುವಾ ರವರು ಇವರ ಸ್ಥಾನವನ್ನು ತುಂಬಲ್ಲಿದ್ದಾರೆ.
- 2012 ರಲ್ಲಿ ಮಾ ಯಿಂಗ್ ಎರಡನೇ ಭಾರಿಗೆ ಅಧ್ಯಕ್ಷರಾಗಿ ಪುನರ್ ಆಯ್ಕೆಯಾದ ಬಳಿಕ 63 ವರ್ಷದ ಚೆನ್ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

**ಪುದುಚೇರಿ ಮಾಜಿ ಮುಖ್ಯಮಂತ್ರಿ ಪಿ.ಶಣ್ಮುಗಂ ನಿಧನ**

ಹಿರಿಯ ರಾಜಕಾರಣಿ ಹಾಗೂ ಪುದುಚೇರಿಯ ಮಾಜಿ ಮುಖ್ಯಮಂತ್ರಿ ಪಿ.ಶಣ್ಮುಗಂ (86) ನಿಧನರಾದರು. ಸ್ನಾನದ ಕೊಠಡಿಯಲ್ಲಿ ಜಾರಿ ಬಿದ್ದ ಕಾರಣ ಅವರ ತಲೆಗೆ ತೀವ್ರ ಪೆಟ್ಟಾಗಿ ರಕ್ತ ಹೆಪ್ಪುಗಟ್ಟಿದ್ದರಿಂದ ಅವರು ಆಸ್ಪತ್ರೆಯಲ್ಲಿ ವಿಧಿವಶರಾದರು. ಅವರ ನಿಧನಕ್ಕೆ ಪುದುಚೇರಿ ಸರ್ಕಾರ ಸಂತಾಪ ಸೂಚಿಸಿದ್ದು, ಮೂರು ದಿನಗಳ ಕಾಲ ಶೋಕ ಆಚರಿಸಲು ಆದೇಶಿಸಲಾಗಿದೆ.

ಪಿ.ಶಣ್ಮುಗಂ ಕಿರುಪರಿಚಯ:

- ಅವಿವಾಹಿತರಾಗಿಯೇ ಉಳಿದಿದ್ದ ಶಣ್ಮುಗಂ ರವರು 1950 ರಲ್ಲೇ ರಾಜಕೀಯ ಪ್ರವೇಶಿಸಿದ್ದರು.
- 1969-1973 ರವರೆಗೆ ವಿರೋಧ ಪಕ್ಷದ ನಾಯಕನಾಗಿ ಅವರು ಕಾರ್ಯನಿರ್ವಹಿಸಿದ್ದರು.
- 1980 ರಿಂದ ಸತತವಾಗಿ ಮೂರು ಬಾರಿ ಪುದುಚೇರಿಯಿಂದ ಲೋಕಸಭೆಗೆ ಅವರು ಆಯ್ಕೆಯಾಗಿದ್ದರು.
- ಪುದುಚೇರಿ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಮುಖ ಹುದ್ದೆಯಲ್ಲಿ ಸತತವಾಗಿ 33 ವರ್ಷ ದುಡಿದ್ದಿದ್ದರು.
- 2000-2001 ರ ಅವಧಿಯಲ್ಲಿ ಆರು ತಿಂಗಳ ಕಾಲ ಎರಡು ಬಾರಿ ಮುಖ್ಯ ಮಂತ್ರಿ ಹುದ್ದೆಯನ್ನು ಅಲಂಕರಿಸಿದ್ದರು.
- ಆರೋಗ್ಯ ದೃಷ್ಟಿಯಿಂದ 2008 ರಲ್ಲಿ ರಾಜಕೀಯ ಕ್ಷೇತ್ರ ನಿವೃತ್ತಿ ಘೋಷಿಸಿದ್ದರು. ಪುದುಚೇರಿ ಯೂನಿವರ್ಸಿಟಿ, ಕಾರೈಕಲ್ ಬಂದರು ನಿರ್ಮಾಣದಲ್ಲಿ ಅವರ ಕೊಡುಗೆ ಅಪಾರ.

**ಚೀನಾ ಸಂಸತ್ತಿಗೆ ಆಯ್ಕೆಯಾದ ಜಾಕಿಚಾನ್ ಮತ್ತು ಮೊ ಯಾನ್**

ಪ್ರಸಿದ್ಧ ಚಿತ್ರ ನಟ ಜಾಕಿ ಚಾನ್ ಮತ್ತು ಚೀನಾದ ಮೊದಲ ನೊಬೆಲ್ ಪ್ರಶಸ್ತಿ ವಿಜೇತ ಮೊ ಯಾನ್ ರವರನ್ನು "ದಿ ಚೀನೀಸ್ ಪ್ಯೂಪಲ್ಸ್ ಪೊಲಿಟಿಕಲ್ ಕನ್ಸಲ್ ಟೇಟಿವ್ ಪಾರ್ಟಿ" ಯು (The Chinese People's Political Consultative Party) ಸಂಸತ್ತಿಗೆ ಸದಸ್ಯರನ್ನಾಗಿ ಆಯ್ಕೆ ಮಾಡಿದೆ. ಒಟ್ಟು 2,237 ಹೊಸ ಸದಸ್ಯರನ್ನು CPPCP ಯ ರಾಷ್ಟ್ರೀಯ ಸಮಿತಿಗೆ ಚೀನಾದ ನೂತನ ನಾಯಕರಾದ ಕ್ಸಿ ಜಿನ್ ಪಿಂಗ್ (Xi Jinping) ರವರು ಆಯ್ಕೆ ಮಾಡಿದ್ದಾರೆ.

- ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವ್ಯಕ್ತಿಗಳನ್ನು ಚುನಾವಣೆ ಇಲ್ಲದೇ ಆಯ್ಕೆ ಮಾಡಲಾಗಿದ್ದು, ಇವರಲ್ಲಿ ಕಮ್ಯೂನಿಸ್ಟ್ ಪಕ್ಷದ ಸುಮಾರು 837 ಜನರು ಇರುವುದಾಗಿ ಮೂಲಗಳು ತಿಳಿಸಿವೆ.
- ಮೊ ಯಾನ್ ಚೀನಾದ ಪ್ರಸಿದ್ಧ ಕಾದಂಬರಿಕಾರ ಮತ್ತು ಸಣ್ಣ ಕತೆಗಳಲ್ಲಿ ಪ್ರಸಿದ್ಧಿ ಹೊಂದಿರುವ ಚೀನಿ ಲೇಖಕ. ಇವರ "With Hallucinatory realism merges folk tales, history and the contemporary" ಗೆ 2012 ರಲ್ಲಿ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ದೊರೆತಿದೆ. ಅಲ್ಲದೇ ಈ ಪ್ರಶಸ್ತಿಯನ್ನು ಗೆದ್ದ ಚೀನಾದ ಮೊದಲ ಪ್ರಜೆ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. "Red Sorghum", "Happy Times", The Sun has Ears" ಇವರ ಇತರೆ ಪ್ರಸಿದ್ಧ ಕೃತಿಗಳು.

## ಸಾಲಿಸಿಟರ್ ಜನರಲ್ ಸ್ಥಾನಕ್ಕೆ ರಾಜೀನಾಮೆ ನೀಡಿದ ನಾರಿಮನ್

ಹಿರಿಯ ವಕೀಲ ರೋಹಿಂಟನ್ ನಾರಿಮನ್ ಸಾಲಿಸಿಟರ್ ಜನರಲ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ನಾರಿಮನ್ ರಾಜೀನಾಮೆಗೆ ನಿಖರ ಕಾರಣ ತಿಳಿಯದ್ದಿದ್ದರು, ಕಾನೂನು ಸಚಿವ ಅಶ್ವಿನ್ ಕುಮಾರ್ ರವರೊಂದಿಗಿನ ವೈಮನಸೇ ರಾಜೀನಾಮೆಗೆ ಕಾರಣ ಎಂದು ಶಂಕಿಸಲಾಗಿದೆ.

- 2011 ರ ಜುಲೈ 14 ರಂದು ಎಸ್.ಜಿ.ಗೋಪಾಲ್ ಸುಬ್ರಮಣ್ಯಂ ಸಾಲಿಸಿಟರ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಕಾರಣ, 2011 ರ ಜುಲೈ 23 ರಂದು ನಾರಿಮನ್ ರವರನ್ನು ಈ ಸ್ಥಾಮಕ್ಕೆ ನೇಮಕ ಮಾಡಲಾಗಿತ್ತು.

ಸಾಲಿಸಿಟರ್ ಜನರಲ್ ಆಫ್ ಇಂಡಿಯಾ:

- ಸಾಲಿಸಿಟರ್ ಜನರಲ್ ರವರು ಭಾರತದ ಎರಡನೇ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಭಾರತದ ಪ್ರಥಮ ಕಾನೂನು ಅಧಿಕಾರಿಗಳಾದ ಅಟಾರ್ನಿ ಜನರಲ್ ರವರಿಗೆ ಸಹಾಯ ಮಾಡುವುದು ಮತ್ತು ಭಾರತ ಒಕ್ಕೂಟದ ಪರವಾಗಿ ಸುಪ್ರೀಂ ಕೋರ್ಟನಲ್ಲಿ ಪ್ರತಿನಿಧಿಸುವುದು ಇವರ ಮುಖ್ಯ ಕಾರ್ಯವಾಗಿದೆ. ಸಾಲಿಸಿಟರ್ ಜನರಲ್ ಗಳ ನೆರವಿಗಾಗಿ ಇವರ ಅಡಿಯಲ್ಲಿ ಹೆಚ್ಚುವರಿ ಸಾಲಿಸಿಟರ್ (Additional Solicitor) ಜನರಲ್ ಗಳು ಕಾರ್ಯನಿರ್ವಹಿಸುತ್ತಾರೆ.
- ಭಾರತ ಸಂವಿಧಾನದ 76 ನೇ ಪರಿಚ್ಛೇದವೂ ಅಟಾರ್ನಿ ಜನರಲ್ ರವರಿಗೆ ಸಂಬಂಧಿಸಿದೆ. ಅಟಾರ್ನಿ ಜನರಲ್ ಹುದ್ದೆಯನ್ನು ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ಆದರೆ ನಮ್ಮ ಸಂವಿಧಾನದಲ್ಲಿ ಸಾಲಿಸಿಟರ್ ಜನರಲ್ ಹುದ್ದೆಯ ಬಗ್ಗೆ ಎಲ್ಲೂ ತಿಳಿಸಲಾಗಿಲ್ಲ.

## ವಾಸುದೇವ ರಾವ್ IGCAR ನ ನೂತನ ನಿರ್ದೇಶಕರು

ಇಂದಿರಾ ಗಾಂಧಿ ಸೆಂಟರ್ ಫಾರ್ ಅಟಾಮಿಕ್ ರಿಸರ್ಚ್ (IGCAR) ನ ನಿರ್ದೇಶಕರಾಗಿ ವಾಸುದೇವ್ ರಾವ್ ರವರನ್ನು ನೇಮಕ ಮಾಡಲಾಗಿದೆ.

- ಇಂದಿರಾ ಗಾಂಧಿ ಸೆಂಟರ್ ಫಾರ್ ಅಟಾಮಿಕ್ ರಿಸರ್ಚ್ ಇದು ತಮಿಳುನಾಡಿನ ಕಲ್ಪಕಂ ನಲ್ಲಿದ್ದು, ಫಾಸ್ಟ್ ಬ್ರೀಡರ್ ರಿಯಾಕ್ಟರ್ (Fast Breeder Reactor) ಗೆ ಸಂಬಂಧಿಸಿದಂತೆ ವೈಜ್ಞಾನಿಕ ಸಂಶೋಧನೆ ಮತ್ತು ಮುಂದುವರೆದ ತಂತ್ರಜ್ಞಾನದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ.

**ಸಿಎಂಯು ನ ಅಧ್ಯಕ್ಷರಾಗಿ ಭಾರತ ಮೂಲದ ಡಾ.ಸುಬ್ರಾ ಸುರೇಶ್ ನೇಮಕ**

ಅಮೆರಿಕಾದ ಪ್ರತಿಷ್ಠಿತ ಕಾರ್ನೆಜಿ ಮೆಲನ್ ಯೂನಿವರ್ಸಿಟಿಯ (ಸಿಎಂಯು) ಅಧ್ಯಕ್ಷ ಹುದ್ದೆಯನ್ನು ವಹಿಸಿಕೊಳ್ಳುವ ಸಲುವಾಗಿ ಡಾ.ಸುಬ್ರಾ ಸುರೇಶ್ ಅವರು ಅಧ್ಯಕ್ಷ ಬರಾಕ್ ಒಬಾಮ ಅವರ ಉನ್ನತ ವಿಜ್ಞಾನ ಅಧಿಕಾರಿ ಹುದ್ದೆಗೆ ರಾಜೀನಾಮೆಯನ್ನು ನೀಡಿದ್ದಾರೆ. ಸುರೇಶ್ ರವರ ರಾಜೀನಾಮೆಯನ್ನು ಅಂಗೀಕರಿಸಿರುವ ಅಧ್ಯಕ್ಷ ಒಬಾಮ ರವರು ರಾಷ್ಟ್ರೀಯ ವಿಜ್ಞಾನ ಫೌಂಡೇಶನ್ ನ ನಿರ್ದೇಶಕರಾಗಿ ಸುರೇಶ್ ಸಲ್ಲಿಸಿರುವ ಸೇವೆಯನ್ನು ಶ್ಲಾಘಿಸಿದ್ದಾರೆ.

- 2001 ರಿಂದೀಚೆಗೆ ರಾಷ್ಟ್ರೀಯ ವಿಜ್ಞಾನ ಫೌಂಡೇಶನ್ ನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಸುರೇಶ್ ಅವರು ಹಲವಾರು ಮಹತ್ತರ ವೈಜ್ಞಾನಿಕ ಸಂಶೋಧನೆಗಳಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ.
- 113 ವರ್ಷಗಳ ಇತಿಹಾಸ ಹೊಂದಿರುವ ಕಾರ್ನೆಜಿ ಮೆಲನ್ ಯೂನಿವರ್ಸಿಟಿಯ ಪ್ರತಿಷ್ಠಿತ ಸಿಎಂಯುನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸುರೇಶ್ ರವರು ಜುಲೈ 1 ರಿಂದ ಅಧಿಕಾರ ಸ್ವೀಕರಿಸಲಿರುವರು. ಈ ವಿಶ್ವ ವಿದ್ಯಾಲಯದ ಅಧ್ಯಕ್ಷರಾಗಿ ಕಳೆದ 16 ವರ್ಷಗಳಿಂದ ಸೇವೆ ಸಲ್ಲಿಸಿದ ಡಾ.ಜರೇಡ್ ಕೊಹನ್ ಅವರ ಉತ್ತರಾಧಿಕಾರಿಯಾಗಿ ಸುರೇಶ್ ರವರು ಅಧಿಕಾರವಹಿಸಿಕೊಳ್ಳಲ್ಲಿದ್ದಾರೆ.

**ಉತ್ತರ ಖಂಡಾದ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ ಬಿಂದ್ರ ನೇಮಕ**

ಕಾಂಗ್ರೆಸ್ ನ ಹಿರಿಯ ನಾಯಕರಾದ 59 ವರ್ಷದ ನಾರಿಂದರ್ ಸಿಂಗ್ ಬಿಂದ್ರಾ ರವರನ್ನು ಉತ್ತರ ಖಂಡಾದ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಬಿಂದ್ರರವರು ಹೇಮಕುಂಡ ಸಾಹೀಬ್ ಟ್ರಸ್ಟ್ ನ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

- ಇತ್ತೀಚಿಗೆ ದೆಹಲಿಯ ಪಾರ್ಮ್ ಹೌಸ್ ನಲ್ಲಿ ನಡೆದ ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪ ಹೊತ್ತಿದ್ದ ಸುಖದೇವ್ ಸಿಂಗ್ ನಾಮದಾರಿ ರವರನ್ನು ಈ ಸ್ಥಾನದಿಂದ ಉಚ್ಚಾಟನೆಗೊಳಿಸದ ಕಾರಣ ಈ ಸ್ಥಾನ ತೆರವಾಗಿತ್ತು.

ಜಸ್ಟೀಸ್. ರಾಜೇಶ್ ಕುಮಾರ್ ಅಗರವಾಲ್

ಮದ್ರಾಸ್ ಹೈಕೋರ್ಟನ ನ್ಯಾಯಾಧೀಶರಾಗಿ ಜಸ್ಟೀಸ್. ರಾಜೇಶ್ ಕುಮಾರ್ ಅಗರವಾಲ್ ರವರನ್ನು ನೇಮಕ ಮಾಡಲಾಗಿದೆ. ಮದ್ರಾಸ್ ಹೈ ಕೋರ್ಟ್ ನ ನ್ಯಾಯಮೂರ್ತಿಗಳ ಪೈಕಿ ಹಿರಿಯರೆನಿಸಿರುವ ಇವರನ್ನು ಹಂಗಾಮಿ ಮುಖ್ಯ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುವಂತೆ ಆದೇಶದಲ್ಲಿ ಸೂಚಿಸಿದೆ. ತಮಿಳುನಾಡಿನ ರಾಜ್ಯಪಾಲರಾದ ಕೆ. ರೋಸಯ್ಯರವರು ಅಗರವಾಲ್ ರವರಿಗೆ ಪ್ರಮಾಣ ವಚನ ಭೋದಿಸಿದರು. ಇವರ ನೇಮಕಾತಿಯಿಂದ ಮದ್ರಾಸ್ ಹೈಕೋರ್ಟ್ ನಲ್ಲಿ ನ್ಯಾಯಾಧೀಶರ ಸಂಖ್ಯೆ 49 ಕ್ಕೆ ಹೇರಿದೆ.

**ಅಂಗವಿಕಲ ಹಕ್ಕು ಹೋರಾಟಗಾರ ರಾಹುಲ್ ಚೆರಿಯನ್ ನಿಧನ**

ಸಾಮಾಜಿಕ ಮತ್ತು ಮಾನವ ಹಕ್ಕು ಹೋರಾಟಗಾರ ಹಾಗೂ ಅಂಗವಿಕಲರ ಹಕ್ಕು ಮತ್ತು ಸಂಬಂಧಿಸಿದ ಕಾಯ್ದೆಗಳ ರಚಿಸುವಲ್ಲಿ ಶ್ರಮಿಸಿದ್ದ ರಾಹುಲ್ ಚೆರಿಯನ್ ರವರು ನಿಧನರಾದರು. ಅಪರಿಚಿತ ಸೋಂಕಿನಿಂದ ಬಳುತ್ತಿದ್ದ 39 ವರ್ಷ ವಯಸ್ಸಿ ರಾಹುಲ್ ಚೆರಿಯನ್ ರವರು ಚಿಕತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದರು.

- ಬೆಂಗಳೂರಿನ ನ್ಯಾಷನಲ್ ಲಾ ಯೂನಿವರ್ಸಿಟಿಯಿಂದ ಪಧವಿಯನ್ನು ಗಳಿಸಿದ್ದ ಅವರು ತಮ್ಮ ಸಹಪಾಠಿಯೊಂದಿಗೆ ಸೇರಿ Inclusive Planet Centre for Disability and Policy ಎಂಬ NGO ಸಂಸ್ಥೆಯನ್ನು ಹುಟ್ಟು ಹಾಕಿದರು. ರಾಷ್ಟ್ರ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಅಂಗವಿಕಲರಿಗೆ ಸಂಬಂಧಿಸಿದ ಕಾನೂನು ರಚಿಸುವಲ್ಲಿ ಈ ಸಂಸ್ಥೆ ಗಣನೀಯ ಸೇವೆ ಸಲ್ಲಿಸಿತ್ತು.
- ದೃಷ್ಟಿ ಮಾಂದ್ಯರಿಗೆಂದೆ ರಾಹುಲ್ ರವರು inclusiveplanet.com ಎಂಬ ಸಾಮಾಜಿಕ ತಾಣವನ್ನು ಸ್ಥಾಪಿಸಿದ್ದರು. ಬೆಂಗಳೂರಿನ ಸೆಂಟರ್ ಫಾರ್ ಇಂಟರ್ ನೆಟ್ ಅಂಡ್ ಸೊಸೈಟಿಯಲ್ಲಿ ರಾಹುಲ್ ರವರು ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು.

**ಸುದ್ದಿಯಲ್ಲಿರುವ ವ್ಯಕ್ತಿ: ಪ್ರವೀಣ್ ತೊಗಾಡಿಯಾ**

ವಿಶ್ವ ಹಿಂದೂ ಪರಿಷತ್ತ್ ನ ಮುಖಂಡರಾಗಿರುವ ಪ್ರವೀಣ್ ತೊಗಾಡಿಯಾ ರವರು ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಭೂಕಾರ್ ನಗರದಲ್ಲಿ ಜನವರಿ 22 ರಂದು ನಡೆದ ಬಹಿರಂಗ ಸಭೆಯಲ್ಲಿ ಮಜ್ಲೀಸ್-ಇ-ಇತ್ತೇಹಾದುಲ್ ಮುಸ್ಲಿಮೀನ್ ಶಾಸಕ ಅಕ್ಬರುದ್ದೀನ್ ಓವೈಸಿ ಮತ್ತು ನಿರ್ದಿಷ್ಟ ಕೋಮಿನ ವಿರುದ್ಧ ಹರಿಹಾಯ್ದಿದ್ದರು. ಅವರ ಭಾಷಣದ ವಿಡಿಯೋವನ್ನು ಅಂತರ್ಜಾಲದಲ್ಲಿ ಹರಿಬಿಟ್ಟ ಬಳಿಕ ಅವರ ವಿರುದ್ಧ ಕ್ರಮಕ್ಕೆ ತೀವ್ರ ಒತ್ತಾಯ ಕೇಳಿ ಬಂದಿತ್ತು.

- ಕೋಮು ಭಾವನಕ್ಕೆ ದಕ್ಕೆ ಉಂಟು ಮಾಡುವ ಹೇಳಿಕೆ ನೀಡಿರುವ ತೊಗಾಡಿಯಾ ವಿರುದ್ಧ ಮಹಾರಾಷ್ಟ್ರ ಪೋಲಿಸರು ಭಾರತೀಯ ದಂಡ ಸಂಹಿತೆ ಸೆಕ್ಷನ್ 153 ಮತ್ತು 505 ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

**ಅಫ್ಜಲ್ ಗುರು ಗೆ ಗಲ್ಲು ಶಿಕ್ಷೆ**

ಸಂಸತ್ ಭವನದ ಮೇಲೆ ಗುಂಡು ಹಾರಿಸಿ ಶಿಕ್ಷೆಗೆ ಗುರಿಯಾಗಿದ್ದ ಜಮ್ಮು ಮತ್ತು ಕಾಶ್ಮೀರ ಮೂಲದ ಅಫ್ಜಲ್ ಗುರುವನ್ನು ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಇಂದು ತಿಹಾರ್ ಜೈಲಿನಲ್ಲಿ ಗಲ್ಲಿಗೆ ಏರಿಸಲಾಯಿತು.

- ಜೈಶ್-ಇ-ಮೊಹಮ್ಮದ್ ಸಂಘಟನೆಯ ಕಾರ್ಯಕರ್ತನಾದ ಅಫ್ಜಲ್ ಡಿಸೆಂಬರ್ 13, 2001 ರಂದು ಸಂಸತ್ ಭವನದ ಮೇಲೆ ದಾಳಿ ನಡೆಸಿದ್ದನು. ದಾಳಿಯಲ್ಲಿ ೯ ಜನ ಭದ್ರತಾ ಸಿಬ್ಬಂದಿಗಳು ಮೃತಪಟ್ಟಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯ ಅಫ್ಜಲ್ ಗೆ ಗಲ್ಲು ಶಿಕ್ಷೆ ನೀಡಿ ಆದೇಶ ಹೊರಡಿಸಿತ್ತು.
- ವಿಶೇಷ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಅಫ್ಜಲ್ ಸುಪ್ರೀಂ ಮೊರೆ ಹೋಗಿದ್ದ. ಆದರೆ ಸುಪ್ರೀಂ ಕೋರ್ಟ್ ವಿಶೇಷ ನ್ಯಾಯಾಲದ ಆದೇಶವನ್ನು ಎತ್ತಿಹಿಡಿಯುವ ಮೂಲಕ ಅಫ್ಜಲ್ ಗೆ ಗಲ್ಲು ಶಿಕ್ಷೆ ಜಾರಿಗೊಳಿಸಿತ್ತು.
- ಈ ಮಧ್ಯೆ, ಅಫ್ಜಲ್ ರಾಷ್ಟ್ರಪತಿಗಳಿಗೆ ಕ್ಷಮಾದಾನ ಕೋರಿ ಅರ್ಜಿ ಸಲ್ಲಿಸಿದ್ದ. ಆದರೆ ಪ್ರಣವ್ ಮುಖರ್ಜಿಯವರು ಮನವಿಯನ್ನು ಜನವರಿ ೬ ರಂದು ತಿರಸ್ಕೃತಗೊಳಿಸಿದ್ದರು.
- ಅಫ್ಜಲ್ ಗುರುವನ್ನು ಗಲ್ಲಿಗೆ ಹಾಕುವಂತೆ ಅನೇಕ ಸಂಘಟನೆಗಳು, ವಿರೋಧ ಪಕ್ಷಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು.

**ಮೋಹನ್ ಪರಾಶನ್ ನೂತನ ಸಾಲಿಸಿಟರ್ ಜನರಲ್**

ಕಳೆದ 9 ವರ್ಷಗಳಿಂದ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಮೋಹನ್ ಪರಾಶನ್ ರವರನ್ನು ಸಾಲಿಸಿಟರ್ ಜನರಲ್ ಹುದ್ದೆಗೆ ನೇಮಕ ಮಾಡಲಾಗಿದೆ.

- ಇತ್ತೀಚೆಗೆ ರೋಹಿಂಟನ್ ನಾರಿಮನ್ ರವರು ರಾಜೀನಾಮೆ ನೀಡಿದ್ದರಿಂದ ಈ ಹುದ್ದೆ ತೆರವಾಗಿತ್ತು.

**ಖ್ಯಾತ ಟೆಬಲ್ ಟೆನ್ನಿಸ್ ಆಟಗಾರ ಜುಯಾಂಗ್ ಜೆಡಾಂಗ್ (Zhuang Zedong) ನಿಧನ**

ಚೀನಾದ ಹೆಸರಾಂತ ಟೆಬಲ್ ಟೆನ್ನಿಸ್ ಆಟಗಾರ ಜುಯಾಂಗ್ ಜೆಡಾಂಗ್ ನಿಧನರಾದರು. ದೀರ್ಘಕಾಲದ ಕ್ಯಾನ್ಸರ್ ನಿಂದ ಬಳಲುತ್ತಿದ್ದ ಅವರಿಗೆ 72 ವರ್ಷ ವಯಸ್ಸಾಗಿತ್ತು.

- ಜುಯಾಂಗ್ ರವರು ಮೂರ ಬಾರಿ ವಿಶ್ವ ಟೆಬಲ್ ಟೆನ್ನಿಸ್ ಚಾಂಪಿಯನ್ ಆಗಿದ್ದರು. 1960 ರ ದಶಕದಲ್ಲಿ ಅವರು ಅನೇಕ ಸರಣಿ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದರು.
- 1971 ರಲ್ಲಿ ಸುದ್ದಿಯಲ್ಲಿದ್ದ ಪಿಂಗ್ ಪಾಂಗ್ ರಾಜನೀತಿಯನ್ನು ರೂಪಿಸುವಲ್ಲಿ ಜುಯಾಂಗ್ ಪ್ರಮುಖ ಪಾತ್ರವಹಿಸಿದ್ದರು. ಚೀನಾ ಮತ್ತು ಅಮೆರಿಕಾ ನಡುವೆ ಟೆನ್ನಿಸ್ ಆಟಗಾರರ ವಿನಿಮಯ ಮಾಡಿಕೊಂಡು ಎರಡು ದೇಶಗಳ ಬಾಂಧವ್ಯ ವೃದ್ದಿಗೊಳಿಸುವ ನೀತಿಯೇ ಪಿಂಗ್ ಪಾಂಗ್ ರಾಜನೀತಿ.

**ನಾಟೋ-ಅಂತರ್ ರಾಷ್ಟ್ರೀಯ ಭದ್ರತಾ ಸಹಾಯಕ ಪಡೆಯ ಕಮಾಂಡರ್ ಆಗಿ ಜೋಸೆಪ್ ಡನ್ ಫೋರ್ಡ್**

ಅಮೆರಿಕಾದ ಜನರಲ್ ಜೋಸೆಫ್ ಡನ್ ಫೋರ್ಡ್ ರವರು ಅಪ್ಘಾನಿಸ್ತಾನದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ನಾಟೋ (NATO) ದ ಅಂತರ್ ರಾಷ್ಟ್ರೀಯ ಭದ್ರತಾ ಸಹಾಯಕ ಪಡೆಯ (International Security Assistance Force) ಕಮಾಂಡರ್ ಆಗಿ ನೇಮಕಗೊಂಡಿದ್ದಾರೆ.

- ಜಾನ್ ಅಲ್ಲೆನ್ ರವರಿಂದ ತೆರವಾಗಿದ್ದ ಸ್ಥಾನವನ್ನು ಡನ್ ಪೋರ್ಡರವರು ತುಂಬಲ್ಲಿದ್ದಾರೆ. ಜಾನ್ ಅಲೆನ್ ರವರು ಈ ಹುದ್ದೆಯಲ್ಲಿ ದೀರ್ಘಕಾಲ ಅಧಿಕಾರ ನಡೆಸಿದ ಕಮಾಂಡರ್ ಎನಿಸಿದ್ದಾರೆ.
- ಅಮೆರಿಕಾದ ಸೇನೆಯಲ್ಲಿ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸಿರುವ ಡನ್ ಪೋರ್ಡ್ ರವರು ಮುಂದಿನ ಎರಡು ವರ್ಷಗಳ ಕಾಲ ISAF ನ್ನು ಮುನ್ನಡೆಸಲ್ಲಿದ್ದಾರೆ.

**ಪೋಪ್ ಹುದ್ದೆಗೆ ರಾಜೀನಾಮೆ ನೀಡಲಿರುವ ಪೋಪ್ ಬೆನೆಡಿಕ್ಟ್-IX**

ಕ್ರೈಸ್ತರ ಪರಮೋಚ್ಚ ಧರ್ಮಗುರು ಪೋಪ್ ಬೆನೆಡಿಕ್ಟ್ -IX ರವರು ಪೋಪ್ ಸ್ಥಾನದಿಂದ ಇದೇ ತಿಂಗಳ ಕೊನೆಯಲ್ಲಿ ಕೆಳಗಿಳಿಯುವುದಾಗಿ ಹೇಳಿದ್ದಾರೆ. ತಮಗೆ ವಯಸ್ಸಾಗಿರುವ ಕಾರಣ ಆರೋಗ್ಯ ಕ್ಷೀಣಿಸಿದ್ದು ಇಂತಹ ದೊಡ್ಡ ಜವಬ್ದಾರಿಯನ್ನು ಹೊರಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ರಾಜೀನಾಮೆ ನೀಡುವುದಾಗಿ ಅವರು ತಿಳಿಸಿದ್ದಾರೆ.

- 600 ವರ್ಷಗಳ ಬಳಿಕ ಪೋಪ್ ಹುದ್ದೆಗೆ ರಾಜೀನಾಮೆ ನೀಡುತ್ತಿರುವ ಮೊದಲ ಪೋಪ್ ಬೆನೆಡಿಕ್ಟ್ ಆಗಿದ್ದಾರೆ.
- ಪೋಪ್ 12 ನೇ ಗ್ರೆಗೋರಿ 1415 ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.

**ಲಲಿತ ಕಲಾ ಅಕಾಡೆಮಿಯ ನೂತನ ಅಧ್ಯಕ್ಷರಾಗಿ: ಕಲ್ಯಾಣ್ ಕುಮಾರ್ ಚಕ್ರವರ್ತಿ ನೇಮಕ**

ರಾಷ್ಟ್ರೀಯ ವಸ್ತು ಸಂಗ್ರಹಾಲಯ ಮತ್ತು ಇತರೆ ಸಾಂಸ್ಕೃತಿಕ ಸಂಸ್ಥೆಗಳನ್ನು ಮುನ್ನಡೆಸಿದ್ದ ನಿವೃತ್ತ ಐಎಎಸ್ ಅಧಿಕಾರಿ ಕೆ.ಕೆ.ಚಕ್ರವರ್ತಿಯವರನ್ನು ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ ಸದಸ್ಯರಾಗಿ ಮತ್ತು ದೆಹಲಿಯ ನ್ಯಾಷನಲ್ ಮ್ಯೂಸಿಯಂನ ಡೈರೆಕ್ಟರ್ ಜನರಲ್ ಆಗಿ ಇವರು ಕಾರ್ಯನಿರ್ವಹಿಸಿದ್ದರು.

- 65 ವರ್ಷದ ಚಕ್ರವರ್ತಿಯವರು 2017 ರ ಡಿಸೆಂಬರ್ 31 ರವರೆಗೆ ಅಕಾಡೆಮಿಯನ್ನು ಮುನ್ನೆಡಸಲಿದ್ದಾರೆ.

ಲಲಿತ ಕಲಾ ಅಕಾಡೆಮಿಯು ಸ್ವಾಯುತ್ತ ಸಂಸ್ಥೆಯಾಗಿದ್ದು, 1954 ರಲ್ಲಿ ಇದನ್ನು ಸ್ಥಾಪಿಸಲಾಗಿದೆ. ಭಾರತದ ಕಲೆಯನ್ನು ಉತ್ತೇಜನಗೊಳಿಸುವ ಮತ್ತು ಪ್ರಚಾರಪಡಿಸುವ ಸಲುವಾಗಿ ಇದನ್ನು ಸ್ಥಾಪಿಸಲಾಗಿದೆ.

**ಅಶೋಕ್ ಕುಮಾರ್ ಮುಖರ್ಜಿ ವಿಶ್ವ ಸಂಸ್ಥೆಯಲ್ಲಿ ಭಾರತದ ಮುಂದಿನ ಪ್ರತಿನಿಧಿ**

ಅಶೋಕ್ ಕುಮಾರ್ ಮುಖರ್ಜಿಯವರನ್ನು ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿಯಾಗಿ ಆಯ್ಕೆಮಾಡಲಾಗಿದೆ. ಇದುವರೆಗೂ ವಿಶ್ವಸಂಸ್ಥೆಯ ಖಾಯಂ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹರಿದೀಪ್ ಸಿಂಗ್ ಪುರಿಯವರು ನಿವೃತ್ತಿ ಹೊಂದಲ್ಲಿದ್ದು, ಅವರ ಅಧಿಕಾರ ಅವಧಿ ಇದೇ ಫೆಬ್ರವರಿಯಲ್ಲಿ ಕೊನೆಗೊಳ್ಳಲಿದೆ.

- ವಿದೇಶಾಂಗ ವ್ಯವಹಾರಗಳ ಇಲಾಖೆಯು ಮುಖರ್ಜಿಯವರ ನೇಮಕಾತಿಯನ್ನು ಖಚಿತಗೊಳಿಸಿದೆ. ಮುಖರ್ಜಿಯವರು ಇದೇ ಇಲಾಖೆಯ ವಿಶೇಷ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.
- ಲಂಡನ್ ನಲ್ಲಿ ಡೆಪ್ಯೂಟಿ ಹೈಕಮೀಷನರ್ ಆಗಿ ಕೆಲಸ ಮಾಡಿರುವ ಮುಖರ್ಜಿಯವರು ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ರವರಿಗೆ ಆಪ್ತ ಕಾರ್ಯದರ್ಶಿ ಸಹ ಆಗಿದ್ದಾರೆ.

**ವಿಶ್ವ ಕುಸ್ತಿ ಸಂಸ್ಥೆ ಅಧ್ಯಕ್ಷರ ರಾಜೀನಾಮೆ**

ಅಂತರ್ ರಾಷ್ಟ್ರೀಯ ಕುಸ್ತಿ ಫೆಡರೇಷನ್ ನ ಅಧ್ಯಕ್ಷರಾದ ರಾಫೆಲ್ ಮಾರ್ಟಿನೆಟಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅಂತರ್ ರಾಷ್ಟ್ರೀಯ ಒಲಂಪಿಕ್ ಸಮಿತಿಯು 2020 ತನ್ನ ಕ್ರೀಡಾಪಟ್ಟಿಯಿಂದ ಕುಸ್ತಿಯನ್ನು ಕೈಬಿಟ್ಟಿರುವ ಹಿನ್ನೆಲೆಯಲ್ಲಿ ರಾಫೆಲ್ ರವರು ಈ ನಿರ್ಧಾರವನ್ನು ತಳೆದಿದ್ದಾರೆ. ಥಾಯ್ಲೆಂಡ್ ನ ಪುಕೆಟ್ ನಲ್ಲಿ ನಡೆಯುತ್ತಿರುವ ಫೆಡರೇಷನ್ ಕಾರ್ಯಕಾರಿ ಸಮಿತಿ ಸಭೆಯ ನಂತರ ರಾಫೆಲ್ ತಮ್ಮ ನಿರ್ಧಾರವನ್ನು ಪ್ರಕಟಿಸಿದ್ದಾರೆ.

- ಒಲಂಪಿಕ್ ವಲಯದಲ್ಲಿ ಕುಸ್ತಿಯ ಹಿತಾಸಕ್ತಿಯನ್ನು ಕಾಪಾಡಲು ವಿಫಲವಾಗಿದ್ದಾರೆಂದು ಅಮೆರಿಕಾ ಮತ್ತು ರಷ್ಯ ಘಟಕಗಳ ಪ್ರತಿನಿದಿಗಳು ಸಭೆಯಲ್ಲಿ ರಾಫೆಲ್ ವಿರುದ್ಧ ಹರಿಹಾಯ್ದಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ರಾಫೆಲ್ ರವರ ರಾಜೀನಾಮೆಗೆ ಇದು ಮುಖ್ಯ ಕಾರಣ ಎಂದು ತಿಳಿಯಲಾಗಿದೆ.

**<u>ಮಾಜಿ ಕೇಂದ್ರ ಸಚಿವ ರಾಧಕೃಷ್ಣನ್ ಮಾಳವಿಯ ನಿಧನ</u>**

ಮಾಜಿ ಕೇಂದ್ರ ಸಚಿವ ಮತ್ತು ರಾಜ್ಯ ಸಭಾ ಸದಸ್ಯರಾದ ಮಧ್ಯ ಪ್ರದೇಶದ ರಾಧಕೃಷ್ಣನ್ ಮಾಳವಿಯ ರವರು ಮರಣ ಹೊಂದಿದರು. ದೀರ್ಘ ಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 68 ವರ್ಷ ವಯಸ್ಸಾಗಿತ್ತು.

- ಮಧ್ಯ ಪ್ರದೇಶದ ಹಿರಿಯ ಕಾಂಗ್ರೆಸ್ ನಾಯಕರಾಗಿದ್ದ ಅವರು 1972 ರಲ್ಲಿ MLA ಆಗಿ ಇಂಧೋರ್ ಜಿಲ್ಲೆಯ ಸಾನ್ವ ದಿಂದ ಆಯ್ಕೆಯಾಗಿದ್ದರು.
- 1980 ರ ರಾಜೀವ್ ಗಾಂಧಿ ಸರ್ಕಾರದ ಅವಧಿಯಲ್ಲಿ ಕಾರ್ಮಿಕ ಸಚಿವರಾಗಿ ಮಾಳವಿಯ ರವರು ದೇಶಕ್ಕೆ ಸೇವೆ ಸಲ್ಲಿಸಿದ್ದರು.
- ಮೂರು ಬಾರಿ ರಾಜ್ಯ ಸಭಾಗೆ ಆಯ್ಕೆಯಾಗಿದ್ದ ಅವರು ಮಧ್ಯಪ್ರದೇಶದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ 1998 ರಿಂದ 2003 ರ ವರಗೆ ಕಾರ್ಯನಿರ್ವಹಿಸಿದ್ದರು.
- ಹರಿಜನ್ ಸೇವಾ ಸಂಘದ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದ್ದರು.

**<u>ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (IRDA) ಅಧ್ಯಕ್ಷರಾಗಿ ಟಿ.ಎಸ್.ವಿಜಯನ್ ನೇಮಕ</u>**

ಜೀವ ವಿಮಾ ನಿಗಮದ ಮಾಜಿ ಮುಖ್ಯಸ್ಥರಾದ ಟಿ.ಎಸ್.ವಿಜಯನ್ ರವರು ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (Insurance Regulatory and Development Authority (IRDA))ದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಜೆ. ಹರಿ ನಾರಯಣ್ ರವರು ಐದು ವರ್ಷದ ಅವಧಿಯನ್ನು ಪೂರ್ಣಗೊಳಿದ ಕಾರಣ ವಿಜಯನ್ ರವರನ್ನು ಈ ಹುದ್ದೆಗೆ ನೇಮಕಮಾಡಲಾಗಿದೆ. ವಿಮೆ ಸೌಲಭ್ಯವನ್ನು ಗ್ರಾಮೀಣ ಭಾಗಗಳಿಗೆ ಪರಿಚಯಿಸುವುದು ಸೇರಿದಂತೆ ವಿಮಾ ಕ್ಷೇತ್ರ ಎದುರಿಸುತ್ತಿರುವ ಕಠಿಣ ಸವಾಲುಗಳನ್ನು ವಿಜಯನ್ ಸಮರ್ಪಕವಾಗಿ ನಿರ್ವಹಿಸಬೇಕಿದೆ.

- ಭಾರತದಲ್ಲಿ ವಿಮೆ ಉದ್ಯಮದ ಬೆಳವಣಿಗೆ ಮತ್ತು ಅಭಿವೃದ್ಧಿ ಪಡಿಸುವ ಸಲುವಾಗಿ "ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ" ವನ್ನು ಭಾರತ ಸಂಸತ್ತಿನ ಕಾಯ್ದೆ ಮೇರೆಗೆ ಸ್ಥಾಪಿಸಲಾಗಿದೆ. "ಮಲ್ಹೋತ್ರ ಸಮಿತಿಯ" ಶಿಫಾರಸ್ಸಿನ ಮೇರೆಗೆ IRDA ವನ್ನು ಏಪ್ರಲ್ 2000 ದಿಂದ ಜಾರಿಗೊಳಿಸಲಾಗಿದೆ. ಇದರ ಪ್ರಧಾನ ಕಚೇರಿಯು ಆಂಧ್ರ ಪ್ರದೇಶದ ಹೈದರಾಬಾದ್ ನಲ್ಲಿ ಇದೆ. ವಿಮೆ ಉದ್ಯಮಕ್ಕೆ ಸಂಬಂಧಪಟ್ಟ ಎಲ್ಲಾ ರೀತಿಯ ನಿಯಮಗಳನ್ನು ಜಾರಿಗೊಳಿಸುವುದು, ಖಾಸಗಿ ವಿಮಾ ಕಂಪನಿಗಳನ್ನು ಆರಂಭಿಸಲು ಪರವಾನಗೆ ನೀಡುವುದು ಸೇರಿದಂತೆ ಇತರೆ ವಿಮಾ ಸಂಬಂಧಿತ ಹೊಣೆಗಾರಿಕೆಯನ್ನು IRDA ಗೆ ವಹಿಸಲಾಗಿದೆ. ಈ ಪ್ರಾಧಿಕಾರವು ಒಬ್ಬ ಅಧ್ಯಕ್ಷರು, ನಾಲ್ಕು ಪೂರ್ಣ ಕಾಲಿಕ ಸದಸ್ಯರು ಮತ್ತು ನಾಲ್ಕು ಜನ ಅರೆ ಕಾಲಿಕ ಸದಸ್ಯರನ್ನು ಒಳಗೊಂಡಿದೆ.
- IRDA ಕಾಯ್ದೆಯ ಪ್ರಕಾರ ಇದರ ಅಧ್ಯಕ್ಷರ ಅವಧಿ 5 ವರ್ಷ ಅಥವಾ 65 ವರ್ಷ ತುಂಬುವ ವರೆಗೆ ಮಾತ್ರ.

**ಹಿರಿಯ ಪತ್ರಕರ್ತ ಚಿತ್ರನಟ ವಿಜಯ ಸಾರಥಿ ನಿಧನ**

ಹಿರಿಯ ಸಿನಿ ಪತ್ರಕರ್ತ, ನಟ ರಾಜಪುರ ಗೋಪಾಲರಾವ್ ವಿಜಯ ಸಾರಥಿಯವರು ಕೊನೆಯುಸಿರೆಳವ ಮೂಲಕ ಬಣ್ಣದ ಲೋಕಕ್ಕೆ ವಿದಾಯ ಹೇಳಿದ್ದಾರೆ. RG ಎಂದೇ ಖ್ಯಾತರಾಗಿದ್ದ ಅವರಿಗೆ 62 ವರ್ಷ ವಯಸ್ಸಾಗಿತ್ತು. ಸುಮಾರು 10 ವರ್ಷಗಳ ಕಾಲ ಚಿತ್ರಲೋಕದ ನಂಟು ಹೊಂದಿದ್ದ ವಿಜಯ ಸಾರಥಿಯವರು ಅನೇಕ ಚಿತ್ರಗಳ ವಿಮರ್ಷೆಯನ್ನು ಬರೆದಿದ್ದರು.

- ಸುಮಾರು 100 ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದ ಅವರು ಕನ್ನಡ, ಇಂಗ್ಲೀಷ್ ಪತ್ರಿಕೆಗಳು, ವೆಬ್ ಸೈಟ್ ಗಳಲ್ಲಿ ನಿರಂತರವಾಗಿ ಚಿತ್ರವಿಮರ್ಷೆ ಬರೆದಿದ್ದಾರೆ.
- ಉಪೇಂದ್ರ ಅವರ ಆಪರೇಷನ್ ಹಂತದಲ್ಲಿ ಒಂದು ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡು ಚಿತ್ರರಂಗಕ್ಕೆ ಪಾದರ್ಪಣೆ ಮಾಡಿದ ಅವರು ಅನೇಕ ಕಿರುತೆರೆ ಧಾರಾವಾಹಿಗಳಲ್ಲೂ ನಟಿಸಿದ್ದರು.

**ಪ್ರಸಿದ್ಧ ಉದ್ಯಮಿ ಹರಿ ಶಂಕರ್ ಸಿಂಗಾನಿಯಾ ಇನ್ನಿಲ್ಲ**

ಭಾರತ ಕಂಡ ಶ್ರೇಷ್ಠ ಉದ್ಯಮಿ, ಜೆಕೆ ಸಮೂಹ ಸಂಸ್ಥೆಗಳ ಅಧ್ಯಕ್ಷ ಹರಿ ಶಂಕರ್ ಸಿಂಗಾನಿಯಾ ದೆಹಲಿಯಲ್ಲಿ ನಿಧನ ಹೊಂದಿದ್ದರು. 72 ವರ್ಷ ವಯಸ್ಸಿನ ಸಿಂಗಾನಿಯಾ ರವರು ಅನೇಕ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು. ಜೂನ್, 20, 1933ರಲ್ಲಿ ಕಾನಪುರ್ ದಲ್ಲಿ ಜನಿಸಿದ ಅವರು ಬಿ.ಎಸ್ಸಿ ಪದವಿಯನ್ನು ಪಡೆದ ನಂತರ 1951 ರಲ್ಲಿ ಜೆಕೆ ಸಂಸ್ಥೆಗೆ ನೇಮಕಗೊಂಡರು. ಅಸಾಮಾನ್ಯ ಉದ್ಯಮಿ ಲಕ್ಷಣಗಳಿಂದ ಜನಪ್ರಿಯರಾದ ಸಿಂಗಾನಿಯಾ ಸಂಸ್ಥೆಯ ಅಭಿವೃದ್ಧಿಗೆ ಬದ್ರ ಬುನಾದಿಯನ್ನು ಹಾಕಿದರು.

ಸಿಂಗಾನಿಯಾ ಬಗ್ಗೆ ಇನ್ನಷ್ಟು:

- 1979-80 ನೇ ಅವಧಿಯಲ್ಲಿ ಸಿಂಗಾನಿಯಾ ರವರು ಫಿಕ್ಕಿ (FICCI) ಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.
- 1993-94 ರಲ್ಲಿ ಅವರು ಪ್ಯಾರಿಸ್ ನಲ್ಲಿರುವ "ಅಂತರ ರಾಷ್ಟ್ರೀಯ ವಾಣಿಜ್ಯ ಮಂಡಳಿ" ಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಅಲ್ಲದೇ ಈ ಸ್ಥಾನವನ್ನು ತುಂಬಿದ ಭಾರತದ ಎರಡನೇ ವ್ಯಕ್ತಿ.
- 2003 ರಲ್ಲಿ ಭಾರತ ಸರ್ಕಾರ ಸಿಂಗಾನಿಯಾ ರವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.
- 2005 ರಲ್ಲಿ ಸ್ವೀಡಿಶ್ ದೇಶದ "ರಾಯಲ್ ಆರ್ಡರ್ ಆಫ್ ದ ಪೋಲಾರ್ ಸ್ಟಾರ್" ಪ್ರಶಸ್ತಿಯನ್ನು ಸಿಂಗಾನಿಯಾ ಪಡೆದುಕೊಂಡಿದ್ದಾರೆ.
- ಇವುಗಳಲ್ಲದೇ 2008 ಪೇಪರ್ ಇಂಡಸ್ಟ್ರೀಸ್ ಹಾಲ್ ಆಫ್ ಫೇಮ್ ಅವಾರ್ಡ್ ಮತ್ತು ಜೀವಾಮಾನ ಸಾಧನೆಗೆ ಏಷಿಯಾ-ಫೆಸಿಪಕ್ ಉದ್ಯಮಿ ಪ್ರಶಸ್ತಿಯನ್ನು 2010 ರಲ್ಲಿ ಅವರು ಪಡೆದಿದ್ದರು.

ಜೆಕೆ ಗ್ರೂಪ್

100 ವರ್ಷಗಳಿಗೂ ಹಳೆಯದಾದ ಜೆಕೆ ಗ್ರೂಪ್ ಸಂಸ್ಥೆ ಇಂದು ಉದ್ಯಮ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಸಿಮೆಂಟ್, ಕಾಗದ ತಯಾರಿಕೆ, ಟೈರ್, ರಬ್ಬರ್, ಜವಳಿ, ಆಹಾರ ಪದಾರ್ಥ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಕಂಪನಿ ತೊಡಗಿಸಿಕೊಂಡಿದೆ. ಸುಮಾರು 30,000 ಕಾರ್ಮಿಕರನ್ನೂ ಹೊಂದಿರುವ ಜೆಕೆ ಕಂಪನಿಯೂ 80 ದೇಶಗಳಿಗಳಿಗೆ ತನ್ನ ಉತ್ಪಾದನೆಯನ್ನು ರಫ್ತು ಮಾಡುತ್ತಿದೆ.

**ಪ್ರಸಿದ್ಧ ಫ್ರೆಂಚ್ ಲೇಖಕ ಸ್ಟೆಫಾನ್ ಹೆಸ್ಸಲ್ (Stephane Hessel) ನಿಧನ**

ಫ್ರೆಂಚ್ ನ ಪ್ರಸಿದ್ಧ ಲೇಖಕ ಮತ್ತು ಹಿರಿಯ ರಾಜತಾಂತ್ರಿಕ ಸ್ಟೆಫಾನ್ ಹೆಸ್ಸಲ್ ನಿಧನರಾದರು. ಅವರಿಗೆ 95 ವರ್ಷ ವಯಸ್ಸಾಗಿತ್ತು. ಸ್ಟೆಫಾನ್ ರವರು ಅನೇಕ ಪುಸ್ತಕಗಳು ದಾಖಲೆ ಮಾರಟಗೊಂಡಿದ್ದವು. ಅಲ್ಲದೇ ವಿಶ್ವದ ವಿವಿಧೆಡೆ ಅನ್ಯಾಯದ ವಿರುದ್ಧ ನಡೆದ ಪ್ರತಿಭಟನೆಗಳಿಗೆ ಅವರ ಪುಸ್ತಕಗಳು ಸ್ಪೂರ್ತಿಯಾಗಿದ್ದವು.

ಸ್ಟೆಫಾನ್ ಹೆಸ್ಸಲ್:

- ಮೂಲತ ಜರ್ಮನಿನವರಾದ ಸ್ಟೆಫಾನ್ ರವರು 1939 ರಲ್ಲಿ ಫ್ರೆಂಚ್ ನಾಗರಿಕತ್ವವನ್ನು ಪಡೆದುಕೊಂಡರು. ಎರಡನೇ ವಿಶ್ವ ಯುದ್ಧದ ವಿರುದ್ಧ ಪ್ರತಿಭಟಿಸಿದವರಲ್ಲಿ ಅವರು ಮೊದಲಿಗರಾಗಿದ್ದರು. ಸ್ಟೆಫಾನ್ ರವರು ಅನೇಕ ಬಾರಿ ಸೆರೆಮನೆ ವಾಸವನ್ನು ಅನುಭವಿಸಿದ್ದರು.
- 2010 ರಲ್ಲಿ ಅವರ ಪ್ರಬಂಧ "ಟೈಮ್ಸ್ ಫಾರ್ ಔಟರೇಜ್ (Times for Outrage)" 35 ದೇಶಗಳಲ್ಲಿ ಸುಮಾರು 4.5 ಮಿಲಿಯನ್ ಪ್ರತಿ ಮಾರಾಟವಾಗುವ ಮೂಲಕ ದಾಖಲೆ ನಿರ್ಮಿಸಿತು. ಅಷ್ಟೇ ಅಲ್ಲದೇ, ನ್ಯೂಯಾರ್ಕ್ ನಲ್ಲಿ ನಡೆದ "ವಾಲ್ ಸ್ಟ್ರೀಟನ್ನು ವಶಪಡಿಸಿಕೊಳ್ಳಿ (Occupie Wallstreet)" ಪ್ರತಿಭಟನೆಗೆ ಈ ಪ್ರಬಂಧ ಪ್ರಚೋದನೆ ನೀಡಿತು.

ಕರುನಾಡು ಎಕ್ಸಾಮ್ಸ್

# ಪ್ರಶಸ್ತಿಗಳು

**ಉಸ್ತಾದ್ ಅಬ್ದುಲ್ ರಶೀದ್ ಖಾನ್: "ಪದ್ಮ" ಪ್ರಶಸ್ತಿ ಪಡೆದ ಅತಿ ಹಿರಿಯ ವ್ಯಕ್ತಿ**

- ಹಿಂದೂಸ್ತಾನಿ ಗಾಯಕ ಉಸ್ತಾದ್ ಅಬ್ದುಲ್ ರಶೀದ್ ಖಾನ್ ರವರು ಪದ್ಮ ಪ್ರಶಸ್ತಿ ಪಡೆದ ಅತಿ ಹಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರೆ. ಖಾನ್ ರವರಿಗೆ ಈಗ 105 ವರ್ಷ ವಯಸ್ಸಾಗಿದೆ.
- ಈ ಹಿಂದೆ 2011 ರಲ್ಲಿ ಭಾರತದ ಪ್ರಥಮ ಮಹಿಳಾ ಫೋಟೋಗ್ರಾಫರ್ ಆಗಿದ್ದ ಹೊಮಯಿ ಯರವಾಲ ರವರಿಗೆ 97 ನೇ ವಯಸ್ಸಿನಲ್ಲಿ ಪದ್ಮ ಪ್ರಶಸ್ತಿ ಲಭಿಸಿತ್ತು. ಇವರು 2012 ರಲ್ಲಿ ತೀರಿಕೊಂಡರು.

**ನೊಬೆಲ್ ಪ್ರಶಸ್ತಿಯನ್ನು ಹಿಂದಿಕ್ಕಲಿರುವ ಟಾಂಗ್ ಪ್ರಶಸ್ತಿ**

ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಯನ್ನು ಮೀರಿಸುವಂತಹ ಪ್ರಶಸ್ತಿಯನ್ನು ಸ್ಥಾಪಿಸಿರುವುದಾಗಿ ತೈಪೆಯ ಉದ್ಯಮಿಯೊಬ್ಬರು ಹೇಳಿದ್ದಾರೆ. "ಟಾಂಗ್" ಎಂಬ ಹೆಸರಿನ ಈ ಪ್ರಶಸ್ತಿಯನ್ನು ತೈವಾನ್ ನ ರೂಯಿಂಟೆಕ್ಸ್ ಉದ್ಯಮ ಸಾಮ್ರಾಜ್ಯದ ಅಧಿಪತಿಯಾಗಿರುವ ಸ್ಯಾಮ್ಯುವೆಲ್ ಯಿನ್ ಎಂಬುವವರು ಸುಮಾರು 548 ಕೋಟಿ ಹಣವನ್ನು ಈ ಪ್ರಶಸ್ತಿಗೆ ಗೇಣಿಗೆ ನೀಡಿದ್ದಾರೆ.

- 2014 ರಿಂದ ಪ್ರತಿ ಎರಡು ವರ್ಷಗಳಿಗೊಮ್ಮೆ ಈ ಪ್ರಶಸ್ತಿಯನ್ನು ನೀಡಲು ಆರಂಭಿಸಲಾಗುತ್ತದೆ
- ಸುಸ್ಥಿರ ಅಭಿವೃದ್ಧಿ, ಬಯೋಫಾರ್ಮಸ್ಯುಟಿಕಲ್ಸ್ ಸೈನ್ಸ್, ಸಿನೋಲಜಿ ಮತ್ತು ರೂಲ್ ಆಫ್ ಲಾ ಎಂಬ ನಾಲ್ಕು ವಿಭಾಗಗಳಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುವುದು. ಈ ವಿಭಾಗಗಳಲ್ಲಿ ಗಣನೀಯವಾಗಿ ಸಾಧನೆ ಮಾಡುವ ಯಾವುದೇ ದೇಶದ ವ್ಯಕ್ತಿಯು ಈ ಪ್ರಶಸ್ತಿಗೆ ಅರ್ಹನಾಗಿರುವುದು ವಿಶೇಷ.
- ಟಾಂಗ್ ಪ್ರಶಸ್ತಿ ವಿಜೇತರಿಗೆ 9.10 ಕೋಟಿ ನಗದು ಬಹುಮಾನ ಸಿಕ್ಕರೆ, ನೊಬೆಲ್ ಪ್ರಶಸ್ತಿಗೆ ಸಿಗುವ ನಗದು 6.40 ಕೋಟಿ

**ಶಾಂತಿ ನೊಬೆಲ್ ಪ್ರಶಸ್ತಿಗೆ ಮಲಾಲ ಹೆಸರು ಪ್ರಸ್ತಾಪ**

ಪಾಕಿಸ್ತಾನದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೋರಾಡಿ, ಇತ್ತೀಚೆಗೆ ಭಯೋತ್ಪಾದಕರ ಗುಂಡೇಟು ತಿಂದು ಚೇತರಿಸಿಕೊಳ್ಳುತ್ತಿರುವ ಮಲಾಲ ಯೂಸಾಫ್ ಜೈರವರನ್ನು ಶಾಂತಿ ನೊಬೆಲ್ ಪ್ರಶಸ್ತಿಗೆ ನಾಮ ನಿರ್ದೇಶನ ಮಾಡಲಾಗಿದೆ.

- ಮಾನವ ಹಕ್ಕುಗಳ ಕಾರ್ಯಕರ್ತರಾದ ಬೆಲಾರಸ್ ನ ಅಲೆಸ್ ಬೆಲಾಟ್ ಸ್ಕಿ ಮತ್ತು ರಷ್ಯಾದ ಲುಡೆಮೆಲಾ ಅಲೆಕ್ಸೆಮಿಯಾರವರ ಹೆಸರನ್ನು ಸಹ ಶಾಂತಿ ನೊಬೆಲ್ ಪ್ರಶಸ್ತಿಗೆ ನಾಮಕರಣ ಮಾಡಲಾಗಿದೆ.

**ಭಾರತದ ವಿಜ್ಞಾನಿಗೆ ಅಮೆರಿಕಾದ ರಾಷ್ಟ್ರೀಯ ಪ್ರಶಸ್ತಿ**

ಭಾರತ ಮೂಲದ ಪ್ರಸಿದ್ಧ ವಿಜ್ಞಾನಿ ರಂಗನಾಥಸ್ವಾಮಿ ಶ್ರೀನಿವಾಸನ್ ರವರಿಗೆ ಆಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ ಅವರು ಹೊಸ ತಂತ್ರಜ್ಞಾನ ಮತ್ತು ಆವಿಷ್ಕಾರಕ್ಕಾಗಿ (Technology and Innovation) ನೀಡಲಾಗುವ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದ್ದಾರೆ.

- ವೈದ್ಯಕೀಯ ಚಿಕಿತ್ಸೆಯಲ್ಲಿ ಲೇಸರ್ ತಂತ್ರಜ್ಞಾನದ ಬಳಕೆಯ ಹೊಸ ತಂತ್ರಜ್ಞಾನ ಬಳಕೆಯನ್ನು ರಂಗನಾಥಸ್ವಾಮಿ ರವರು ಪರಿಚಯಿಸಿದ್ದರು. ಈ ತಂತ್ರಜ್ಞಾನವು ಬಳಕೆಗೆ ಅತಿ ಸುರಕ್ಷತಿವಾಗಿದೆ, ಅಲ್ಲದೇ Photodecomposition ಎಂದು ಕರೆಯಲಾಗುವ ಈ ತಂತ್ರಜ್ಞಾನವು ಯಶಸ್ವಿ ಸಹ ಆಗಿದೆ.
- ನ್ಯಾಷನಲ್ ಮೆಡಲ್ ಆಫ್ ಟೆಕ್ನಾಲಜಿ ಅಂಡ್ ಇನ್ನೋವೇಷನ್ ಪ್ರಶಸ್ತಿಯನ್ನು 1980 ರಲ್ಲಿ ಸ್ಥಾಪಿಸಲಾಗಿದ್ದು, ಅಮೆರಿಕಾದಲ್ಲಿ ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸುವ ವಿಜ್ಞಾನಿಗಳು ಮತ್ತು ಎಂಜನಿಯರ್ ಗಳಿಗೆ ನೀಡಲಾಗುತ್ತದೆ.

**ಇಳಾ ಭಟ್ ಗೆ 2011 ನೇ ಸಾಲಿನ ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿ**

2011 ನೇ ಸಾಲಿನ ಇಂದಿರಾ ಗಾಂಧಿ ಪ್ರಶಸ್ತಿಗೆ ಖ್ಯಾತ ಸಾಮಾಜಿಕ ಕಾರ್ಯಕರ್ತೆ ಇಳಾ ಭಟ್ ಆಯ್ಕೆಯಾಗಿದ್ದಾರೆ. ಗ್ರಾಮೀಣ ಭಾಗದಲ್ಲಿ ಮಹಿಳೆಯರ ಸ್ವಾವಲಂಭನೆ ಬದುಕನ್ನು ರೂಪಿಸಲು ದುಡಿಯುತ್ತಿರುವ ಭಟ್ ರವರ ಜೀವಮಾನ ಶ್ರೇಷ್ಠ ಸಾಧನೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಇಳಾ ರಮೇಶ್ ಭಟ್

- ಮೂಲತಃ ಗುಜರಾತ್ ನವರಾದ ಇಳಾ ಭಟ್ ರವರು ದೇಶ ಕಂಡ ಖ್ಯಾತ ಸಾಮಾಜಿಕ ಕಾರ್ಯಕರ್ತೆ. ಗ್ರಾಮೀಣ ಭಾಗದ ಮಹಿಳೆಯರಿಗೆ ಉದ್ಯೋಗ ಕೊಡಿಸಿಕೊಡುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಇವರು ನೀಡಿರುವ ಸೇವೆ ಅಪಾರ.
- 1972 ರಲ್ಲಿ ಭಟ್ ರವರು "ಸೇವಾ (Self employed Woman's Association (SEVA))" ಎಂಬ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಮಹಿಳೆಯರಿಗೆ ಉದ್ಯೋಗ ದೊರಕಿಸಿಕೊಟ್ಟು ಮಹಿಳೆಯರ ಜೀವನ ಮಟ್ಟ ಸುಧಾರಿಸಲು ಶ್ರಮಿಸಿದರು. ಮೊದಲು ಕೇವಲ 600 ಜನ ಸದಸ್ಯರನ್ನು ಹೊಂದಿದ್ದ ಈ ಸಂಸ್ಥೆ ಇಂದು 1.3 ಮಿಲಿಯನ್ ಹೆಚ್ಚು ಸದಸ್ಯರನ್ನು ಹೊಂದಿದೆ.
- 1974 ರಲ್ಲಿ ಭಟ್ ರವರು "ಸಹಕಾರ ಬ್ಯಾಂಕ್" ಒಂದನ್ನು ಸ್ಥಾಪಿಸಿದರು. ಈ ಬ್ಯಾಂಕ್ ತೆರೆಯುವ ಮೂಲಕ ಇಂದು ಸುಮಾರು ಹೆಣ್ಣುಮಕ್ಕಳ ಜೀವನವನ್ನು ಉತ್ತಮಗೊಳಿಸಲು ಯಶಸ್ವಿಯಾಗಿದೆ.
- ಇಳಾ ಭಟ್ ರವರ ಸೇವೆಯನ್ನು ಗುರುತಿಸಿ 1977 ರಲ್ಲಿ ರಾಮನ್ ಮ್ಯಾಗಸೆ ಪ್ರಶಸ್ತಿ, 1984 ರಲ್ಲಿ ರೈಟ್ ಲೈವ್ಲಿಹುಡ್ ಪ್ರಶಸ್ತಿ, 1985 ರಲ್ಲಿ ಪದ್ಮ ಶ್ರೀ, 1986 ರಲ್ಲಿ ಪದ್ಮ ಭೂಷಣ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಈ ಪ್ರಶಸ್ತಿಗಳನ್ನು ಹೊರತುಪಡಿಸಿ ಇಳಾ ರವರು ಇನ್ನೂ ಅನೇಕ ವಿದೇಶಿ ಪ್ರಶಸ್ತಿಗಳಿಗೂ ಪಾತ್ರರಾಗಿದ್ದಾರೆ.

ಇಂದಿರಾ ಗಾಂಧಿ ಪ್ರಶಸ್ತಿ:

- ಭಾರತದ ಮಾಜಿ ಪ್ರಧಾನಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರ ಹೆಸರಿನಲ್ಲಿ ಈ ಪ್ರಶಸ್ತಿಯನ್ನು 1986 ರಿಂದ ನೀಡಲಾಗುತ್ತಿದೆ. ಸಮಾಜದಲ್ಲಿ ಶಾಂತಿ ಮತ್ತು ಅಭಿವೃದ್ಧಿಗೆ ಶ್ರಮಿಸುವ ಸಂಸ್ಥೆ ಅಥವಾ ವ್ಯಕ್ತಿಗೆ ಈ ಪ್ರಶಸ್ತಿಯನ್ನು ಕೊಡಲಾಗುತ್ತದೆ. ಪ್ರಶಸ್ತಿಯು ರೂ.25 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.
- 2012 ನೇ ಸಾಲಿನ ಪ್ರಶಸ್ತಿಗೆ ಲಿಬೆರಿಯಾದ ಮೊದಲ ಮಹಿಳಾ ಅಧ್ಯಕ್ಷರಾದ ಎಲೆನ್ ಜಾನಸನ್ ಸರಲೀಫ್ ರವರು ಆಯ್ಕೆಯಾಗಿದ್ದಾರೆ.

**ಭಾರತೀಯ ಸಂಜಾತೆ ನಿಕ್ಕಿ ಹ್ಯಾಲಿ (Nikki Haley) ಗೆ ಪ್ರಶಸ್ತಿ**

ಆಮೆರಿಕಾದ ದಕ್ಷಿಣ ಕ್ಯಾರೊಲಿನಾದ ಗವರ್ನರ್ ಆಗಿರುವ ಭಾರತೀಯ ಮೂಲದ ನಿಕ್ಕಿ ಹ್ಯಾಲಿ ಯವರಿಗೆ ನಾಯಕತ್ವ ಪ್ರಶಸ್ತಿಯನ್ನು ಪ್ರದಾನಿಸಲಾಗಿದೆ. ಆಟೋಮೊಬೈಲ್ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಷ್ಟಿಸುವಲ್ಲಿ ಅವರು ತೋರಿರುವ ಶ್ರದ್ದೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

- "ಮೋಟಾರ್ ಮತ್ತು ಸಾಧನಗಳ ಉತ್ಪಾದನಾ ಅಸೋಸಿಯೇಶನ್" ವತಿಯಿಂದ ಇದೇ ಮೊದಲ ಬಾರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದ್ದು, ಈ ಚೊಚ್ಚಲ ಪ್ರಶಸ್ತಿಯನ್ನು ನಿಕ್ಕಿಯಾಲಿಗೆ ಪೀಡ್ ಮೊಂಟ್ ನಲ್ಲಿ ನಡೆದ ಸಮಾರಂಭದಲ್ಲಿ ನೀಡಲಾಯಿತು.
- ಗವರ್ನರ್ ಹ್ಯಾಲಿಯವರು ಮೋಟಾರ್ ವಾಹನ ವಿತರಣಾ ಕೈಗಾರಿಕೆಯಲ್ಲಿ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಉತ್ತೇಜನ ನೀಡುವ ಮೂಲಕ ಹೋರಾಟವನ್ನು ನಡೆಸಿದ್ದು ಅವರ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಮೋಟಾರ್ ಮತ್ತು ಸಾಧನಗಳ ಉತ್ಪಾದನಾ ಅಸೋಸಿಯೇಶನ್ ಅಧ್ಯಕ್ಷ ಬಾಬ್ ಮೆಕ್ ಕೆನ್ನಾ ಹೇಳಿದ್ದಾರೆ.

**ರತನ್ ಟಾಟ ಗೆ Earnst and Young ನೀಡುವ ಜೀವಮಾನ ಸಾಧನೆ ಪ್ರಶಸ್ತಿ**

ಟಾಟಾ ಗ್ರೂಪ್ಸ್ ನ ಮಾಜಿ ಮುಖ್ಯಸ್ಥರಾದ ರತನ್ ಟಾಟ ರವರ ಸೇವೆಯನ್ನು ಗುರುತಿಸಿ 2012 ನೇ ಸಾಲಿನ Earnst and Young ನ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಉದ್ಯಮ ಕ್ಷೇತ್ರದಲ್ಲಿ ಭಾರತವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ರತನ್ ಟಾಟರವರ ಸೇವೆಯನ್ನು ಮೆಚ್ಚಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಅವರಿಗೆ ನೀಡಲಾಗಿದೆ.

- ಇನ್ನೂ 2012 ನೇ ಸಾಲಿನ ಉದ್ಯಮಿ ಪ್ರಶಸ್ತಿಯನ್ನು ಗೊದ್ರೇಜ್ ಗ್ರೂಪ್ ನ ಅಧ್ಯಕ್ಷರಾದ ಆದಿ ಗೊದ್ರೇಜ್ ರವರಿಗೆ ನೀಡಲಾಗಿದೆ.
- ಇದಲ್ಲದೇ Earnst and Young ಕೆಲವು ಯಶಸ್ವಿ ಉದ್ಯಮಿಗಳ ಹೆಸರನ್ನು ವಿವಿಧ ಕ್ಷೇತ್ರಗಳಿಂದ ಪ್ರಕಟಿಸಲಾಗಿದ್ದು, TTK ಗ್ರೂಪ್ ನ ಛೇರ್ ಮನ್ TT ಜಗನ್ನಾಥ್, ಕೊಗ್ನಿಜಾಂಟ್ ಕಂಪನಿಯ ಸಿಇಒ ಫ್ರಾನ್ಸಿಸ್ಕೊ ಡಿಸೋಜಾ ಮತ್ತು ಅಪೋಲೊ ಟೈರ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆದ ಓಂಕಾರ್ ಎಸ್ ಕನ್ವಾರ್ ರವರು ಸ್ಥಾನ ಪಡೆದಿದ್ದಾರೆ.

**85 ನೇ ಆಸ್ಕರ್ ಪ್ರಶಸ್ತಿ ಪ್ರಕಟ: "ಲೈಫ್ ಆಫ್ ಪೈ" ಗೆ ನಾಲ್ಕು ಪ್ರಶಸ್ತಿ**

ಸಿನಿಮಾ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ ಆಸ್ಕರ್ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. 85 ನೇ ವರ್ಷದ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿಯ ಕೆಲವು ಪ್ರಮುಖ ಮಾಹಿತಿ ಇಲ್ಲಿದೆ.

- "ಲೈಫ್ ಆಫ್ ಪೈ" ಗೆ ನಾಲ್ಕು ಪ್ರಶಸ್ತಿ: ಭಾರತೀಯ ಬಾಲಕನೊಬ್ಬನ ಕತೆ ಆಧರಿಸಿದ ಈ ಚಿತ್ರಕ್ಕೆ ನಾಲ್ಕು ಪ್ರಶಸ್ತಿಗಳು ಸಂದಿವೆ. ಭಾರತದ ಯುವಕ ಸೂರಜ್ ಶರ್ಮಾ ರವರ ಪ್ರಥಮ ಚಿತ್ರ ಇದಾಗಿದ್ದು, ಪ್ರಸಿದ್ದ ನಿರ್ದೇಶಕ ಆಂಗ್ ಲೀ ರವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಆಂಗ್ ಲೀ ರವರು ಎರಡನೇ ಬಾರಿ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಹಿಂದೆ 2005 ರಲ್ಲಿ "ಬ್ರೋಕ್ ಬ್ಯಾಕ್ ಮೌಂಟೇನ್" ಚಿತ್ರಕ್ಕಾಗಿ ಪ್ರಶಸ್ತಿ ಪಡೆದಿದ್ದರು. ನಿರ್ದೇಶನ ವಿಭಾಗ ಹೊರತುಪಡಿಸಿ ಛಾಯಾಗ್ರಹಣ, ಸಂಗೀತ ಮತ್ತು ವಿಷುಯೆಲ್ ಎಫೆಕ್ಟ್ ವಿಭಾಗಗಳಿಗೆ ಪ್ರಶಸ್ತಿ ದೊರೆತಿವೆ.

- “ಆರ್ಗೋ” ಅತ್ಯುತ್ತಮ ಚಿತ್ರ: 1979 ರಲ್ಲಿ ನಡೆದಿದ್ದ ಇರಾನ್ ಒತ್ತೆಯಾಳು ಪ್ರಕರಣವನ್ನು ಆಧರಿಸಿ ನಿರ್ಮಾಣ ಮಾಡಿರುವ ಆರ್ಗೋ ಚಿತ್ರ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿದೆ.
- ಅತ್ಯುತ್ತಮ ನಟ ಪ್ರಶಸ್ತಿ: ಲಿಂಕನ್ ಚಿತ್ರದ ನಟನೆಗಾಗಿ ನಟ ಡೇನಿಯಲ್ ಡೇ-ಲೆವಿಸ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿಗಳಿಸಿದ್ದಾರೆ. ಲೆವಿಸ್ ರವರಿಗೆ ಇದು ಮೂರನೇ ಆಸ್ಕರ್ ಪ್ರಶಸ್ತಿ. ಈ ಮುಂಚೆ 1989 ರಲ್ಲಿ “ಮೈ ಲೆಫ್ಟ್ ಫೂಟ್” ಮತ್ತು 2007 ರಲ್ಲಿ “ದೇರ್ ವಿಲ್ ಬಿ ಬ್ಲಡ್” ಚಿತ್ರಗಳಲ್ಲಿನ ಅಮೋಘ ಅಭಿನಯಕ್ಕೆ ಪ್ರಶಸ್ತಿ ದೊರೆತ್ತಿತ್ತು.
- ಅತ್ಯುತ್ತಮ ನಟಿ: ಈ ಬಾರಿಯ ಪ್ರಶಸ್ತಿಯನ್ನು ನಟಿ ಜೆನಿಫರ್ ಲಾರೆನ್ಸ್ ಪಡೆದಿದ್ದು, “ಸಿಲ್ವರ್ ಲೈನಿಂಗ್ಸ್ ಪ್ಲೇಬುಕ್” ಚಿತ್ರದಲ್ಲಿನ ಅವರ ನಟನೆಗೆ ದೊರೆತಿದೆ.
- ಆಸ್ಕರ್ ಪ್ರಶಸ್ತಿಯ ಓಟದಲ್ಲಿದ್ದ ಭಾರತದ ಏಕೈಕ ಸ್ಪರ್ಧಿ ಬಾಂಬೆ ಜಯಶ್ರೀ ಅವರಿಗೆ ಪ್ರಶಸ್ತಿ ಕೈತಪ್ಪುವ ಮೂಲಕ ಭಾರತಕ್ಕೆ ನಿರಾಸೆಯಾಗಿದೆ. ಜೆಮ್ಸ್ ಬಾಂಡ್ ಸರಣಿ ಚಿತ್ರದ “ಸ್ಕೈ ಪಾಲ್” ಚಿತ್ರದಲ್ಲಿ ಹಾಡಿರುವ ಬ್ರಿಟನ್ ಗಾಯಕಿ ಅಡಿಲೆ ಈ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

## ವಸ್ವತಿ ದಾಸ್ ಗೆ HDFC ಲೈಫ್ ಸ್ಪೆಲ್ ಬಿ ಇಂಡಿತಾ ಸ್ಪೆಲ್ ಪ್ರಶಸ್ತಿ

ಟೈಮ್ಸ್ ಆಫ್ ಇಂಡಿಯಾದ ಪ್ರಾಯೋಜಕತ್ವ ಹೊಂದಿರುವ HDFC ಲೈಫ್ ಸ್ಪೆಲ್ ಬಿ ಇಂಡಿಯಾ ಸ್ಪೆಲ್ (Life Spell bee India Spell) ಪ್ರಶಸ್ತಿಯಲ್ಲಿ ಗುವಾಹಾಟಿಯಾ ವಸ್ವತಿ ದಾಸ್ ಪ್ರಥಮ ಸ್ಥಾನ ಗಳಿಸಿದರು. ಬೆಂಗಳೂರಿನ ದೆಹಲಿ ಇಂಗ್ಲೀಷ್ ಸ್ಕೂಲ್ ನ ಬಾಲಕಿ ಅತ್ರೀಯಾ ಘೋಷಲ್ ರವರು ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

- ಇಂಗ್ಲೀಷ್ ಪದಗಳನ್ನು ಸರಿಯಾಗಿ ಬರೆಯುವ ಸಾಮರ್ಥ್ಯವನ್ನು ಗುರುತಿಸುವ ಈ ಸ್ಪರ್ಧೆಯಲ್ಲಿ ದೇಶದ 35 ನಗರಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಉತ್ತಮ ಅಂಕ ಗಳಿಸಿದ 16 ವಿದ್ಯಾರ್ಥಿಗಳಿಗೆ ಮುಂಬೈಯಲ್ಲಿ ಫೈನಲ್ ಪರೀಕ್ಷೆಯನ್ನು ಏರ್ಪಡಿಸಲಾಗಿತ್ತು.
- ಮೊದಲ ಸ್ಥಾನಗಳಿಸಿದ ದಾಸ್ ರವರಿಗೆ ರೂ.2 ಲಕ್ಷ ಬಹುಮಾನಗಳ ಜೊತೆಗೆ ತನ್ನ ಪೋಷಕರೊಂದಿಗೆ ಸ್ಕ್ರಿಪ್ಸ್ ನ್ಯಾಷನಲ್ ಸ್ಪೆಲ್ಲಿಂಗ್ ಬಿ ಶೋ ನೋಡಲು ವಿಮಾನ ಟಿಕೆಟ್ ಸಹ ದೊರೆಯಲಿದೆ.
- ಮೊಬೈಲ್ ಗಳಲ್ಲಿ ಎಸ್‌ಎಂಎಸ್ ಚಟಕ್ಕೆ ಗೀಳು ಬಿದ್ದಿರುವ ಇತ್ತೀಚಿನ ಯುವ ಪೀಳಿಗೆಯಲ್ಲಿ ಸರಿಯಾಗಿ ಇಂಗ್ಲೀಷ್ ಪದಗಳನ್ನು ಬರೆಯಲು ಆಗುತ್ತಿಲ್ಲ. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಇಂಗ್ಲೀಷ್ ಜ್ಞಾನವನ್ನು ಹೆಚ್ಚಿಸಲಿವೆ ಎಂಬುದನ್ನು ಕಾರ್ಯಕ್ರಮದ ರೂವಾರಿ ಸಿದ್ದಾರ್ಥ ಗುರು ಹೇಳಿದ್ದಾರೆ.

**ಅನಿವಾಸಿ ಭಾರತೀಯ ಸುಗತ ಮಿತ್ರ ಗೆ ಒಲಿದ TED ಪ್ರಶಸ್ತಿ**

ಶೈಕ್ಷಣಿಕ ಕ್ಷೇತ್ರಕ್ಕೆ ಆಗಾಧ ಕೊಡುಗೆ ನೀಡಿರುವ ಅನಿವಾಸಿ ಭಾರತೀಯ ಸುಗತ ಮಿತ್ರ ರವರಿಗೆ TED ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿಯು 1 ಮಿಲಿಯನ್ ಡಾಲರ್ ನಗದನ್ನು ಒಳಗೊಂಡಿದೆ. ದೆಹಲಿಯ ಕೊಳಚೆ ಪ್ರದೇಶದ ಮಕ್ಕಳಿಗೆ ಕಂಪ್ಯೂಟರ್ ತರಬೇತಿ ನೀಡುವ ಮೂಲಕ ಕ್ರಾಂತಿಯನ್ನು ಆರಂಭಿಸಿದ ಮಿತ್ರರವರು "ಹೋಲ್ ಇನ್ ದಿ ವಾಲ್" (Hole in the Wall) ಎಂಬ ಪ್ರಯೋಗದಿಂದ ವಿಶ್ವ ಪ್ರಸಿದ್ಧಿ ಹೊಂದಿದ್ದಾರೆ. ಹೋಲ್ ಇನ್ ದಿ ವಾಲ್ ಪ್ರಯೋಗದಲ್ಲಿ ಮಿತ್ರರವರು ದೆಹಲಿಯ ಕೊಳಚೆ ಪ್ರದೇಶದ ಗೋಡೆಯೊಂದಕ್ಕೆ ಕಂಪ್ಯೂಟರ್ ನ್ನು ಅಳವಡಿಸಿದರು. ಈ ಕಂಪ್ಯೂಟರ್ ನ್ನು ಮಕ್ಕಳಿಗೆ ಅವರಿಷ್ಟದಂತೆ ಬಳಸಲು ಬಿಟಡುವ ಮೂಲಕ ಮಕ್ಕಳು ಹೇಗೆ ತಮ್ಮಷ್ಟಕ್ಕೆ ತಾವೇ ಕಂಪ್ಯೂಟರ್ ಬಳಕೆಯನ್ನು ಕಲಿಯುತ್ತವೆ ಎಂಬುದನ್ನು ತೋರಿಸಿಕೊಟ್ಟರು. ಇವರ ಪ್ರಯೋಗದಿಂದ ಸ್ಫೂರ್ತಿ ಪಡೆದ ವಿಕಾಸ್ ಸ್ವರೂಪ್ ರವರು Q & A ಎಂಬ ಪುಸ್ತಕವನ್ನು ಬರೆದರು ಮುಂದೆ ಈ ಪುಸ್ತಕವನ್ನು ಆಧರಿಸಿ "ಸಲ್ಮಂ ಡಾಗ್ ಮಿಲೇನಿಯರ್" ಚಿತ್ರವನ್ನು ನಿರ್ಮಿಸಲಾಯಿತು.

TED ಪ್ರಶಸ್ತಿ:

- ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಠ ಸಾಧನೆ ಮಾಡಿದವರಿಗೆ ನೀಡಲಾಗುವು ಈ ಪ್ರಶಸ್ತಿಯನ್ನು ಈ ಹಿಂದೆ ಆಮೆರಿಕಾದ ಮಾಜಿ ಅಧ್ಯಕ್ಷರಾದ ಬಿಲ್ ಕ್ಲಿಂಡನ್, ಮಾಹಿತಿ ತಂತ್ರಜ್ಞಾನ ದುರೀಣ ಲ್ಯಾರಿ ಪೇಜ್ ಮತ್ತು ಪ್ರಕೃತಿ ತಜ್ಞ E O ವಿಲ್ ಸನ್ ರವರಿಗೆ ನೀಡಲಾಗಿತ್ತು. ಆಗ ಈ ಪ್ರಶಸ್ತಿಯ ಮೊತ್ತ 1,00,000 ಡಾಲರ್ ಮಾತ್ರ.